ಸಾಹಿತ್ಯ ದಾಸೋಹ – 243

ಸಂಚಿಕೆ 67 – ಡಿಸೆಂಬರ್ 2025 - 08.11.2025ರ ದಾಸೋಹದ ಬರಹಗಳ ಸಂಕಲನ

ಐದು ಪುಸ್ತಕಗಳ ಬಿಡುಗಡೆ



ನನ್ನ ಅಪ್ಪ ಕೆಎಸ್‌ನ # ಹಾಸ್ಯ ಲಾಪ # ಚಿರಂತನ ಬಿಂಬ

ಕಥಾಸುಧೆಯ ಒಡಲು # ಅಯೋಧ್ಯಾ ಕಾಶಿ ಭೂತಾನ್ ಆಧ್ಯಾತ್ಮಿಕ ಪ್ರವಾಸ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

243ನೆಯ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳನ್ನೊಳಗೊಂಡ ಸಂಚಿಕೆ ಇಲ್ಲಿದೆ. 'ಕವಿಮನ' ಅಂಕಣದ ಕವನಗಳನ್ನು ಹೊರತುಪಡಿಸಿದರೆ, ಇತ್ತೀಚೆಗೆ ದಾಸೋಹದಲ್ಲಿ ಪ್ರಸ್ತುತಪಡಿಸುವ ಕವನಗಳ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನಿಸಬಹುದು. ಈ ಬಾರಿಯ ದಾಸೋಹದಲ್ಲಿ ಓದಿದ ಕವನಗಳ ಸಂಖ್ಯೆ ಕೇವಲ ಎರಡು ಮಾತ್ರ..

ಏಕೆ ಹೀಗೆ ಎಂಬುದು ಚಿಂತಿಸಬೇಕಾದ ವಿಷಯ. ನಮ್ಮ ಸದಸ್ಯರು ವಿಶೇಷ ಅಭಿಯಾನಗಳಲ್ಲಿ ತೋರುವಷ್ಟೇ ಉತ್ಸಾಹ, ಪೈಪೋಟಿ, ಸ್ಪಂದನೆಗಳನ್ನು ಪ್ರತಿ ತಿಂಗಳಿಗೊಮ್ಮೆ ನಡೆಯುವ ದಾಸೋಹದಲ್ಲಿಯೂ ತೋರಿ, ಕತೆ, ಕವನ, ಪ್ರಬಂಧ, ವಿಡಂಬನೆ, ಹಾಸ್ಯ ಲೇಖನ ಹೀಗೆ ವೈವಿಧ್ಯಮಯ ಬರಹಗಳನ್ನು ರಚಿಸಿ, ವಾಚಿಸಬೇಕೆಂಬುದೇ ನಮ್ಮ ಆಶಯ.

243ನೆಯ ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲರ ಪ್ರಸ್ತುತಿಗಳನ್ನೂ ವಿಶ್ಲೇಷಿಸಿದ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರಿಗೂ, ಎಲ್ಲ ಪ್ರಸ್ತುತಿಕಾರರಿಗೂ ಮತ್ತು ತಾಂತ್ರಿಕ ನೆರವು ನೀಡಿದ ಎಲ್ಲರಿಗೂ ನಮ್ಮ ವಂದನೆಗಳು.

ಎಲ್ಲರಿಗೂ ನೂತನ ವರ್ಷ 2026ರ ಶುಭಾಶಯಗಳೊಂದಿಗೆ,

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

21 ಡಿಸೆಂಬರ್ 2025


ದಾಸೋಹದ ಪುಟಗಳಲ್ಲಿ...

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 243

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

ನವೆಂಬರ್ ಮಾಹೆಯ ಹಾಗೂ ೨೪೩ನೆಯ ನೋಡಿಯೋ ಸಾಹಿತ್ಯ ದಾಸೋಹವು ೦೮.೧೧.೨೦೨೫ರ ಶನಿವಾರದಂದು ಇಳಿ ಮಧ್ಯಾಹ್ನ ೩.೩೦ಕ್ಕೆ ಸರಿಯಾಗಿ ಗೂಗಲ್ ಮೀಟ್‌ನಲ್ಲಿ ನಡೆಯಿತು. ಶ್ರೀ ಕೆ.ಎನ್.ಮಹಾಬಲ ಅವರು ದಾಸೋಹದ ಸಂಚಾಲಕತ್ವ ವಹಿಸಿದ್ದರು. ಶ್ರೀಮತಿ ಟಿ.ಆರ್.ಉಷಾರಾಣಿ ಅವರು ಸಭಾಧ್ಯಕ್ಷರು, ಸಂಚಾಲಕ ಮಂಡಳಿ ಮತ್ತು ಸಾಹಿತ್ಯ ದಾಸೋಹಿ ಮಿತ್ರರನ್ನು ಸ್ವಾಗತಿಸಿ ಸಭೆಯ ಅಧ್ಯಕ್ಷರಾದ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರನ್ನು ಪರಿಚಯಿಸಿದರು.



ಸಂಚಾಲಕ ಸಮಿತಿಯ ಪರವಾಗಿ ಮಾತನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ನಮ್ಮ ವೇದಿಕೆಯ ಕನ್ನಡ ಸಾಹಿತ್ಯ ಪರಿಚಾರಿಕೆಯು ಕನ್ನಡ ರಾಜ್ಯೋತ್ಸವ ಆಚರಣೆಯ ನವೆಂಬರ್ ಮಾಸಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳದೆ, ನಿರಂತರ ಕೈಂಕರ್ಯಕ್ಕೆ ತೆರೆದುಕೊಂಡಿರುವುದು ಸಂತೋಷದ ಸಂಗತಿ. ಆದರೆ ಕೆಲವರು ಕೇವಲ ಅಭಿಯಾನದ ಕರೆಗಳಿಗೆ ಮಾತ್ರ ಸ್ಪಂದಿಸಿ ಬರಹಗಳನ್ನು, ಕತೆ-ಕವನಗಳನ್ನು ರಚಿಸುತ್ತಾರೆ. ವೇದಿಕೆಯ ಸದಸ್ಯರೆಲ್ಲರೂ ವರ್ಷಪೂರ್ತಿ ಉತ್ತಮ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಳ್ಳಬೇಕು, ಬರೆಯುವ, ಬರೆದದ್ದನ್ನು ಪ್ರಕಟಿಸುವ ಹಾಗೂ ಕೊಂಡು ಓದುವ ರೂಢಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ೨೧ ಸದಸ್ಯರು ನೋಂದಾಯಿಸಿದ್ದು, ಆ ಪೈಕಿ ೧೭ ಸದಸ್ಯರು ಹಾಜರಿದ್ದು ತಮ್ಮ ಲೇಖನಗಳನ್ನು ವಾಚಿಸಿದರು.

ಅಧ್ಯಕ್ಷರಾದ ಶ್ರೀಮತಿ.ನಾಗರತ್ನ ಚಂದ್ರಶೇಖರ್ ಅವರು ದಾಸೋಹದ ಅಧ್ಯಕ್ಷತೆಯ ಅವಕಾಶ ನೀಡಿದ ಸಂಚಾಲಕ ಮಂಡಳಿಗೆ ವಂದಿಸಿದರು. ವೇದಿಕೆಯ ಸಾಹಿತ್ಯ ಚಟುವಟಿಕೆಗಳನ್ನು, ಪ್ರಬುದ್ಧತೆಯನ್ನು "ಅನುಭವ ಮಂಟಪ"ಕ್ಕೆ ಹೋಲಿಸಿದ ಅವರು, ಈ ಅನುಭವ ಮಂಟಪದಲ್ಲಿ ಒಬ್ಬರಿಗಿಂತ ಒಬ್ಬರು ಹಿರಿಯ, ನುರಿತ ಲೇಖಕರಿದ್ದು ಇದರ ಸದಸ್ಯಳಾಗಿರುವುದೇ ಅತ್ಯಂತ ಹೆಮ್ಮೆಯ ವಿಷಯವೆಂದು ತಿಳಿಸಿ, ದಾಸೋಹದಲ್ಲಿ ಪ್ರಸ್ತುತಪಡಿಸಿದ ಎಲ್ಲರ ಬರಹಗಳನ್ನೂ ಅತ್ಯಂತ ತಾಳ್ಮೆಯಿಂದ ಅವಲೋಕಿಸಿ ತಮ್ಮ ಸ್ಪಂದನೆಯನ್ನು ದಾಖಲಿಸಿದರು. ಸ್ವತಃ ನುರಿತ ಲೇಖಕಿಯಾದ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ ಸಾಕಷ್ಟು ಸಾಹಿತ್ಯ ಸೇವೆಯನ್ನು ಕೈಗೊಂಡಿರುವ ಅಧ್ಯಕ್ಷರ ಮೌಲಿಕ ನುಡಿಗಳು ಸಭೆಯ ಕಳೆಗಟ್ಟಿದವು.

ಶ್ರೀ ಕೆ.ಎನ್.ಮಹಾಬಲ ಅವರ ವಂದನಾರ್ಪಣೆಯೊಂದಿಗೆ ನವೆಂಬರ್ ತಿಂಗಳ ಸಾಹಿತ್ಯ ದಾಸೋಹವು ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ: ಶ್ರೀ ಕೆ.ಎನ್.ಮಹಾಬಲ; ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್;
ವಿಡಿಯೋ ಸಂಸ್ಕರಣೆ : ಶ್ರೀ ಹೆಚ್.ಆರ್.ಗುರುರಾಜ ಶಾಸ್ತ್ರಿ; ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ ಎಸ್.

***

ತಿಂಗಳಬೆಳಕು- 21

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಕಾವ್ಯ ಕಾವೇರಿ

ವರದಿ: ಬೆಂ.ಶ್ರೀ. ರವೀಂದ್ರ

ತಿಂಗಳ ಬೆಳಕು ೨೧'ರ ಅಂಗವಾಗಿ ದಿನಾಂಕ ೨೫, ೨೬ ಮತ್ತು ೨೭ ನವೆಂಬರ್ ೨೦೨೫ರಂದು ಮೂರು ದಿನಗಳು ನೋಡಿಯೋ ಅಂಗಳದಲ್ಲಿ "ಸಸಕಸ ಕಾವ್ಯ ಕಾವೇರಿ" ಎಂಬ ಕಾರ್ಯಕ್ರಮ ನಡೆಯಿತು.


ಪ್ರಾಚಾರ್ಯ ಎಚ್ಚೆಸ್ಕೆ ಅವರ ೧೦೦ನೆಯ ವರ್ಷದ ಹುಟ್ಟಿದ ಹಬ್ಬದ ಆಚರಣೆಯ ಭಾಗವಾಗಿ ಸಮನ್ವಯ ಸಮಿತಿ ಕನ್ನಡವೇ ಸತ್ಯ (ಸಸಕಸ) ವೇದಿಕೆಯು ೨೦೨೦ರ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ 'ಕಾವ್ಯ ಸರಪಳಿ' ಎಂಬ ಷೋ ಕವನ ವಾಚನ ಅಭಿಯಾನವನ್ನು ಹಮ್ಮಿಕೊಂಡಿತ್ತು. ಈ ಸರಪಳಿಯಲ್ಲಿ ಒಟ್ಟು ೮೭ ಕವಿಗಳು ಭಾಗವಹಿಸಿ ಅಂತರ್ಜಾಲ ಮುಖೇನ ತಮ್ಮ ಕವನಗಳನ್ನು ಓದಿದ್ದರು. ಈ ಅಭಿಯಾನದಲ್ಲಿ ಮೂಡಿಬಂದ ೮೮+೦೧ ಕವನಗಳು "ಸರಸಮ್ಮನಿಗೆ ಸತ್ಕಾರ – ಸರಪಳಿಗೆ ನಮಸ್ಕಾರ" ಎಂಬ ಸಂಕಲನದಲ್ಲಿ ಪ್ರಕಟವಾಗಿದೆ. ವಾಚಿತ ಕವನಗಳ ಧ್ವನಿಮುದ್ರಿಕೆ ಹಾಗೂ ಲಿಖಿತ ರೂಪವನ್ನು ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಎಚ್.ಎಲ್..ಗುರುಪ್ರಸಾದ್ ಅವರು ಸಂಗ್ರಹಿಸಿದ್ದರು.




ಈ ಬಾರಿಯ ತಿಂಗಳ ಬೆಳಕು–೨೧ರಲ್ಲಿ ಮೇಲ್ಕಾಣಿಸಿದ ಮೂರು ದಿನಗಳು ಸಂಜೆ ೦೫.೩೦ರಿಂದ ಪ್ರತಿದಿನ ಸುಮಾರು ೩೦ ಕವನಗಳನ್ನು ಗೂಗಲ್‌ಮೀಟ್ ಅಂತರ್ಜಾಲ ವೇದಿಕೆಯಲ್ಲಿ ಪ್ರಸಾರ ಮಾಡಲಾಯಿತು. ಕೊನೆಯ ದಿನ ಅಂದರೆ ದಿನಾಂಕ ೨೭.೧೧.೨೦೨೫ರಂದು ವೇದಿಕೆಯ ಕವಿ ಭ.ರಾ.ವಿಜಯಕುಮಾರ್ ಅವರು ಸಮಾರೋಪ ಉಪನ್ಯಾಸ ನೀಡಿ, ವೇದಿಕೆಯ ಚಟುವಟಿಕೆಗಳು, ಸಂಗ್ರಹದಲ್ಲಿರುವ ಕವನಗಳು ಹಾಗೂ ಒಟ್ಟಾರೆಯಾಗಿ ಕಾವ್ಯ ವ್ಯವಸಾಯದ ಬಗ್ಗೆ ಮಾರ್ಗದರ್ಶಿಯಾದ ವಿಚಾರಗಳನ್ನು ಮಂಡಿಸಿದರು. ಕನ್ನಡ ಕಾವ್ಯದ ಓದು, ರಚನೆಗಳ ಬಗ್ಗೆ ಅವರ ನುಡಿಗಳು ಸಂಗ್ರಹ ಯೋಗ್ಯ. ಶ್ರೀ ವಿಜಯಕುಮಾರ್ ಅವರಿಗೆ ವೇದಿಕೆಯು ಧನ್ಯವಾದಗಳನ್ನು ಅರ್ಪಿಸುತ್ತದೆ.

೨೦೨೦ರಲ್ಲಿ ಸರಪಳಿ ಕವನ ಅಭಿಯಾನವನ್ನು ಮುನ್ನಡೆಸಿದ ಶ್ರೀ ಹುವಾಶ್ರೀ, ಕವನಗಳನ್ನು ಸಂಗ್ರಹಿಸಿದ ಶ್ರೀ ಗುರುಪ್ರಸಾದ್, ತಿಂಗಳ ಬೆಳಕು ಕಾರ್ಯಕ್ರಮದಲ್ಲಿ ಅವುಗಳ ಪ್ರಸಾರಕ್ಕೆ ತಾಂತ್ರಿಕ ಸಹಕಾರ ನೀಡಿದ ಶ್ರೀ ಗುರುರಾಜ ಶಾಸ್ತ್ರಿ ಮತ್ತು 'ಅಂತರಂಗ' ತಂಡದ ಶ್ರೀ ರವಿ ಕುಸಬಿ ಅವರುಗಳಿಗೆ ವೇದಿಕೆಯು ತನ್ನ ಮೆಚ್ಚುಗೆಯನ್ನು ಸೂಚಿಸುತ್ತದೆ.

***





ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ವೇದಿಕೆಯ ಸದಸ್ಯರ
ಐದು ಕೃತಿಗಳ ಬಿಡುಗಡೆ ಸಮಾರಂಭ

ವರದಿ: ರಾಧಿಕಾ ಗುಜ್ಜರ್

18, ಅಕ್ಟೋಬರ್ 2025ರಂದು ಶನಿವಾರ ಬೆಳಿಗ್ಗೆ 10.30ಕ್ಕೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಸಾಹಿತಿ ಸದಸ್ಯರು ರಚಿಸಿದ ಐದು ಪುಸ್ತಕಗಳ ಬಿಡುಗಡೆ ಸಮಾರಂಭವು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಜರುಗಿತು.

ಲೋಕಾರ್ಪಣೆಗೊಂಡ ಐದು ಪುಸ್ತಕಗಳು: ಶ್ರೀ ಕೆ.ಎನ್. ಮಹಾಬಲರು ರಚಿಸಿದ 'ನನ್ನ ಅಪ್ಪ ಕೆಎಸ್‌ನ' ಮತ್ತು 'ಹಾಸ್ಯಾಲಾಪ' ಎಂಬ ಎರಡು ಪುಸ್ತಕಗಳು, ಶ್ರೀಮತಿ ಎಲ್. ಗಿರಿಜಾ ರಾಜ್ ಅವರ 'ಚಿರಂತನ ಭಾವಬಿಂದು' ಎಂಬ ಕವನ ಸಂಕಲನ, ಶ್ರೀ ಹೆಚ್.ಶ್ರೀಧರ ರಾವ್ ಅವರ 'ಅಯೋಧ್ಯಾ, ಕಾಶಿ, ಭೂತಾನ್ ಆಧ್ಯಾತ್ಮಿಕ ಪ್ರವಾಸ' ಎಂಬ ಪ್ರವಾಸ ಕಥನ ಹಾಗೂ ಶ್ರೀಮತಿ ಎಲ್. ಗಿರಿಜಾ ರಾಜ್, ನಾಗರತ್ನ ಚಂದ್ರಶೇಖರ್, ಜಿ.ವಿ.ನಿರ್ಮಲ ಮತ್ತು ಶ್ರೀ ಎನ್.ಶಂಕರ ರಾವ್ ಅವರ ಸಣ್ಣ ಕತೆಗಳನ್ನೊಳಗೊಂಡ 'ಕಥಾಸುಧೆಯ ಒಡಲು' ಎಂಬ ಕಥಾ ಸಂಕಲನ.

ಹಿರಿಯ ಕವಿ ಶ್ರೀ ಬಿ.ಆರ್.ಲಕ್ಷ್ಮಣ ರಾವ್ ಮತ್ತು ಸಾಹಿತಿ ಡಾ. ಕೆ.ಎನ್. ಗಣೇಶಯ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಈ ಐದು ಪುಸ್ತಕಗಳನ್ನು ಲೋಕಾರ್ಪಣೆ ಗೊಳಿಸಿದರು. ಶ್ರೀಯುತರಾದ ಜಿ.ವಿ.ಅರುಣ, ಎನ್.ವಿ. ರಘುರಾಂ, ರಾಮಮೂರ್ತಿ ತೆಮ್ಮೆಮನೆ ಮತ್ತು ಶ್ರೀಮತಿ ಸಂಧ್ಯಾ ರೆಡ್ಡಿಯವರು ಬಿಡುಗಡೆಯಾದ ಪುಸ್ತಕಗಳ ಬಗ್ಗೆ ಪರಿಚಯ ಭಾಷಣ ಮಾಡಿದರು.


ಆರಂಭದಲ್ಲಿ ಶ್ರೀ ಎನ್.ಶಂಕರ ರಾವ್ ಅವರು ಎಲ್ಲರಿಗೂ ಸ್ವಾಗತ ಕೋರಿ, ಮುಖ್ಯ ಅತಿಥಿಗಳನ್ನು ಔಪಚಾರಿಕವಾಗಿ ಸಭೆಗೆ ಪರಿಚಯಿಸಿದರು.







ರಂಗ ಸಾಹಿತಿ ಹಾಗೂ ಅದ್ಭುತ ನಟ ಶ್ರೀ ಧೀರೇಂದ್ರ ಅವರು ಬಿಡುಗಡೆಯಾಗಲಿರುವ ಐದೂ ಪುಸ್ತಕಗಳನ್ನು ಹೊತ್ತು, ಚಮತ್ಕಾರಿಕ ಪದ್ಯ ಹಾಡುತ್ತಾ ರಂಗಪ್ರವೇಶ ಮಾಡಿ ಬಿಡುಗಡೆಯಾಗಲಿರುವ ಪುಸ್ತಕಗಳನ್ನು ವೇದಿಕೆಯ ಮೇಲೆ ಪ್ರತಿಷ್ಠಾಪಿಸಿದರು. ನಂತರ ವೇದಿಕೆಯ ಮೇಲಿದ್ದ ಮುಖ್ಯ ಅತಿಥಿಗಳು ಹಾಗೂ ಗಣ್ಯರು ಎಲ್ಲಾ ಐದು ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದರು.

ಶ್ರೀ ಕೆ.ಎನ್.ಮಹಾಬಲ ಅವರ ರಚಿಸಿದ ಎರಡು ಕೃತಿಗಳಾದ "ನನ್ನ ಅಪ್ಪ ಕೆ ಎಸ್ ನ" ಹಾಗೂ "ಹಾಸ್ಯಾಲಾಪ" ವನ್ನು ಹಿರಿಯ ಸಾಹಿತಿ ಹಾಗೂ ವಿಜ್ಞಾನಿ ಶ್ರೀ ಜಿ.ವಿ.ಅರುಣ ಅವರು ಪರಿಚಯಿಸಿದರು. ಅಗ್ರ ಸಾಹಿತಿಗಳಾದ ಮಾನ್ಯ ಅಡಿಗರು ಹಾಗೂ ಮಲ್ಲಿಗೆ ಕವಿವರ್ಯರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ ಎಂಬುದನ್ನು ಅವರದ್ದೇ ಕಾವ್ಯಗಳ ಸಾಲುಗಳನ್ನು ಸೋದಾಹರಣವಾಗಿ ಮುಂದಿಟ್ಟು ತಮ್ಮ ಮಾತುಗಳನ್ನು ಆರಂಭಿಸಿದ ಅವರು, ವೇದಿಕೆಯಲ್ಲಿ ಆಸೀನರಾಗಿದ್ದ











ಬಿ.ಆರ್.ಲಕ್ಷ್ಮಣರಾಯರ "ಸುಬ್ಬಾಭಟ್ಟರ ಮಗಳೇ" ಕವನ ಓದಿದ ಯಾರಾದರೂ ಸುಬ್ಬಾಭಟ್ಟ ಎನ್ನುವವರು, ತಮ್ಮ ಮಗಳಿಗೆ ಲಕ್ಷ್ಮಣ ಅನ್ನೋರು ಗೊತ್ತೇ ಎಂದು ಕೇಳಿದರೆ ಹೇಗಿದ್ದೀತು ಎಂದು ನಾವು ಊಹಿಸಿಕೊಂಡಾಗ ಉತ್ಪಾದನೆಯಾಗುವ ಸಾಹಿತ್ಯವೇ ಹಾಸ್ಯ ಎಂದು ಮುಂದುವರೆಸಿದರು. "ಮಡಚು ಕುರ್ಚಿ" ಲೇಖನದಲ್ಲಿ ಪ್ರಸ್ತಾಪವಾಗಿರುವ, ಇತ್ತೀಚೆಗೆ ನಮ್ಮನ್ನು ಅಗಲಿದ ವೇದಿಕೆಯ ಹಿರಿಯರಾದ ದಿ. ಎಂ.ಜಿ.ವೆಂಕಟೇಶಮೂರ್ತಿ ಅವರನ್ನು ನೆನೆದರು. ಬಹುರೂಪಿ ಹಾಗೂ ಸಂಸ್ಕೃತಿ ಪ್ರಕಾಶನ ಸಂಸ್ಥೆಗಳನ್ನು ಅಭಿನಂದಿಸಿದರು.



ಶ್ರೀಮತಿ ಎಲ್.ಗಿರಿಜಾ ರಾಜ್ ಅವರ ಕವನ ಸಂಕಲನ "ಚಿರಂತನ ಭಾವಬಿಂದು" ಕೃತಿಯನ್ನು ಸಂವೇದನಾಶೀಲ ವಿಮರ್ಶಕ ಹಾಗೂ ಸಾಹಿತಿ ಶ್ರೀ ಎನ್.ವಿ.ರಘುರಾಂ ಅವರು ಪರಿಚಯಿಸಿದರು. ಕವನದ ಸಾಲುಗಳಲ್ಲಿ ಕಂಡಿರುವ ಸಂವೇದನೆ, ಭಾಷಾ ಸೌಂದರ್ಯ, ಭರವಸೆ, ದಿಟ್ಟ ಹೇಳಿಕೆಗಳು, ವಿಷಯ ವೈವಿಧ್ಯ, ಕಟ್ಟಿಕೊಡುವ ಭಾವಜಗತ್ತನ್ನು ಕವನದ ಸಾಲುಗಳನ್ನೇ ಉದ್ಧರಿಸುತ್ತಾ ವಿವರಿಸಿದರಲ್ಲದೆ, ಪುಸ್ತಕವನ್ನು ಪ್ರಕಟಿಸಿದ ಸಂಸ್ಕೃತಿ ಪ್ರಕಾಶನ ಸಂಸ್ಥೆಯನ್ನೂ ಅಭಿನಂದಿಸಿದರು.



ಶ್ರೀ ಹೆಚ್. ಶ್ರೀಧರ ರಾವ್ ಅವರ ಪ್ರವಾಸ ಕಥನ "ಅಯೋಧ್ಯಾ- ಕಾಶಿ, ಭೂತಾನ್ ಆಧ್ಯಾತ್ಮಿಕ ಪ್ರವಾಸ" ಕೃತಿಯನ್ನು ಲೇಖಕರ ಬಾಲ್ಯ ಸ್ನೇಹಿತ ಹಾಗೂ ಹಿರಿಯ ಭಾಷಾ ವಿದ್ವಾಂಸ ಶ್ರೀ ರಾಮಮೂರ್ತಿ ತೆಮ್ಮೆಮನೆ ಅವರು ಪರಿಚಯಿಸಿದರು. ಶ್ರೀಮತಿ ಮತ್ತು ಶ್ರೀ ಶ್ರೀಧರ ರಾವ್ ಅವರು, ನಾಲ್ಕು ದಂಪತಿಗಳನ್ನೊಳಗೊಂಡ ಎಂಟು ಜನರ ಗುಂಪಿನ ಓರ್ವ ಸದಸ್ಯರಾಗಿದ್ದು ಈ ಗುಂಪು ಐವತ್ತು ವರ್ಷಗಳಿಂದಲೂ ಕೈಗೊಂಡಿರುವ ಪ್ರವಾಸಗಳ ಫಲವೇ ಈ ಸಾಹಿತ್ಯ ಕೃಷಿಗೆ ಇಂಬು ಎಂದು ಹೇಳಿದರು. ಕೃತಿಯಲ್ಲಿ ನಮೂದಾಗಿರುವ ಐತಿಹಾಸಿಕ ವಿವರಗಳು, ಪೇಚಿನ ಪ್ರಸಂಗಗಳು ಹಾಗೂ ಸೃಷ್ಟಿಕರ್ತನ ದೃಷ್ಟಿಯನ್ನು ಅರಿಯುವ ಭಾವನಾತ್ಮಕ ಪಯಣದ ಇರುವಿಕೆಯನ್ನು ಗುರುತಿಸಿದರು.



ಶ್ರೀಮತಿ ಎಲ್.ಗಿರಿಜಾ ರಾಜ್, ಶ್ರೀಮತಿ ನಾಗರತ್ನ ಚಂದ್ರಶೇಖರ್, ಶ್ರೀ ಎನ್. ಶಂಕರ ರಾವ್ ಹಾಗೂ ಶ್ರೀಮತಿ. ಜಿ.ವಿ. ನಿರ್ಮಲ ಈ ನಾಲ್ವರ ವಿವಿಧ ಸಣ್ಣ ಕತೆಗಳನ್ನೊಳಗೊಂಡ ಸಂಕಲನ "ಕಥಾ ಸುಧೆಯ ಕಡಲು" ಕೃತಿಯನ್ನು ಹಿರಿಯ ಜನಪದ ತಜ್ಞೆ ಹಾಗೂ ಸಾಹಿತಿ ಡಾ.ಸಂಧ್ಯಾ ರೆಡ್ಡಿಯವರು ಪರಿಚಯಿಸಿದರು. ಈ ಸಣ್ಣಕತೆಗಳಲ್ಲಿ ಕಂಡುಬಂದ ಸಂದೇಶಗಳು ಹಾಗೂ ನಿರೂಪಣಾ ಕೌಶಲ್ಯವನ್ನು ವಿವರಿಸಿದರು. ಪ್ರತೀ ಕತೆಗಾರರ ಆಯ್ದ ಕತೆಗಳನ್ನು ಉದಾಹರಣೆಯಾಗಿ ಎತ್ತಿಕೊಂಡು ಅವುಗಳ ವಿಶೇಷತೆಗಳತ್ತ ಗಮನ ಸೆಳೆದರು. ಕೃತಿ ಬಿಡುಗಡೆ ಸಮಾರಂಭದಲ್ಲಿ ಹೆಚ್ಚಿನ ಕುರ್ಚಿಗಳನ್ನು ಹಾಕಿಸಿ ಕೂರಲು ಸ್ಥಳಾವಕಾಶ ಕಲ್ಪಿಸಬೇಕಾದ ರೀತಿಯಲ್ಲಿ ಸಭೆ ಸೇರಿಸಿದ ಅಪ್ಪಟ ಸಾಹಿತ್ಯಾಸಕ್ತರ ವೇದಿಕೆಯಾದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವನ್ನು ಶ್ಲಾಘಿಸಿ ಅಭಿನಂದಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜನಪ್ರಿಯ ಹಿರಿಯ ಕವಿ ಶ್ರೀ ಬಿ.ಆರ್.ಲಕ್ಷ್ಮಣ ರಾವ್ ಅವರು ಹೊಸ ಬರಹಗಾರರು ಅಳವಡಿಸಿಕೊಳ್ಳಬೇಕಾದ ಅಧ್ಯಯನದ ಕುರಿತ ಚಿಂತನೆಯೆಡೆಗೆ ಗಮನಸೆಳೆದರು. ತಮ್ಮ ಪ್ರಸಿದ್ಧ ರಚನೆಗಳಾದ "ಏನೀ ಅದ್ಭುತವೇ" ಹಾಗೂ "ಸುಬ್ಬಾಭಟ್ಟರ ಮಗಳೇ" ಕವನಗಳನ್ನು ವಾಚಿಸಿದರು.

ಮುಖ್ಯ ಅತಿಥಿಗಳಾದ ಹಿರಿಯ ಸಾಹಿತಿ ಡಾ. ಕೆ.ಎನ್.ಗಣೇಶಯ್ಯ ಅವರು ಶ್ರೀ ಕೆ.ಎನ್.ಮಹಾಬಲ ಅವರ ಕೃತಿಯಲ್ಲಿ ದಾಖಲಾಗಿರುವ ಭೋಜನದ ಕುರಿತಾದ ಹಾಸ್ಯ ಚಟಾಕಿಯನ್ನು ಸಭೆಯತ್ತ ಸಿಡಿಸಿ ತಮ್ಮ ಮಾತುಗಳನ್ನು ಆರಂಭಿಸಿ, ಬಿಡುಗಡೆಯಾದ ಎಲ್ಲ ಕೃತಿಗಳ ಕುರಿತು ತಮ್ಮ ಮೆಚ್ಚುಗೆ ಸೂಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಬೆಂ.ಶ್ರೀ. ರವೀಂದ್ರ ಅವರು, ಸಮನ್ವಯ ಸಮಿತಿಯ ವಿವಿಧ ಚಟುವಟಿಕೆಗಳು ಮತ್ತು ಅಭಿಯಾನಗಳ ಬಗ್ಗೆ ಪಕ್ಷಿನೋಟ ಬೀರಿದರಲ್ಲದೆ, ವೇದಿಕೆಯ ಸದಸ್ಯರು ನಿರಂತರವಾಗಿ ಸಾಹಿತ್ಯ ರಚನೆಯಲ್ಲಿ ತೊಡಗುವುದರ ಜೊತೆಗೇ, ತಮ್ಮದೇ ಆದ ಕೃತಿಗಳನ್ನು ಪ್ರಕಟಿಸುವಲ್ಲಿಯೂ ಮುಂಚೂಣಿಯಲ್ಲಿರುವುದಕ್ಕೆ ಹರ್ಷ ವ್ಯಕ್ತಪಡಿಸಿ, ಸದ್ಯದಲ್ಲಿಯೇ ನಮ್ಮ ತಂಡದ ಸದಸ್ಯರ ಇನ್ನಷ್ಟು ಕೃತಿಗಳ ಲೋಕಾರ್ಪಣೆಯನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದರು.

ಶ್ರೀ ಶ್ರೀರಂಗರಾಜನ್ ಅವರಿಂದ ಕಾರ್ಯಕ್ರಮದ ನಿರೂಪಣೆ, ಶ್ರೀಮತಿ ರೇಣುಕಾ ದೇಸಾಯಿ ಅವರಿಂದ ವೇದಿಕೆಯ ಹಿನ್ನೆಲೆ ಸಹಾಯ ಹಾಗೂ ಶ್ರೀ ಗುರುರಾಜ ಶಾಸ್ತ್ರಿ ಅವರಿಂದ ವಂದನಾರ್ಪಣೆ ನೆರವೇರಿತು. ರುಚಿಯಾದ ಭೋಜನದೊಂದಿಗೆ ಸಮಾರಂಭವು ಮುಕ್ತಾಯವಾಯಿತು.



***

ಕವಿಮನ

ಮುಗಿಲ ಹೂ

ವ್ಯರ್ಥ ಫಲದಮರ ಶಿಖರದಾಸೆ
ಅರ್ಥ ಕಳಕೊಳುತಲಿದೆ ಭರವಸೆ
ನುಣ್ಣಗೆ ನೀಡಿದವರಿಂದಲೋ,
ಕಣ್ಮುಚ್ಚಿ ನಂಬಿದವರಿಂದಲೋ?
ವಿನಯ ಘನತೆಗಳಿಗೆ ತೂತು
ತೂಕ ತಪ್ಪಿದೆ ಮಾತು
ಆಡಿದವರಿಂದಲೋ,
ತೂಕ ಮಾಡಿದವರಿಂದಲೋ? (1)

ಧೂಳು ಕಸ ಸುಳಿ–
ಗಾಳಿಯಪ್ಪಳಿಸಿದೆ ಮಾಳಿಗೆಯ
ಸೀಳಿ ಗೋಡೆನಡುಗಿ ಬಿರಿದದ್ದು ನೆಲ;
ನೆರೆಹೊರೆಯವರೆದೆಯಲ್ಲ. (2)

ಹಿಗ್ಗಿ ಎದೆ ನಾಗಾಲು ಚಿಮ್ಮು
ಕಕ್ಕೆ ಜಾರಿದೆ ಹಾದಿಯೆಲ್ಲಿ?
ಮುಗ್ಗರಿಸಿ ಯಾರ ದೂರಲಿ?
ನಕ್ಕೆಯನೆ, ತೋರುಬೆರಳನ್ನೆ?
ಕಾಲ ಕಿರುಗಂಟೆ ಗೆಜ್ಜೆ
ತೋಲ ತಪ್ಪಿದೆ ಹೆಜ್ಜೆ
ದೋಷ – ತಾಳ ಕುಟ್ಟುವನದೋ,
ನಟ್ಟುವಾಂಗದ್ದೋ? (3)

ಪಾವಟಿಗೆ ಬಿರುಸುನಡೆ ಬಾಣ
ಜಾಡೆ ಮರೆಯಾಗಿದೆ ಕವಿದು ಮಂಜು
ನೋಡದೆಯು ನಡೆದದ್ದೆ ಹಾದಿ
ನೀಡುಗೈ ಕುರಿತ ಸಂಶಯ ಅನಾದಿ. (4)

ಹಸನು ಗಮಲು ತಾಜಾ
ಪರಿಶುದ್ಧತೆ ಮುಗಿಲ ಹೂ
ನಕಲಿಗೇ ಮೊಗವಾಡ
ಬದಲಿತೇ ಮಾನದಂಡ?
ಅಳುವುದೀಚೆಗೆ ಕವಿತೆ, ತಿಳಿಯದು:
ಕಣ್ಣಹನಿ ಕವಿಯದೋ, ಓದುಗನದೋ ! (5)

ಗಾನ ತಾನ ತಿಲ್ಲಾನ ಘನ
ಏನೀ ಚಿತ್ರ, ಕುಣಿಯಲಾರದೆಲ್ಲರ ನೆಲ
ನಿಜಕು ಚಪ್ಪಟೆಯೇ?
ತಾಳಿ ಯೋಚಿಸಿ–
ಇಹುದಿವೆಲ್ಲ ದಿಟವೆ ಸಟೆಯೆ? (6)

– ಬಿ.ಎಸ್. ಚಂದ್ರಶೇಖರ್
05.11.2025

ಕವಿಮನ

ಪಟ್ಟದ ಕಲ್ಲು – ಮೆಟ್ಟಿಲ ಕಲ್ಲು

ಉದ್ದಕೂ ಕೊರಗುತಿವೆ
ಮೆಟ್ಟಿಲಾ ಕಲ್ಲುಗಳು
ತಮ್ಮೆದೆಯ ಮೆಟ್ಟುತ್ತ ಮೇಲೇರಿ,
ಪಟ್ಟದ ಕಲ್ಲ ನಮಿಸಿ ಸಾಗುವರ
ಕೇಳುತ್ತ ಮತ್ತದೇ ಅದೇ ಪ್ರಶ್ನೆ.

ಮೆಟ್ಟಿಲೇನು ಪಟ್ಟವೇನು?
ಒಂದೆ ಗಿರಿ ಮಡಿಲಲ್ಲಿ
ಹುಟ್ಟಿ ಬೆಳೆದೊಂದೆ ಶಿಲೆಯಲ್ಲವೆ?
ಚಳಿ ಗಾಳಿ ಮಳೆಯಲ್ಲಿ
ಬವಣೆಪಡುವೆವು ನಾವು,
ಬೇಸಗೆಯ ಬಿಸಿಲಲ್ಲಿ ಅದೆ ಚಾದರ.

ಪಟ್ಟದಾ ಕಲ್ಲಿಗೋ ಸುತ್ತಲೂ ಗೋಡೆಗಳು
ಜೊತೆಗೆ ಮೇಲ್ಚಾವಣಿಯು ಬೆಚ್ಚಗಿರಲು
ಜೊತೆಗೆ ಬೀಗವನಿಕ್ಕಿ ಬಲು ಭದ್ರಗೊಳಿಸುವಿರಿ
ತಾರತಮ್ಯದ ಪರಿಯು ಸರಿಯೇನು ನಿಮಗೆ?

ದಿನವೂ ಸಾಗುವ ಮಂದಿ
ಸಮಜಾಯ್ಷಿ ನೀಡಿದರು
ಅವರವರು ಪಡೆದುದನು ಅವರವರೆ ಉಣ್ಣುವುದು
ಹೆಚ್ಚೇನೂ ತಿಳಿಯದು ಪಾಮರರು ನಾವು
ಧರ್ಮವನು ತಿಳಿಯಲಿಕೆ ಬಲ್ಲವರ ಕೇಳುವುದು
ಪಾಪ ಪುಣ್ಯದ ಲೆಕ್ಕ ನಮಗಷ್ಟು ಸಾಕು.

ಪಟ್ಟದಾ ಕಲ್ಲಿಗೆ
ದೇವನಾಕೃತಿ ತಂದ ಶಿಲ್ಪಿಯೇ
ಒಮ್ಮೆ ತಾ ನಡೆತಂದನಲ್ಲಿ
ಮೆಟ್ಟಿಲ ಕಲ್ಲುಗಳು ಸಿಟ್ಟಿನಲಿ ಕೇಳಿದವು
ಮೇಲು ಕೀಳಿನ ಭೇದ ತರವಲ್ಲ ನಿನಗೆ.
ಎಲ್ಲವೂ ನಿನ್ನಿಂದ ನಿನ್ನಂತೆ ಭಕ್ತಜನ
ಧಿಕ್ಕಾರ ನಿನಗೆಂದು ಕೂಗಿ ಹೇಳಿದವು.

ಶಿಲ್ಪಿ ತಾ ನಸುನಕ್ಕ
ಎಂಥ ಮೌಢ್ಯದ ಪ್ರಶ್ನೆ
ಉತ್ತರವು ಬಹು ಸರಳ ತಿಳಿಯದೇನು?
ನೋವಿನನುಭವ ಪಡೆದ ಕಾಯ ಹಿರಿದು.
ಅರ್ಥವಾಗದು ನಮಗೆ ನಿನ್ನ ಮಾತಿನ ಮರ್ಮ
ಒರಟು ಮಂದಿಯು ನಾವು ಬಿಡಿಸಿ ಹೇಳು.

ಗಂಭೀರ ದನಿಯಲ್ಲಿ
ಶಿಲ್ಪಿ ಹೇಳಿದನಾಗ–
ಆ ರೂಪ ಪಡೆಯಲಿಕೆ ಬವಣೆ ಎಂತು!
ನಿಮ್ಮ ಆಕಾರಕ್ಕೆ ಬಲು ಕಮ್ಮಿ ಉಳಿ ಪೆಟ್ಟು.
ದೇವನಾಕಾರಕ್ಕೆ ಬೇಕು ಹಲ ಪೆಟ್ಟು.

– ಕೆ.ಎನ್. ಭಗವಾನ್

12.11.2025

ಕವಿಮನ

ಅಜೇಯ

ಇದೊಂದು ಮಹತ್ಗಾಥೆ...
ಭಾವ ಸಂಭವಗಳ
ಸ್ವಭಾವ ಸಂಸ್ಕಾರಗಳ
ಸಂಘರ್ಷ ಸಂಕಲ್ಪಗಳ
ನಿರಂತರ ಗಾಥೆ!

ಸತ್ಯತೆಯ ಕಂಡೇವೆ?
ಎಂದೆಂದಿಗೂ
ಮಣ್ಣಿನ ಶಕ್ತಿಯೇ
ಮನಸಿನ ಶಕ್ತಿ!

ಚಿಂತನೆಗಳನುಸರಣೆಗೆ
ಅನುಮೋದನೆ
ಬೇಕಿಲ್ಲದ
ಸ್ವಾವಲಂಬನೆಯೇ ಶಕ್ತಿ!

ದೃಷ್ಟಿ, ಸೃಜನಶೀಲತೆ
ನಿರ್ಧಾರ, ದೃಢತೆ,
ಕ್ರಿಯಾಶೀಲತೆ
ಮುನ್ನಡೆಗಳೇ ಶಕ್ತಿ!

ಉರುಳು ಶತಮಾನಗಳಲಿ
ಹಾಕಿದ ಪ್ರತಿ ಹೆಜ್ಜೆಯ
ಚರ–ಪರ–ವೂ
ಒಂದು ಘೋಷಣೆ!
ಸತತ ಬೆಳವಣಿಗೆಗೆ
ಪೋಷಣೆ!

ಖರೀದಿಸಲಾಗದ
ಕದಿಯಲಾಗದ
ಕಷ್ಟಗಳ ಕಡಲಿನಲ್ಲಿ
ಹುಟ್ಟುತ್ತದೆ ಇಚ್ಛಾಶಕ್ತಿ!
ಸ್ವಾಭಿಮಾನ?
ಪ್ರತಿ ಉಸುರಿನಲ್ಲಿ!

ಜ್ಞಾನ, ಆತ್ಮಸ್ಥೈರ್ಯಗಳಿಗೆ
ಜೊತೆಕೊಟ್ಟದ್ದು
ಸಹನೆ, ಪ್ರಾಮಾಣಿಕತೆಯ
ಆದಿಮಂತ್ರ!

ಧರ್ಮದ ಮಣ್ಣಿನ ಮೇಲೆ
ಮೂಡುವ
ಬರಿಗಾಲ ಹೆಜ್ಜೆ–ಗುರುತುಗಳು
ಮಾಸುವುದೇ ಇಲ್ಲ!

ಆರ್ಭಟದ
ಬೊಬ್ಬೆಯಲಿ
ಆಕ್ರಮಣ, ದಮನದಲಿ
ಸೊರಗಿದರೂ
ಹೂಂಕರಿಸಿ ಮೇಲೇಳಲು
ಕುಮ್ಮಕ್ಕು ಹಲವಿಧ!

ಅಸ್ಮಿತೆಯ ಮರು ಸ್ಥಾಪನೆಗೆ
ಸತತ ಕೂಗು...
ತ್ಯಾಗ, ಸಂಗ್ರಾಮ, ಕ್ರಾಂತಿ
ಎಂಬಸ್ತ್ರಗಳ ಪ್ರಯೋಗ

ಮುಂದೊಮ್ಮೆ
ಬಿಡುಗಡೆಯ ಹೊಂಬೆಳಕು
ಅನುಭವಿಸಿದ್ದು
ಗೆಲುವು, ನಲಿವು ಜೊತೆಗಿಷ್ಟು ನೋವು!

ಹಸಿವನಿಂಗಿಸಿ
ಮನಸು ಹಿಗ್ಗಲಿಸಿ
ಎದೆ ಸೆಟೆಸಿ
ಮುಂದೆ ಮುಂದೆ
ನಡೆದಾಗ
ಹಾಕಿದ್ದು ಜಯಕಾರ
ಹಾಡುತ್ತ ಬಂದದ್ದು
ಜಯ ಹೇ!

ಮುಂದೆ ಹಚ್ಚುತ್ತ ಇದ್ದದ್ದು
ರಂಗು ರಂಗಿನ
ವೈವಿಧ್ಯಮಯ
ಪ್ರಗತಿ–ಪ್ರಣತಿಗಳ
ಸಾಲು ಸಾಲು

ಎಲ್ಲಕ್ಕೂ
ಉತ್ಸಾಹ, ಆಶಯಗಳೇ
ಎಣ್ಣೆ ಬತ್ತಿಗಳು!
ಇಟ್ಟದ್ದು...
ಶೀಘ್ರ, ತೀಕ್ಷ್ಣ
ಹೆಜ್ಜೆಗಳು

ಭಿನ್ನತೆಗಳ ಬದುಕಿನಲು
ಸಂಯಮವೆ ರೀತಿ
ಎಲ್ಲಿ, ಯಾರಲ್ಲಿದೆ?
ಶುದ್ಧ–ವೈಶಾಲ್ಯ ನೀತಿ

ಹೊಸ ನೆನಪುಗಳು?
ಅನೇಕ
ಯಂತ್ರ–ಮಾಂತ್ರಿಕರ
ಅಂತರಿಕ್ಷದಲಿಟ್ಟು
ಶೀತಲ–ಶ್ವೇತ
ನೆಲವನರಸಿದ ಹೆಜ್ಜೆ
ಮಹತ್ತರವಲ್ಲದೆ
ಮತ್ತಿನ್ನೇನು?

ಗಳಿಗೆ ಮಾತ್ರದಲಿ
ರಕ್ಕಸನ ಅಟ್ಟಹಾಸ
ದಮನ–ಪ್ರಹಾರದ
ದೈತ್ಯಹೆಜ್ಜೆ,
ಗುರುತು ಬಿಡಲಾರದೇನು?

ಮುಂದೂ ಗುರುತುಗಳು
ಮೂಡುತ್ತಲೇ ಇರುತ್ತವೆ!

ಇದನೆಲ್ಲ ಕತೆಯೆನ್ನಲಾದೀತೆ?
ಇಲ್ಲ... ಇದೊಂದು
ಅಮೋಘ ಅಜೇಯ
ಸದ್ಧರ್ಮ ಚರಿತೆ!

– ಕೆ.ಆರ್.ಎಸ್. ಮೂರ್ತಿ
19.11.2025

ಕವಿಮನ

ಮೆಲುನಗೆಯ ಮಂದಮಾರುತ

ತಥಾಗತ ಮೆಲು ನಕ್ಕ
ಆನಂದನ ಪ್ರಶ್ನೆಗೆ
ದೇವರಿದ್ದಾನೆಯೇ?

ಮೊನ್ನೆ ಮರಳಿ ಬಂದಿದ್ದ ತಥಾಗತ
ಅದೇ ಆಲದಮರ
ದೊಡ್ಡ ಹಾಲೆಯ ಕಿವಿ ಕಡಕು
ಕಲ್ಪವೃಕ್ಷ ಎತ್ತರದ ನಿಲುವು
ನಗೆಮೊಗದ ಚೆಲುವು ಅರ್ಧನಿಮೀಲಿತ ನೇತ್ರ
ನಿಧಾನದಿ ಓಲಾಡುವ ಕಾಷಾಯ
ಧ್ಯಾನಸ್ಥ ಶಾಕ್ಯಮುನಿಯನಾರೋ ಕೇಳಿದರು
ದೇವರಿದ್ದಾನೆಯೇ ?
ಮೆಲು ನಕ್ಕ
ಆದರೆ ಆನಂದ ಅಲ್ಲಿರಲಿಲ್ಲ

ಇದ್ದಕ್ಕಿದ್ದಂತೆ ಮುಗಿಲೆತ್ತರಕೆ ಎದ್ದಿತು ಸುಂಟರಗಾಳಿ
ಸರಸರ ಸುರಸುರ ತಿರುಗುತ್ತ ಹೊತ್ತು ಧೂಳುಧೂಸರ
ತರಗು ತಿರುಗುಣಿ ಮಡುವು
ರಾಚಿ ಕಣ್ಣಿಗೆ ಮರಳ ಕಣ
ದಾರಿ ಮುಸುಕು ಮುಸುಕುಧಾರಿ

ನಗರದಲ್ಲೀಗ ಗುಲ್ಲೋಗುಲ್ಲು
ಯಾರೋ ಪರ ಊರಿನವನಂತೆ
ದೇವರಿಲ್ಲವೆಂದನಂತೆ
ಹೇಗೆ
ಇಲ್ಲೇನು ಮಾಡುವವನು
ಚಾರ್ವಾಕನೇ ನಾಸ್ತಿಕನೇ
ನಮ್ಮ ನಂಬಿಕೆಯ ಮೇಲೆ ದಾಳಿ
ಉರುಳಿಸಿದನಾವ ದಾಳ
ಉರುಳಿಸಿ ಬಿಟ್ಟನೆ
ಶತಶತಮಾನದ ಆಲದ ಮರ

ನಮ್ಮ ದೇವರನು ನಂಬದವರನು ಕತ್ತರಿಸಿಬಿಡಿ
ನಮಗೇ ದಾರಿ ಬಿಡಿ
ಕಟ್ಟೋಣ ಮತ್ತೆ ಅಂದಿನರಮನೆ

ವಾಟ್ಸಪ್ಪು ಫೇಸ್‌ಬುಕ್ಕು ಯುಟ್ಯೂಬಿನಲೆಲ್ಲ ಇದುವೆ ಸುದ್ದಿ
ದೂರದರ್ಶನ ವಾಹಿನಿಗಳಿಗೆ ಬ್ರೇಕಿಂಗ್ ನ್ಯೂಸು
ಗಳಿಗಳಿಗೆ ಬಿತ್ತರ
ಹಳತು ಹೂರಣಕೆ ಹೊಸರುಚಿಯ ಮಾಲೀಸು
ಈಗ ಎಲ್ಲಾ ಸಲೀಸು

ಎಲ್ಲೆಲ್ಲೋ ನಡೆಯಿತು ಗುಪ್ತಸಭೆ
ಯಾರಿವನು ದಾಳಿಕೋರನೋ
ದಂಗೆಕೋರನೋ ದಗಾಕೋರನೋ
ಒಳಸಂಚುಕೋರನೋ ಸ್ಥಿರತೆಯ ಕದಡುವವನೋ
ಬುಡಮೇಲು ಕೃತ್ಯವೋ.... ಹೀಗೇ ಬಿಡಬಾರದು

ಗುಂಪು ಗುಂಪುಗಳು ಕೂಡಿದವು
ಪ್ರತಿಭಟನೆಗಳು ಮೊಳಗಿದವು
ಇವ ಅವನಾಗಿರಬಹುದು
ಅವರು ಹಾಗೇ ಎಚ್ಚರ
ಗೂಢಚಾರ ಡಬಲ್.. ಏಜೇಂಟ್

ಊರು ಗಲಭೆಯ ಗೂಡಾಯ್ತು
ಕೋಮುದಂಗೆ ಬಂದ್ ಬಂದ್..
ದಾರಿ ದಾರಿಯಲಿ ಹೆಣ ಹೆಣ
ರಕ್ತದ ಕೋಡಿ ಹರಿದ ಜನುಮದ ಜೋಡಿ

ಸಿದ್ದವೊಂದು ಎಸ್‌ಐಟಿ
ಮಾಸ್ಕು ಮಾನವರ ತಲಾಷು
ಊರ ತುಂಬಾ ಪೋಲಿಸರು ಪತ್ತೆದಾರರು
ಮಾತು ಮಾತಿಗೂ ಕಿವಿ ಎಲೆಕ್ಟ್ರಾನಿಕ್ ಕಣ್ಗಳ ಸರ್ಪಗಾವಲು

ಅಮಾತ್ಯ ಚಾಣಕ್ಯರ ಸಭೆ
ತಲೈವರ ಸುದ್ದಿಗೋಷ್ಟಿ
ಸಿಂಹಾಸನಗಳು ಅಲುಗಾಟ
ಸಂಚು ಒಳಸಂಚುಗಳ ಮೇಲಾಟ

ಜಗದ ಜನರ ನೋವನಳಿಸಲೆಂದು ಅರಮನೆಯ ತೊರೆದಿದ್ದ
ತಥಾಗತನೀಗ ಊರು ದಾಟಿದ್ದ

ಮೆಲುನಗೆಯ ಮಂದಮಾರುತವು
ಸುಳಿಯಾಗಿ ಚಂಡವಾಗಿತ್ತು ಇಂದಿನರಮನೆಯ
ಬುಡಮೇಲು ಮಾಡಿತ್ತು.

–ಬೆಂ.ಶ್ರೀ. ರವೀಂದ್ರ
26.11.2025

ಬಿಡುಗಡೆಯ ಬಿಂಕ – ಒಪ್ಪಿಕೊಳ್ಳುವಿರಾ ಸವಾಲು

– ಬೆಂ.ಶ್ರೀ. ರವೀಂದ್ರ

೨೦೨೪, ಅಕ್ಟೋಬರ್, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣಪದಲ್ಲಿ ಜಾಗೃತಿ ಟ್ರಸ್ಟ್‌ನ "ನಗೆ ಹಬ್ಬ". ಹಿರಿಯ ಮಿತ್ರ, ಹಾಸ್ಯ ಸಾಹಿತಿ ಶ್ರೀ ಎಂಎಸ್‌ಎನ್ ಅವರ "ಹಾಸ್ಯ ಕಾದಂಬರಿ" ಬಿಡುಗಡೆಯ ಸಮಯ. ನಾನು ಆಗ ತಾನೇ ಸಭಾಂಗಣ ಪ್ರವೇಶಿಸಿ ಕುಳಿತುಕೊಳ್ಳುತ್ತಿದ್ದೆ. ವೇದಿಕೆಯ ಮೇಲಿದ್ದ ಎಂಎಸ್‌ಎನ್ "ರವೀಂದ್ರ ಅವರು ವೇದಿಕೆಗೆ ಆಗಮಿಸಿ, ಪುಸ್ತಕ ಬಿಡುಗಡೆ ಮಾಡಬೇಕು" ಎಂದು ಘೋಷಿಸಿದರು. ಇದು ನನಗೆ ತೀರಾ ಅನಿರೀಕ್ಷಿತ. "ಸರಿ", ಸಭೆಯಲ್ಲಿ ಕರೆದಿದ್ದಾರೆ, ಸುವರ್ಣಸಂಧಿ ತಪ್ಪಿಸಲಾದೀತೇ! ಆಶ್ಚರ್ಯ ಮತ್ತು ಸಂತಸದಿಂದ ಕೂಡಿ ವೇದಿಕೆಗೆ ನಡೆದೆ. ವೇದಿಕೆಯ ಗಣ್ಯರ ಮಧ್ಯೆ ನಿಂತೆ. ಎದುರಿನ ಟೀಪಾಯ್ ಮೇಲೆ ಒಂದು ಹಾವಿನ ಬುಟ್ಟಿಯನ್ನು ತಂದಿರಿಸಿದರು. ಪುಂಗಿ ಊದ ತೊಡಗಿದರು!! ಎಂಎಸ್‌ಎನ್ ಹಾವಿನ ಬುಟ್ಟಿಯ ಮುಚ್ಚಳ ತೆರೆಯಿರಿ ಅನ್ನುತ್ತಿದ್ದಾರೆ. "ನೀವು ಎಂತೆಂತಹ ಮ್ಯಾನೇಜ್ಮೆಂಟ್ ಕುಳಗಳನ್ನು ಹೆದ್ರಿಸಿದ್ದೀರಿ. ಇದೇನ್ಮಹಾ. ತೇಗಿರೀ" ಅಂದ್ರು ಎಂಎಸ್‌ಎನ್. ಎಲ್ಲರೂ ಅಲ್ಲಿಯೇ ನೋಡುತ್ತಿದ್ದಾರೆ. ಸಭಾಂಗಣದಲ್ಲಿ ಕುತೂಹಲ ಮನೆಮಾಡಿದೆ!! "ಏನಿದು" ಎಂಬ ಅಳಕು ನನಗೆ. ವೇದಿಕೆಯ ಮೇಲಿದ್ದವರು "ತೆರೆಯಿರಿ... ತೆಗೆಯಿರಿ" ಅನ್ನುತ್ತಿದ್ದಾರೆ. ಧೈರ್ಯಮಾಡಿ ಮುಚ್ಚಳ ತೆರೆದೆ. "ಥಟ್ಟಂತ" ಬುಟ್ಟಿಯೊಳಗಿಂದ ನಾಗರ ಹೆಡೆ ಎತ್ತಿತು. ಒಂದರೆಕ್ಷಣ ಜಂಘಾಬಲ ಉಡುಗಿತು!!.

ಗಮನಿಸಿದೆ ಗಮನಿಸಿದೆ!! ಅದು ಪ್ಲಾಸ್ಟಿಕ್ ನಾಗರ. ಬುಟ್ಟಿಯೊಳಗೆ ಪುಸ್ತಕಗಳು ಆರಾಮವಾಗಿ ಕುಳಿತ್ತಿತ್ತು. ಸಭೆಯಲ್ಲಿ ದೊಡ್ಡ ಚಪ್ಪಾಳೆಯ ಸುರಿಮಳೆ.

ಮತ್ತೆ, ಈ ಬಾರಿ ಅಕ್ಟೊಬರ್ ೨೬ರಂದು, ಜಾಗೃತಿ ಟ್ರಸ್ಟ್‌ನ ನಗೆ ಹಬ್ಬ. ಎಂಎಸ್‌ಎನ್ ೭೬. ಮತ್ತೆ ಎಂಎಸ್‌ಎನ್ ಪುಸ್ತಕ ಬಿಡುಗಡೆ. ನನಗೆ ಮತ್ತೊಮ್ಮೆ ಅಪೂರ್ವ ಅವಕಾಶ. ಈ ಬಾರಿಯ ಪುಸ್ತಕ "ಬಂಟಿ ಹೇಳಿದ ಕಥೆಗಳು". ನಮ್ಮ ಸಮನ್ವಯ ಸಮಿತಿಯ ವೇದಿಕೆಯಲ್ಲಿ ಪ್ರಸ್ತುತಪಡಿಸಿದ ವಿಶ್ವಾವಸು ಶ್ರಾವಣದ ಮಕ್ಕಳ ಕಥೆಗಳ ಸಂಕಲನ. ಒಟ್ಟು ಐವತ್ತು ಪುಟ್ಟ ಕಥೆಗಳು. ಪ್ರತಿ ಕಥೆಗೂ ಅರ್ಥವತ್ತಾದ ಸುಂದರ ರೇಖಾಚಿತ್ರಗಳು. ಆಕರ್ಷಕ ಮುಖಪುಟ. ನೋಡಿದರೆ ಖುಷಿಯಾಗತ್ತೆ. ಚಿತ್ರ ಬರೆದವರು ಶ್ರೀಹರ್ಷ. ಪ್ರಕಾಶನ ಸಂಸ್ಕೃತಿ ಸುಬ್ರಮಣ್ಯ. ನಾನು ಕಥೆಗಳನ್ನು ಓದಿ, ನಾಲ್ಕಾರು ಕಥೆಗಳನ್ನು ಗುರುತುಮಾಡಿ, ಎಂಎಸ್‌ಎನ್ ಅವರ ಬಗ್ಗೆ ಕೆಲವು ಮಾತುಗಳನ್ನು ಸಿದ್ದಪಡಿಸಿಕೊಂಡು ಹೋಗಿದ್ದೆ. ಅನಿರೀಕ್ಷಿತ ಅಂದ್ರೆ, ಬಿಡುಗಡೆಯ ಸಂದರ್ಭದಲ್ಲಿ ೬–೭



ಮಕ್ಕಳು ಪುಸ್ತಕಗಳನ್ನು ಚೀಲದಲ್ಲಿ ಹಾಕಿಕೊಂಡು ವೇದಿಕೆಗೆ ಬಂದರು. ಎಂಎಸ್‌ಎನ್‌ಗೆ "ಕಥೆ ಹೇಳಿ ಸಾರ್" ಅಂದ್ರು. ಎಂಎಸ್‌ಎನ್ ನನ್ನ ಕಡೆಗೆ ನೋಡಿದರು. ಸರಿ, ಚೀಲದಿಂದ ಪುಸ್ತಕಗಳನ್ನು ತೆಗೆದು ಎಲ್ಲಾ ಮಕ್ಕಳಿಗೂ, ವೇದಿಕೆಯಲ್ಲಿದ್ದ ಗಣ್ಯರಿಗೂ ಕೊಟ್ಟೆ. ಪುಸ್ತಕ ಬಿಡುಗಡೆ ಆಯಿತು. ನುಡಿಕಟ್ಟೆಗೆ ಹೋಗುವುದರ ಬದಲು ಮಕ್ಕಳನ್ನು ವೇದಿಕೆಯಲ್ಲಿ ಕೂರಿಸಿಕೊಂಡು ಬಂಟಿ ಹೇಳಿದ, ಎಂಎಸ್‌ಎನ್ ಬರೆದ ಮಕ್ಕಳ ಕಥೆ ಯೊಂದನ್ನು ಹೇಳಿದೆ. ಪುಸ್ತಕದ ಬಗ್ಗೆ ಒಂದೆರಡು ಮಾತು ಹೇಳಿದೆ. ಅಲ್ಲಿಗೆ ೧೫ ನಿಮಿಷವಾಗಿತ್ತು. ಮಕ್ಕಳ ಕಥೆಗಳ ಪುಸ್ತಕ ಮಕ್ಕಳ ಮೂಲಕ, ಅವರಿಗೆ ಕಥೆ ಹೇಳುತ್ತಾ ವಿನೂತನವಾಗಿ ಬಿಡುಗಡೆ ಆಯಿತು.

ಸಸಕಸ ವೇದಿಕೆಯ ಮೂಲಕ ಹತ್ತಾರು ಪುಸ್ತಕಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಪ್ರತಿ ಬಿಡುಗಡೆಯೂ ವೈವಿಧ್ಯಮಯ. ಜ್ಞಾಪಕಕ್ಕೆ ಬಂದ ಕೆಲವು ಸಂಗತಿಗಳನ್ನು ಹಂಚಿಕೊಳ್ಳಬಯಸುತ್ತೇನೆ.

೨೦೧೭ರಲ್ಲಿ ಶ್ರೀ ಬಿ.ಎಸ್.ಚಂದ್ರಶೇಖರ್ ಅವರ "ಕನ್ನಡ ಸ್ತೋತ್ರ ಚಂದ್ರಿಕೆ" ಬಿಡುಗಡೆಯಾಯಿತು. "ಕನ್ನಡ ಸ್ತೋತ್ರ ಚಂದ್ರ" ಬಳಗದ ಮೂಲಕ ಪ್ರಕಾಶಗೊಂಡ ಪುಸ್ತಕ ಅದು. ಕಾರ್ಯಕ್ರಮ ಕಸಾಪದಲ್ಲಿ. ಬೆಂಗಳೂರು ಚಿನ್ಮಯ ಮಿಷನ್ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದ ಬಿಡುಗಡೆ ಮಾಡಿದರು. ಕರ್ನಾಟಕ ಸಂಗೀತ ವಿದ್ವಾನ್ ಗಾನಕಲಾಭೂಷಣ ಡಾ ಆರ್.ಕೆ..ಪದ್ಮನಾಭ ಅವರು ಮುಖ್ಯ ಅತಿಥಿ. ಪುಸ್ತಕ ಬಿಡುಗಡೆಯ ಘೋಷಣೆಯಾಗುತ್ತಿ ವೇದಿಕೆಯ ಮೇಲಿನಿಂದ, ಸೂರಿನಿಂದ ಪುಸ್ತಕದ ಬುಟ್ಟಿ ವೇದಘೋಷಗಳ ನಡುವೆ ಇಳಿಯಿತು. ಎಲ್ಲರಿಗೂ ಆಶ್ಚರ್ಯ. ವೇದಿಕೆಯ ಮೇಲೆ ಕಂಬಿಗಳ ನಡುವೆ ಕೂತಿದ್ದ ಕಾರ್ಯಕರ್ತರೊಬ್ಬರು ಪುಸ್ತಕಗಳನ್ನು ಆಕಾಶದಿಂದ ಭೂಮಿಗೆ ಇಳಿಸಿದ್ದರು. ಸಭಿಕರ ಚಪ್ಪಾಳೆಗಳು, ನಮ್ಮ ಮನಸ್ಸಿನ ಸಂತೋಷವನ್ನು ಹೆಚ್ಚಿಸಿದವು.



೨೦೧೯, ಬಿಎಂಶ್ರೀ ಸಭಾಂಗಣ. ವೇದಿಕೆಯ ಬರೆಹಗಾರರ "ಸಾಹಿತ್ಯ ಸಿರಿ" ಪುಸ್ತಕದ ಬಿಡುಗಡೆ. ನೋಡನೋಡುತ್ತ ಇದ್ದಂತೆ, ಸಭಾಂಗಣದ ಹೊರ ಬದಿಯಿಂದ ನಮ್ಮ ಸದಸ್ಯರಾದ ಶ್ರೀಮತಿ ಬಿ.ಎನ್.ಕುಸುಮಾ ಅವರು ತಲೆಯ ಮೇಲೆ ದೊಡ್ಡ ಬುಟ್ಟಿಯನ್ನು ಹೊತ್ತುಕೊಂಡು ಬಂದರು. ಹಳ್ಳಿಯ ಹೆಂಗಸರ ರೀತಿಯಲ್ಲಿ ಹಸಿರು ಸೀರೆಯನ್ನು ಉಟ್ಟಿದ್ದರು. ಹಾಡು ಚಪ್ಪಾಳೆಗಳ ನಡುವೆ ಬುಟ್ಟಿಯನ್ನು ವೇದಿಕೆಯಲ್ಲಿ ಇಳಿಸಿದರು. ಅದರ ತುಂಬಾ ಹಣ್ಣು ಹಂಪಲು, ಹೂವು ನಡುವೆ "ಸಾಹಿತ್ಯ ಸಿರಿ". ಹಬ್ಬದ ವಾತಾವರಣ. ಸುಗ್ಗಿಯ ಸಂಭ್ರಮ ಅದಾಗಿತ್ತು.

೨೦೨೩ರಲ್ಲಿ, ನಮ್ಮ ವೇದಿಕೆಯ ಸದಸ್ಯರ ಖೋ ಕಾದಂಬರಿ "ಪಲ್ಲಟ" ಬಿಡುಗಡೆ. ೨೭ ಸದಸ್ಯರು ಬರೆದ ೨೭ ಅಧ್ಯಾಯಗಳ ಕಾದಂಬರಿ. ಬಿಡುಗಡೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ. ೨೭ ಬರೆಹಗಾರರು ಹೊರಬಾಗಿಲಿನಿಂದ ಕೈ ನಿಂದ ಕೈಗೆ ದಾಟಿಸುತ್ತಾ ಪಲ್ಲಟವನ್ನು ವೇದಿಕೆಗೆ ತಂದರು. ಒಂದು ಹೊಸತರಹ.



ರಂಗಕರ್ಮಿ, ಸಾಹಿತಿ ಧೀರೇಂದ್ರರ "ಹವ್ಯಾಸಿರಂಗದ ಮುತ್ತುರತ್ನಗಳು" ಬಿಡುಗಡೆ ಮತ್ತಷ್ಟು ಸ್ವಾರಸ್ಯ. ಇನ್ನೇನು ಬಿಡುಗಡೆ ಯಾಗಬೇಕು. ಪುಸ್ತಕದ ಗಂಟು ವೇದಿಕೆಗೆ ಬರಲೇ ಇಲ್ಲ. ಪ್ರೇಕ್ಷಕರ ನಡುವಿನಿಂದ ಕಾವಿಧಾರಿ ಸನ್ಯಾಸಿಯೊಬ್ಬ ಮೇಲೆದ್ದು ವೇದಿಕೆಯ ಕಡೆಗೆ ಬರುತ್ತಿದ್ದ. ಅವದೇನೋ ಮಣಮಣ ಮಂತ್ರ ಬೇರೆ. ಸಭಿಕರ ಕುತೂಹಲ ಅತ್ತ. ಆತನ ಕೈನಲ್ಲಿ ಕಾವಿಬಟ್ಟೆ ಸುತ್ತಿದ್ದ ಗಂಟು!. ಆತ ಸೀದಾ ಬಂದು ಆ ಗಂಟನ್ನು ವೇದಿಕೆಯಲ್ಲಿ ಇದ್ದ ಹಿರಿ/ಕಿರು ತರೆ ನಟರಾದ ಶ್ರೀನಾಥ್, ಗಿರಿಜಾ ಲೋಕೇಶ್ ಅವರ ಮುಂದಿಟ್ಟು ಪಕ್ಕಕ್ಕೆ ಸರಿದ. ಅಷ್ಟರಲ್ಲಿ ಸಭಿಕರೊಬ್ಬರು ಆ ಸನ್ಯಾಸಿಗೆ ಉದ್ದಂಡ ನಮಸ್ಕಾರ

ಮಾಡಿಬಿಟ್ರು!!. ಅಷ್ಟು ಹೊತ್ತೂ ವೇದಿಕೆಯಿಂದ ಕಾಣೆಯಾಗಿದ್ದ ಲೇಖಕರು ಪಟ್ಟಂತ ಕಾಣಿಸಿಕೊಂಡರು. ಜೋರು ಚಪ್ಪಾಳೆಯ ಸದ್ದಿನೊಂದಿಗೆ ಪುಸ್ತಕ ಬಿಡುಗಡೆ ಆಯಿತು. ಆ ಸನ್ಯಾಸಿ ಬೇರಾರೂ ಆಗಿರಲಿಲ್ಲ! ಸ್ವತಃ ಧೀರೇಂದ್ರರರೇ!!!

ಖ್ಯಾತ ಕಥೆಗಾರ್ತಿ ಶ್ರೀಮತಿ ಶ್ರವಣಕುಮಾರಿ ಅವರ "ಬೆಳಕು ಹರಿವ ಮುನ್ನ" ಹಾಗೂ ನಾಟಕಕಾರ, ಕಥೆಗಾರ ಶ್ರೀ ಗುರುರಾಜ ಶಾಸ್ತ್ರಿ ಅವರ "ಬಾ ಗುರು ಪ್ರವಾಸ ಹೋಗೋಣ" ಮತ್ತು "ಕಥೆ ಕೋಸಂಬರಿ" ಕೃತಿಗಳು ೩೧ ಡಿಸೆಂಬರ್ ೨೦೨೩ರಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಬಿಡುಗಡೆಯಾಯಿತು. ಅದರಲ್ಲೇನು ವೈಶಿಷ್ಟ್ಯ ಅನ್ನುವಿರಾ?. ಚಂದದ ಬುಟ್ಟಿಯಲ್ಲಿ ಅವಿತು ಪುಸ್ತಕಗಳು ಹೊರಬಂದವು. ಏನಪ್ಪಾ ಎಂಥಾ ವಿಶೇಷ ಅನ್ನುವುದು ಸಭಿಕರ ಅಂಬೋಣ.

ಸಸಕಸ ವೇದಿಕೆಯ ಸದಸ್ಯರ "ತೊಂಗಲು" ಹಾಗೂ ಆರು ಲೇಖಕರು, ಶ್ರೀ ಕೆ.ಎನ್.ಮಹಾಬಲ ಅವರ "ನನ್ನ ಅಪ್ಪ ಕೆಎಸ್‌ನ" ಮತ್ತು "ಹಾಸ್ಯಾಲಾಪ", ಶ್ರೀಮತಿ ಗಿರಿಜಾ ರಾಜ್ ಅವರ " ಚಿರಂತನ ಭಾವ ಬಿಂದು" ಶ್ರೀಧರ ರಾವ್ ಅವರ "ಅಯೋಧ್ಯಾ ಕಾಶಿ ಭೂತಾನ್– ಆಧ್ಯಾತ್ಮಿಕ ಪ್ರವಾಸ" ಹಾಗೂ ಶ್ರೀಮತಿಯರಾದ ನಿರ್ಮಲ ಜಿವಿ, ನಾಗರತ್ನ ಚಂದ್ರಶೇಖರ್, ಗಿರಿಜಾರಾಜ್ ಮತ್ತು ಶ್ರೀ ಶಂಕರ ರಾವ್ ಅವರುಗಳ "ಕಥಾ ಸುಧೆಯ ಕಡಲು" – ಈ ಐದು ಪುಸ್ತಕಗಳ ಬಿಡುಗಡೆಯ ಪರಿ ಇನ್ನೂ ಆಕರ್ಷಕ. ನಮ್ಮ ವೇದಿಕೆಯ ನಟ, ನಿರ್ದೇಶಕ, ಸಾಹಿತಿ ಶ್ರೀ ಧೀರೇಂದ್ರ ಮತ್ತೆ ಚಮತ್ಕಾರ ತೋರಿಸಿದರು. ಬಿಡುಗಡೆಗೆ ತಕ್ಕಂತೆ ಹಾಡೊಂದನ್ನು ಬರೆದರು. ರಾಜನಂತೆ ವೇಷಭೂಷಣ ಧರಿಸಿದರು. ಒಂದು ಕೈನಲ್ಲಿ ಮೈಕು, ಮತ್ತೊಂದರಲ್ಲಿ ಪುಸ್ತಕಗಳನ್ನು ಇರಿಸಿದ ಚಂದದ ಬುಟ್ಟಿ ಹಿಡಿದು ವೇದಿಕೆಯತ್ತ ಹೆಜ್ಜೆ ಹಾಕಿದ್ದು ಒಂದು ಅದ್ಭುತ ಕಲಾಕೃತಿ ಎನ್ನಬೇಕು. ಶ್ರೀ ಧೀರೇಂದ್ರರು ಹಾಡಿದ ಕವನ ಹೀಗಿದೆ.



ಶರಣೆನ್ನುವೆನು ಶರಣೆನ್ನುವೆನು
ಶರಣೆನ್ನುವೆನು ಶರಣೆನ್ನುವೆನುss

ಬೆಂಗಳೂರು ಕೂಡಿ
ಕೂತಂಥ ಬುದ್ಧಿವಂತರಿಗೆ
ಮಾಡ್ಬೇಡಿ ಸದ್ದss
ಈ ಸಭೆ ಬಲು ಶುದ್ಧ

ಆರು ಲೇಖಕರss
ಈ ಐದು ಕೃತಿಗಳು
ಒಂದಕ್ಕಿಂತ ಒಂದು
ಬಲು ಚೆಂದ ಓದಲು

ಎನ್ನುವೆನುss ಶರಣೆನ್ನುವೆನುss
ಬೆಂಗಳೂರು ಕೂಡಿ
ಕೂತಂಥ ಬುದ್ಧಿವಂತರಿಗೆ

ಮಹಾಬಲರು ಗಿರಿಜಾರಾಜರು
ಶ್ರೀಧರರಾಯರು ಶಂಕರರಾಯರು
ನಿರ್ಮಲ ಮತ್ತು ನಾಗರತ್ನsರು
ಈ ಐದು ಕೃತಿಗಳ ಲೇಖಕರು

ಎನ್ನುವೆನುss ಶರಣೆನ್ನುವೆನುss
ಬೆಂಗಳೂರು ಕೂಡಿ
ಕೂತಂಥ ಬುದ್ಧಿವಂತರಿಗೆ.

ನನ್ನಪ್ಪ ಕೆ ಎಸ್ ನ ಹಾಸ್ಯಾಲಾಪ
ಚಿರಂತನ ಭಾವ ಬಿಂದು
ನೂರೊಂದು ಕವನ
ಅಯೋಧ್ಯಾ ಕಾಶಿ
ಭೂತಾನ ಪ್ರವಾಸ
ಕಥಾ ಸುಧೆಯ ಕಡಲು
ಹೊತ್ತು ತರುತಿಹೆ
ನಾನೀಗ ಲೋಕಾರ್ಪಣೆಗೆ

ಎನ್ನುವೆನುss ಶರಣೆನ್ನುವೆನುss
ಬೆಂಗಳೂರು ಕೂಡಿ
ಕೂತಂಥ ಬುದ್ಧಿವಂತರಿಗೆ.

– ಧೀರೇಂದ್ರ ಎಸ್

ಈಗ ವೇದಿಕೆಯ ಹಲವು ಸದಸ್ಯರ ಕೃತಿಗಳು ಬಿಡುಗಡೆಗೆ ಸಿದ್ದವಾಗಿದೆ ಎಂದು ಸುದ್ದಿ ಬಂದಿದೆ. ಅವರಿಗೆಲ್ಲಾ ಒಂದು ಸವಾಲು. ಕೃತಿ ರಚಿಸಿದ್ದು ಮೈಲುಗಲ್ಲು ಸರಿ. ಅದಕ್ಕಾಗಿ ಅಭಿನಂದನೆಗಳು. ಆದರೆ ಪುಸ್ತಕ ಬಿಡುಗಡೆಯ ಸವಾಲನ್ನು ಹೇಗೆ ಗೆಲ್ಲುವಿರಿ? ಆ ಗುಟ್ಟನ್ನು ನನ್ನ ಕಿವಿಯಲ್ಲಿ ಹೇಳಿ !!

***

ಆಗುವುದೆಲ್ಲಾ ಒಳ್ಳೆಯದೇ

– ಪೂರ್ಣಿಮ ಭಗವಾನ್

ಸಾಯಂಕಾಲ ಶಾಲೆಯಿಂದ ಮನೆಗೆ ಮರಳಿ ಬಂದ ಪ್ರದ್ಯುಮ್ನನ ಮುಖ ಎಂದಿನಂತಿರಲಿಲ್ಲ. ರಾಮನಿಲ್ಲದ ಅಯೋಧ್ಯೆಯಂತೆ ಕಳಾಹೀನವಾಗಿತ್ತು. ಏನಾಯ್ತು ನನ್ನ ಮುದ್ದು ಮಗನಿಗೆ ಎಂದುಕೊಂಡ ರತ್ನ ಗಮನಿಸಿಯೂ ಗಮನಿಸದಂತೆ ಸುಮ್ಮನಾದಳು. ಒಂದ್ಹತ್ತು ನಿಮಿಷ ಸುಮ್ಮನಿದ್ದರೆ ಪ್ರದ್ಯುಮ್ನ ತಾನಾಗಿಯೇ ಸರಿಯಾಗಬಹುದು, ಸಮವಸ್ತ್ರ ಬದಲಾಯಿಸಿ ಕೈಕಾಲು ಮುಖ ತೊಳೆದುಕೊಂಡು ಬರಲಿ ಎಂದುಕೊಂಡಳು. ಅರ್ಧಗಂಟೆಯಾದರೂ ರೂಮಿನಿಂದ ಮಗ ಹೊರಗೆ ಬಾರದಿದ್ದಾಗ ತಾಯಿಯ ಹೃದಯ ಚಡಪಡಿಸಿತು. "ಬಾರೋ ಪ್ರದ್ಯುಮ್ನ ತಿಂಡಿ ತಿನ್ನುವಿಯಂತೆ" ಎಂದರೆ ಅದಕ್ಕೂ ಉತ್ತರವಿರಲಿಲ್ಲ.

ರಾತ್ರಿ ಸ್ವಲ್ಪ ನಿದ್ದೆಗೆಟ್ಟು ಮಹಿಳಾ ವಿಶ್ವಕಪ್ ಕ್ರಿಕೆಟ್ ನೋಡಿದ್ದರ ಪರಿಣಾಮವಾಗಿ ಮಲಗಿಬಿಟ್ಟಿದ್ದಾನೇನೋ ಎಂದುಕೊಂಡು ನಿಶ್ಯಬ್ಧವಾಗಿ ಮೆಲ್ಲನೆ ರೂಮಿಗೆ ಕಾಲಿಟ್ಟರೆ ಮುಸಿಮುಸಿ ಅಳುವಿನ ಶಬ್ದ ಕೇಳಿ ದಿಗ್ಭ್ರಮೆಯಾಯಿತು. "ಏನಾಯ್ತು ಪ್ರದ್ಯುಮ್ನ, ಯಾಕೆ ಹೀಗೆ ಅಳುತ್ತಾ ಇದ್ದೀಯಾ, ಅಳುವಂತಹ ಘಟನೆ ಏನು ನಡೆಯಿತು ಶಾಲೆಯಲ್ಲಿ" ಎಂದಳು.

ಪ್ರದ್ಯುಮ್ನ: "ಶಾಲೆಯಲ್ಲಿ ವಾರಕ್ಕೊಮ್ಮೆ ಆಟದ ಪೀರಿಯಡ್ಡಿನಲ್ಲಿ ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿ ಕ್ರಿಕೆಟ್ ಆಟ ಆಡಿಸುತ್ತಾರಂತೆ. ಯಾರಿಗೆಲ್ಲಾ ಕ್ರಿಕೆಟ್ ಕಲಿಯಲು ಆಸಕ್ತಿ ಇದೆಯೋ ಅವರು ನಿಮ್ಮ ಹೆಸರನ್ನು ಚೀಟಿಯಲ್ಲಿ ಬರೆದು ಹಾಕಿ. ಹುಡುಗರು, ಹುಡುಗಿಯರು ಬೇರೆ ಬೇರೆ ಡಬ್ಬಿಗಳಲ್ಲಿ ಹಾಕಿ. ಎರಡು ಬೇರೆ ಬೇರೆ ತಂಡಗಳನ್ನು ಮಾಡುತ್ತೇವೆ. ಒಂದು ಸೆಕ್ಷನ್ನಿನಿಂದ ಒಬ್ಬರಂತೆ ಮಾಧ್ಯಮಿಕ ಶಾಲೆಯ ಎಲ್ಲಾ ತರಗತಿಗಳಿಂದ ಒಟ್ಟು 24 ಹುಡುಗರು 24 ಹುಡುಗಿಯರನ್ನು ಚೀಟಿ ಎತ್ತುವ ಮೂಲಕ ಆರಿಸಿ ತರಬೇತಿ ನೀಡುತ್ತೇವೆ. ಒಂದಿಬ್ಬರನ್ನು ಹೆಚ್ಚಾಗಿಯೇ ಆರಿಸಿರುತ್ತೇವೆ. ಒಂದು ತಿಂಗಳಾದ ನಂತರ ಅದರಲ್ಲಿ ಯಾರು ಚೆನ್ನಾಗಿ ಆಡುತ್ತಾರೋ ಅವರನ್ನು ಇಟ್ಟುಕೊಳ್ಳುತ್ತೇವೆ. ಸುಮಾರಾಗಿ ಆಡುವವರನ್ನು ತೆಗೆದುಹಾಕುತ್ತೇವೆ. ಆಮೇಲೆ ಬೇರೆಯವರಿಗೆ ಅವಕಾಶ ಕೊಡುತ್ತೇವೆ. ಆಗ ಮಿಕ್ಕವರ ಹೆಸರುಗಳನ್ನೂ ಚೀಟಿಯ ಮೂಲಕವೇ ತೆಗೆಯುತ್ತೇವೆ ಎಂದು ಮೇಡಂ ಹೇಳಿದರು. ಭೋಜನವಿರಾಮದ ನಂತರ ಎಲ್ಲಾ ತರಗತಿಯ ಮಕ್ಕಳನ್ನೂ ಒಟ್ಟಿಗೇ ಕರೆದು ಒಂದೊಂದೇ ತರಗತಿಯ ಚೀಟಿಗಳನ್ನು ಬೇರೆ ತರಗತಿಯ ಮಕ್ಕಳ ಕೈಯಲ್ಲಿ ತೆಗೆಸಿದರು. ನಮ್ಮ ತರಗತಿಯ ಸರದಿ ಬಂದಾಗ ನಾವೆಲ್ಲಾ ಕುತೂಹಲದಿಂದ ಕಾಯುತ್ತಿದ್ದೆವು. ನನ್ನ ಗೆಳೆಯ ಪ್ರಭು ಹೆಸರು ಬಂದಿದೆ, ನನ್ನ ಹೆಸರು ಬರಲಿಲ್ಲ. ಪ್ರತಿ ಭಾನುವಾರ ರಮೇಶ್ ನಾನು ಇಬ್ಬರೂ ಕ್ರಿಕೆಟ್ ಕೋಚಿಂಗಿಗೆ ಹೋದಾಗ ನಾನೇ ಚೆನ್ನಾಗಿ ಆಡುವುದು ಎಂದು ಸರ್ ಹೇಳ್ತಾರೆ. ಕ್ರಿಕೆಟ್‌ನ ಯಾವುದೇ ಗಂಧಗಾಳಿ ಇಲ್ಲದ ಪ್ರಭು ಈವಾಗ ಆಯ್ಕೆಯಾಗಿದ್ದಾನೆ ನೋಡಮ್ಮ, ಇದು ಸರೀನಾ" ಎಂದು ಪ್ರಶ್ನಿಸಿದನು.

ರತ್ನ: "ಓಹ್ ಅಷ್ಟೇನಾ, ಈ ಜಗತ್ತನ್ನೇ ಕಾಯುವ ಆ ಶ್ರೀರಾಮನೇ ಸ್ವಲ್ಪ ಹೊತ್ತು ಕಾಯಬೇಕಾಯಿತು, ಇನ್ನು ನಿನ್ನದೇನು ಮಹಾ, ಹೇಗಿದ್ದರೂ ಆರ್ಥಿಕವಾಗಿ ನಾವು ಅನುಕೂಲವಾಗಿದ್ದೇವೆ. ಹಾಗಾಗಿ ಸ್ವಲ್ಪ ಫೀಸು ಜಾಸ್ತಿ ಎನ್ನಿಸಿದರೂ ನಿನ್ನನ್ನು ಕ್ರಿಕೆಟ್ ತರಗತಿಗೆ ಸೇರಿಸಿದ್ದೇವೆ. ನೀನು ಮೂರು ವರ್ಷಗಳಿಂದ ಕ್ರಿಕೆಟ್ ಕಲಿಯುತ್ತಾ ಇದ್ದೀಯಾ. ಚೆನ್ನಾಗಿ ಆಡುತ್ತಲೂ ಇದ್ದೀಯಾ. ನಿನ್ನ ಗೆಳೆಯ ಪ್ರಭುವಿನ ಮನೆಯವರು ಅಷ್ಟೊಂದು ಅನುಕೂಲವಾಗಿಲ್ಲ. ಅವನು ಆಯ್ಕೆಯಾಗಿದ್ದು ಒಳ್ಳೆಯದೇ ಆಯಿತು. ಅವನಲ್ಲಿರ ಬಹುದಾದ ಪ್ರತಿಭೆಯನ್ನು ಗುರುತಿಸಲು ಒಂದು ಅವಕಾಶ ಸಿಕ್ಕಿದಂತಾಯಿತು. ಬಡಮಕ್ಕಳಿಗೂ ಅವಕಾಶ ಸಿಕ್ಕರೆ ತಾನೇ ಪ್ರತಿಭೆ ಅರಳುವುದು. ಆಗಲೇ ನಮ್ಮ ದೇಶ ನಿಜವಾದ ಪ್ರಗತಿಯನ್ನು ಹೊಂದಿದ ರಾಷ್ಟ್ರವಾಗಿ ಆತ್ಮನಿರ್ಭರ ಭಾರತ ಎನ್ನಿಸಿಕೊಳ್ಳುವುದು"

ಪ್ರದ್ಯುಮ್ನ : "ಅದೇನೋ ರಾಮ, ಕಾಯುವುದು, ಅಂತ ಇದ್ಯಲ್ಲ ಏನದು ಹೇಳಮ್ಮ".

ರತ್ನ: "ಹಿರಿಯ ಮಗ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ದಶರಥ ಮಹಾರಾಜನು ಅಂದುಕೊಂಡಿದ್ದನು. ಅಷ್ಟರಲ್ಲಿ ಅವನ ಮೂರನೆಯ ಪತ್ನಿಯಾದ ಕೈಕೇಯಿಯು ತನ್ನ ಆಪ್ತಸಖಿ ಮಂಥರೆಯ ದುರ್ಬೋಧನೆಗೆ ಒಳಗಾಗಿ ಶ್ರೀರಾಮನನ್ನು

ಹದಿನಾಲ್ಕು ವರ್ಷ ವನವಾಸಕ್ಕೆ ಕಳುಹಿಸಿ, ತನ್ನ ಮಗನಾದ ಭರತನಿಗೆ ಪಟ್ಟವಾಗಬೇಕು ಎನ್ನುವ ವರವನ್ನು ದಶರಥನಲ್ಲಿ ಬೇಡಿದಳು. ರಾಮ, ಲಕ್ಷ್ಮಣ, ಸೀತೆ ಮೂರು ಜನರೂ ವನವಾಸಕ್ಕೆ ಹೊರಟರು. ಮಾರ್ಗಮಧ್ಯೆ ಗಂಗಾನದಿಯ ತೀರದಲ್ಲಿ ವಿಶ್ರಮಿಸಿ ಮರುದಿನ ಬೆಳಿಗ್ಗೆ ಮುಂದೆ ಪ್ರಯಾಣ ಬೆಳೆಸುವುದು ಎಂದುಕೊಂಡರು. ಬೇಡರ ರಾಜ ಗುಹನು ರಾಮನ ಗೆಳೆಯನಾಗಿದ್ದನು. ಶೃಂಗಿಬೇರಪುರದ ರಾಜನಾಗಿದ್ದನು. ರಾಮನಿಗೆ ತಮ್ಮಲ್ಲಿಯೇ ಉಳಿದುಕೊಳ್ಳಲು ಹೇಳಿದನು. ರಾಮನು ಅದಕ್ಕೆ ಒಪ್ಪಲಿಲ್ಲ. ಒಂದುರಾತ್ರಿ ಅಲ್ಲಿಯೇ ಕಾಡಿನಲ್ಲಿ ತಂಗಿದ್ದು ಮರುದಿನ ಬೆಳಿಗ್ಗೆ ತಮ್ಮ ಮುಂದಿನ ಪ್ರಯಾಣವನ್ನು ಬೆಳೆಸುವುದಾಗಿ ಹೇಳಿದನು. ಅವರು ಗಂಗಾ ನದಿಯನ್ನು ದಾಟಿ ತಮ್ಮ ಪ್ರಯಾಣವನ್ನು ಮುಂದುವರಿಸಬೇಕಾಗಿತ್ತು. ಗುಹನ ಬಳಿ ಐನೂರಕ್ಕೂ ಹೆಚ್ಚು ದೋಣಿಗಳು ಇದ್ದವು. ಗುಹನು ತನ್ನ ದೂತನಿಗೆ ಹೇಳಿ ಸುಂದರವಾದ ದೋಣಿಯನ್ನು ತರಿಸಿದನು. ಆನಂತರ ರಾಮ ಲಕ್ಷ್ಮಣರು, ಸೀತೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು.

ಗುಹನ ಬಳಿಯಿದ್ದ ಎಲ್ಲಾ ದೋಣಿಗಳೂ ಒಂದಕ್ಕಿಂತಲೂ ಒಂದು ಸುಂದರವಾಗಿದ್ದವು. ದೂತನು ಯಾವ ನಾವೆಯನ್ನು ಆರಿಸುತ್ತಾನೋ ಎಂದು ದೋಣಿಗಳು ಉದ್ವೇಗದಿಂದ ಕಾಯುತ್ತಾ ಇದ್ದವು. ನನ್ನನ್ನು ಆರಿಸಿದರೆ ಒಳ್ಳೆಯದು, ರಾಮನ ಚರಣ ಸ್ಪರ್ಶದಿಂದ ಪುಣ್ಯ ಸಂಪಾದನೆಯಾಗುವುದು ಎಂದು ಉಸಿರನ್ನು ಬಿಗಿಹಿಡಿದು ನಿಂತಿದ್ದವು. ಅಷ್ಟೊಂದು ದೋಣಿಗಳಲ್ಲಿ ಒಂದು ದೋಣಿಯನ್ನು ಮಾತ್ರ ಆರಿಸಲು ದೂತನಿಗೂ ಸ್ವಲ್ಪ ಕಷ್ಟವಾಯಿತು. ನಾವೆಯನ್ನು ಸೀತೆ, ರಾಮ, ಲಕ್ಷ್ಮಣರ ಬಳಿಗೆ ತರಲು ತುಸು ವಿಳಂಬವಾಯಿತು. ಅಲ್ಲಿಯವರೆಗೂ ಎಲ್ಲರೂ ಲೋಕಾಭಿರಾಮವಾಗಿ ಮಾತನಾಡುತ್ತ ಇದ್ದರು. ಆಯ್ಕೆಯಾದ ನಾವೆಯು ಹರ್ಷಿಸಿತು. ಇನ್ನಿತರ ನಾವೆಗಳು ತಮ್ಮ ಸರದಿ ಬೇಗ ಬರಲಿ ಎಂದು ಆಶಿಸುತ್ತಾ ತಾಳ್ಮೆಯಿಂದ ಕಾಯುತ್ತಾ ಇದ್ದವು. ಎಲ್ಲವೂ ಅವರವರು ಪಡೆದು ಬಂದ ಭಾಗ್ಯ. ಕ್ರಿಕೆಟ್ ಆಟವನ್ನು ಇನ್ನೂ ಉತ್ತಮ ರೀತಿಯಲ್ಲಿ ಅಭ್ಯಾಸ ಮಾಡು. ಒಂದಲ್ಲಾ ಒಂದು ದಿನ ಒಳ್ಳೆಯ ಅವಕಾಶ ಸಿಕ್ಕೇ ಸಿಗುತ್ತದೆ, ಶಾಲೆಯಲ್ಲಿ ಈ ದಿನ ಆಯ್ಕೆಯಾಗದಿದ್ದರೆ ಏನಾಯಿತು? ಆಗುವುದೆಲ್ಲಾ ಒಳ್ಳೆಯದಕ್ಕೇ ಎನ್ನುವ ಗಾದೆ ಗೊತ್ತಿಲ್ಲವಾ" ಎಂದು ಸಮಾಧಾನ ಪಡಿಸಿದಳು.

ಕೆಲವು ವಾರಗಳ ನಂತರ ಪ್ರದ್ಯುಮ್ನನನ್ನು ಸಮಿತಿಯವರು ಅಂತರ್ ಶಾಲಾ ಮಟ್ಟದಲ್ಲಿ ಕ್ರಿಕೆಟ್ ಆಡಲು ಆಯ್ಕೆ ಮಾಡಿದ್ದರು. ಶಾಲೆಯಲ್ಲಿ ವಾರಾಂತ್ಯದ ತರಬೇತಿಗಾಗಿ ಆಯ್ಕೆಯಾಗಿದ್ದರೆ ಉತ್ತಮ ಅವಕಾಶವೊಂದು ಕೈತಪ್ಪಿ ಹೋಗುತ್ತಿತ್ತೇನೋ? ಎಂದುಕೊಂಡು ತಾಯಿ, ಮಗ ಇಬ್ಬರೂ ಕಾಣದ ಶಕ್ತಿಗೆ ಮನದಲ್ಲೇ ವಂದಿಸಿದರು.

***

ಸಣ್ಣ ಕಥೆ

ಒಂದು ಚಿಟಿಕೆ ಸಿಂಧೂರ

– ಸ್ನೇಹಾ ಶಶಿಧರ

"ಮಹನೀಯರೇ ಮತ್ತು ಮಹಿಳೆಯರೇ, ಈಗ ನೀವೆಲ್ಲರೂ ಕಾತರದಿಂದ ಕಾಯುತ್ತಿರುವ ಕ್ಷಣ. ಹೋಟೆಲಿಯರ್ ಆಫ್ ದಿ ಇಯರ್ ನ ಘೋಷಿಸುವ ಸಮಯ"– ಹೀಗೆಂದು ಕರೆದೊಡನೆ, ಸಿಂಗಾಪುರದ ಆ ಸಪ್ತತಾರಾ ಹೋಟೆಲಿನ ಸಭಾಂಗಣದಲ್ಲಿ ಮೌನ ಆವರಿಸಿತು. ಪ್ರಪಂಚದ ಮೂಲೆ ಮೂಲೆಯಿಂದ ಬಂದು ನೆರೆದಿದ್ದ ಎಷ್ಟೋ ಪಂಚತಾರಾ ಹೋಟೆಲ್ ಮಾಲೀಕರು ಆಸೆಯಿಂದ, ಅಸೂಯೆಯಿಂದ ತಮ್ಮದೇ ಹೆಸರು ಕರೆಯುತ್ತಾರೆ ಎಂದು ಅವರವರು ನಂಬಿರುವ ದೇವರ ಧ್ಯಾನ ಮಾಡುತ್ತ ಕುಳಿತಿದ್ದರು. ಐಷರಾಮಿ ಸಭಾಂಗಣದಲ್ಲಿ ಹವಾ ನಿಯಂತ್ರಣವಿದ್ದರೂ, ದುಬಾರಿ ಸೂಟ್‌ಗಳೊಳಗೆ ಬೆವರುತ್ತಿದ್ದರು. ಅನೌನ್ಸರ್‌ನ ಕ್ಷಣ ಮಾತ್ರದ ಮೌನ, ವರ್ಷಗಳಂತೆ ಭಾಸವಾಗುತ್ತಿತ್ತು.

"ಊಹಿಸಬಲ್ಲಿರಾ?", ಪ್ರಶ್ನೆಗೆ "ಹೋ" ಎಂಬ ಉತ್ತರ ಕಾದಿತ್ತು ಅಥವಾ ಒಬ್ಬಬ್ಬರೂ ಒಂದೊಂದು ಹೆಸರು ಕೂಗಿ, ಏನು ಸ್ಪಷ್ಟವಾಗಿ ಕೇಳಿಸದೇ, ಹೋ ಎಂಬ ಧ್ವನಿ ಹೊರಹೋಮ್ಮಿತ್ತೋ ಏನೋ.

"ಇಟ್ಸ್ ನನ್ ಅದರ್ ದ್ಯಾನ್, ಬೆಂಗಳೂರಿನ ದೇಶಪಾಂಡೆ ಗ್ರೂಪ್ ಆಫ್ ಹೊಟೇಲ್ಸ್ ನ ಸಂಸ್ಥಾಪಕರಾದ ಶ್ರೀ ವಿದ್ಯಾಸಾಗರ ದೇಶಪಾಂಡೆ!"

ಮೂರನೇ ಸಾಲಿನ ಮೂಲೆಯಲ್ಲಿ ಕುಳಿತಿದ್ದ ವಿದ್ಯಾಸಾಗರರವರು ತಮ್ಮ ಕಿವಿಯನ್ನು ನಂಬಲು ಆಗದೆ, ಆಚೀಚೆ ನೋಡಿದರು. ಸುತ್ತಲಿರುವವರು ಅವರನ್ನೇ ನೋಡುತ್ತಿದ್ದನ್ನು ಗಮನಿಸಿದ ಅವರಿಗೆ ಅರಿವಾಗಿ, ಎದ್ದು ನಿಂತರು. ಫೋಕಸ್ ಲೈಟ್ ಅವರ ಕಡೆ ಮುಖಮಾಡಿತು. ಸ್ಟೇಜ್ ಮೇಲೆ ತೆರಳಿ, ತಮ್ಮ ಬಹುಮಾನ ಸ್ವೀಕರಿಸಿ, ಸಹಜವಾಗಿ ಒಂದೆರೆಡು ಮಾತಾಡಿದರು.

ಕಾರ್ಯಕ್ರಮ ಮುಗಿದಮೇಲೆ ಊಟ ಮುಗಿಸಿಕೊಂಡು, ಬಾಗಿಲ ಕಡೆ ತಿರುಗಿ ನೋಡಿದಾಕ್ಷಣ ಅವರ ಡ್ರೈವರ್ ಓಡಿ ಬಂದು ಅವರ ಕೈಗಳಿಂದ ಬ್ಯಾಗನ್ನು ಕಸಿದು, ತಲೆ ತಗ್ಗಿಸಿ ಹೋಗಿ ಕಾರಿನ ಬಾಗಿಲು ತೆರೆಯುತ್ತಾನೆ. ಇವೆಲ್ಲ ವಿದ್ಯಾಸಾಗರರವರಿಗೆ ಮುಜುಗರ ಎನಿಸಿದರೂ, ಅವರ ಈಗಿನ ಪರಿಸ್ಥಿತಿಗೆ ಇವೆಲ್ಲ ಮಾಮೂಲಿ ಎಂದು ಸುಮ್ಮನಾಗುತ್ತಾರೆ. ಡ್ರೈವರ್ ಕಾರನ್ನು ರಿವರ್ಸ್ ತೆಗೆಯುವಾಗ, ವಿದ್ಯಾಸಾಗರ್ ನೆನಪಿನ ಪುಟಗಳು ರಿವರ್ಸ್ ಗೇರಿನಲ್ಲಿ ಓಡುತ್ತವೆ.

ಬಾಲಕನಾಗಿದ್ದಾಗೆ, ಹಳ್ಳಿ ಮನೆಯಿಂದ ಓಡಿಬಂದು ಬೆಂಗಳೂರಿನಂತಹ ಮಹಾನಗರದಲ್ಲಿ ಚಿಕ್ಕ ಪುಟ್ಟ ಕೈ ಕೆಲಸಕ್ಕೆ ಬೀಳುತ್ತಾರೆ. ಹೋಟೆಲ್ ಒಂದರಲ್ಲಿ ಎಂಜಲು ತಟ್ಟೆ ತೊಳೆಯುತ್ತ, ದೋಸೆ ಹೊಯ್ಯುವ ಕೆಲಸ ಕಲಿಯುತ್ತಾರೆ, ವ್ಯವಹಾರ ತಿಳಿದುಕೊಳ್ಳುತ್ತಾರೆ. ಇಪ್ಪತ್ತೈದನೇ ವಯಸ್ಸಿಗೆ ಬರುವುದರೊಳಗೆ, ಹೋಟೆಲ್ ಮಾಲೀಕರ ಬಳಿ ಸಾಲ ಪಡೆದು ಸ್ವಂತ ದೋಸೆ ಕ್ಯಾಂಪ್ ಹಾಕುತ್ತಾರೆ. ಎರಡೇ ವರ್ಷದಲ್ಲಿ ಸಾಲ ತೀರಿಸಿ, ಇನ್ನೆರಡು ವರ್ಷಕ್ಕೆ ದೋಸೆ ಗಾಡಿಯಿಂದ ದರ್ಶಿನಿಗೆ ಏಳಿಗೆಯಾಗುತ್ತರೆ.

ಹೀಗೆ ಹಿಂತಿರುಗಿ ನೋಡದೆ ಬೆಳೆಯುತ್ತಾರೆ. ಇನ್ನೂ ಕೆಲವೇ ವರ್ಷಗಳಲ್ಲಿ, ಸಂಸಾರ ಬೆಳೀತಾ ಬೆಳೀತಾ, ಭೋಜನಾಲಯದ ಜೊತೆ ವಸತಿ ಗೃಹವನ್ನು ಕಟ್ಟುತ್ತಾರೆ. ಮುಂದೆ ಸಾಗುತ್ತಾ, ಬೇರೆ ಊರುಗಳಲ್ಲೂ ವಸತಿ ಗೃಹಗಳನ್ನು ತೆರೆಯುತ್ತಾ ಸಾಗುತ್ತಾರೆ.

ಒಮ್ಮೆ, ಬೆಂಗಳೂರಿನ ವಸತಿ ಗೃಹಕ್ಕೆ, ಪಂಚತಾರಾ ಮಾನ್ಯತೆ ಕೊಡುವ ಅಧಿಕಾರಿಗಳು ಅಧಿಕೃತವಾಗಿ ಅವರನ್ನು ಸಂಪರ್ಕಿಸಿ, ಹೋಟೆಲ್ ಬಂದು ನೋಡುತ್ತೇವೆ. ವಿದೇಶದಿಂದೆಲ್ಲ ಒಂದು ಗುಂಪು ಅಧಿಕಾರಿಗಳು ಬಂದು ಪರಿಶೀಲಿಸಿ ಎಲ್ಲರೂ ಒಪ್ಪಿದರೆ, ನಿಮಗೆ ಪಂಚತಾರಾ ಮಾನ್ಯತೆ ಸಿಕ್ಕಂತೆ ಎಂದರು.

ವಿದ್ಯಾಸಾಗರರಿಗೆ ಖುಷಿಯೋ ಖುಷಿ. ಅದರ ಜೊತೆ, ಆತಂಕ ಕೂಡ. ಹೇಗಾದರಾಗಲಿ ಈ ಅವಕಾಶ ಕೈತಪ್ಪಿ ಹೋಗಬಾರದು! ಈಗಿರುವ ಕೆಲಸಗಾರರಿಗೆ ಹೆಚ್ಚು ಬೋನಸ್ ಕೊಟ್ಟು, ಇನ್ನಷ್ಟು ಪಾರ್ಟ್ ಟೈಮ್ ಕೆಲಸದವರನ್ನು ಕರೆಸಿದರು. ಎಲ್ಲ ಕೆಲಸ ಅಚ್ಚುಕಟ್ಟಾಗಿ ಸಾಗಿತ್ತು.

ಆ ದಿನ ಬಂದೇಬಿಟ್ಟಿತ್ತು. ಹೇಳಿದ ಸಮಯಕ್ಕೆ ಸರಿಯಾಗಿ ನಾಲ್ಕು ಜನ ಅಧಿಕಾರಿಗಳು ಐಶಾರಾಮಿ ಕಾರಿನಲ್ಲಿ ಬಂದಿಳಿದರು. ಕಾಫಿ, ತಿಂಡಿ ಎಲ್ಲ ಪಾಂಗಿತವಾಗಿತ್ತು. ನಾಲ್ಕು ಜನರು ದೇಶಪಾಂಡೆ ಕಂಫರ್ಟ್ಸ್ ನ ಮೂಲೆಮೂಲೆಯನ್ನು ಹದ್ದಿನ ಕಣ್ಣಿಂದ ನೋಡಿದರು. ವಿದ್ಯಾಸಾಗರರು ಎಲ್ಲೂ ಒಂದು ಚೂರು ಧೂಳು ಸಹ ಇರದಂತೆ ನೋಡಿಕೊಂಡಿದ್ದರು. ಎಲ್ಲರೂ ವಿಶ್ಲೇಷಿಸಿ, ಇನ್ನೆರಡು ದಿನದಲ್ಲಿ ತಿಳಿಸುತ್ತೇವೆ ಅಂತ ಹೊರಟು ಹೋದರು.

ಎರಡೂ ದಿನ, ವಿದ್ಯಾಸಾಗರ ಕುಟುಂಬಕ್ಕೆ ನಿದ್ದೆಯೇ ಬರಲಿಲ್ಲ. ಅವರ ಉತ್ತರ ಬಂತು. "ನಿಮ್ಮ ಹೋಟೆಲಿಗೆ ಪಂಚತಾರಾ ಮಾನ್ಯತೆಯನ್ನು ನಿರಾಕರಿಸಲಾಗಿದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಸಮಯಕ್ಕಾಗಿ ಧನ್ಯವಾದಗಳು". ಜೊತೆಗೆ ಒಂದೆರಡು ಚಿತ್ರಗಳು. ವಿದ್ಯಾಸಾಗರರ ಎದೆ ಒಡೆದುಹೋಯಿತು.

ನಡುಗುವ ಕೈಗಳಿಂದ ಚಿತ್ರಗಳಿರುವ ಲಕೋಟೆಯನ್ನು ತೆರೆದರು. ಅವರ ಹೋಟೆಲಿನ ಒಂದು ಕೋಣೆಯ ಬಚ್ಚಲುಮನೆ. ಎಲ್ಲೆಲ್ಲೂ ಬಿಳಿ ಹಾಗೂ ನೀಲಿ ವರ್ಣದ ಸಾಮಾನುಗಳು. ಕೊಂಚವೂ ಗಲೀಜಿಲ್ಲ. ಹೊರನೋಟಕ್ಕೆ ಸ್ವರ್ಗದಂತೆ ಕಾಣುತ್ತಿತ್ತು. ಚಿತ್ರದ ಮೂಲೆಯಲ್ಲಿ ಲೇಖನಿಯ ಗುರುತು ಮಾಡಿದ್ದರು. ಕಣ್ಣು ಉಜ್ಜಿಕೊಂಡು ನೋಡಿದರು. ಕನ್ನಡಿಯ ಮೇಲೆ ಅಂಟಿಸಿದ್ದ ಒಂದು ಚಿಕ್ಕ ಬೊಟ್ಟು!

**

ವಿದ್ಯಾಸಾಗರ ದೇಶಪಾಂಡೆಯವರಿಗೆ ತಿಳಿಯದೇ ನಗು ಮೂಡಿತು. ಇದಾಗಿ ಇಪ್ಪತ್ತು ವರ್ಷವೇ ಕಳೆದಿತ್ತು. ಈ ಪ್ರಸಂಗವಾದ ನಂತರ ವಿದ್ಯಾಸಾಗರರು ಹೋದಲ್ಲಿಬಂದಲ್ಲಿ ಸೂಕ್ಷ್ಮವಾಗಿ ಗಮನಿಸುತ್ತ ಬಂದರು. ಬಳಸಿದ ಬೊಟ್ಟನ್ನು ಕಸಕ್ಕೆ ಎಸೆಯಬಾರದೆಂಬ ಮೂಢನಂಬಿಕೆ. ಅದಕ್ಕೂ ಮಿಗಿಲಾಗಿ ದೇವರ ಪ್ರಸಾದದ ಕುಂಕುಮ, ಚಂದನ ಇತ್ಯಾದಿ ಸ್ವೀಕರಿಸುವಾಗ ಪ್ರಸಾದ, ಆಮೇಲೆ ದೇವಸ್ಥಾನದ ಗೋಡೆಗಳಿಗೆ, ಕಂಭಗಳಿಗೆ ಮೆತ್ತುವ ಜನರನ್ನು ನೋಡಿ ಅವರಿಗೆ ಕೋಪ ಬರುತ್ತಿತ್ತು.

ಈಗ ಅವರ ಹೋಟೆಲ್ ಬಗ್ಗೆ ಚಕಾರ ಎತ್ತುವವರು ಯಾರೂ ಇರಲಿಲ್ಲ. ಆದರೆ, ಅಂದು ಅವತ್ತು ಒಂದು ಬೊಟ್ಟು ಅವರ ಯಶಸ್ಸಿನ ಹಾದಿಯಲ್ಲಿ ಸ್ಪೀಡ್ ಬ್ರೇಕರ್ ಆಗಿ ಬಂದಿತ್ತು. ಹತ್ತು ರೂಪಾಯಿಯ ಒಂದು ಸಣ್ಣ ಬೊಟ್ಟನಿಂದ, ಭಾರಿ ಬೆಲೆ ತೆತ್ತಬೇಕಾಯಿತು. ಎಂದು ಮರೆಯದ ಪಾಠವಾಯಿತು.

***

ಗಂಗೆ – ಕಾವೇರಿ

– ಸಿಂಧು ಹರಿತಸ್

ಅಂದು ಶಿವರಾತ್ರಿಯ ದಿನ. ಶಿವನ ದರ್ಶನ ಪಡೆದು ಕೃತಾರ್ಥಳಾಗಲೆಂದು ಕಾವೇರಿಯು ಕೈಲಾಸಕ್ಕೆ ಬಂದಳು. ಸೂರ್ಯನ ಪ್ರಕೋಪಕ್ಕೆ ಬೆಂದು ಬಡವಾಗಿಹೋಗಿದ್ದಳು ಆಕೆ. ನಿತ್ರಾಣ ದೇಹವನ್ನು ಹೊತ್ತು ಅದು ಹೇಗೆ ಅಷ್ಟು ದೂರ ಪ್ರಯಾಣ ಬೆಳೆಸಿದ್ದಳೊ ಆ ಪರಮಾತ್ಮನೇ ಬಲ್ಲ!

ಶಿವನು ಧ್ಯಾನದಲ್ಲಿ ತಲ್ಲೀನನಾಗಿದ್ದ. ಅವನು ಎಚ್ಚರವಾಗುವವರೆಗೂ ಅಲ್ಲಿಯೇ ಒಂದು ಮೂಲೆಯಲ್ಲಿ ಏದುಸಿರು ಬಿಡುತ್ತ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತ ಕುಳಿತುಬಿಟ್ಟಳು ಕಾವೇರಿ.

ಇತ್ತ ಶಿವನ ಹೂತೋಟದಲ್ಲಿ ಆನಂದದಿಂದ ವಿಹರಿಸುತ್ತಿದ್ದಳು ಗಂಗೆ. ದೂರದಲ್ಲೆಲ್ಲಿಂದಿಲೋ ಪಂಚಾಕ್ಷರಿ ಮಂತ್ರದ ಸದ್ದು ಅವಳ ಕಿವಿಗೆ ಬಿತ್ತು. ಗಮನಿಸಿದಾಗ, ಆ ಧ್ವನಿಯನ್ನು ಎಲ್ಲೋ ಕೇಳಿರುವಂತೆ ಅನಿಸಿದರೂ ಗುರುತು ಸಿಗದೆ, ಅದಾರೆಂದು ನೋಡಲು ಈಶ್ವರನ ಆಸ್ಥಾನದೆಡೆಗೆ ಬಂದಳು ಗಂಗೆ. ಅಲ್ಲಿ ಧ್ಯಾನದಲ್ಲಿ ಮಗ್ನಳಾಗಿದ್ದ ಕಾವೇರಿಯನ್ನು ಕಂಡು ಸುಮ್ಮನೆ ಹೊರಟುಬಿಟ್ಟಳು. ಸ್ವಲ್ಪ ದೂರದಲ್ಲಿ ಚಂದ್ರನಿದ್ದ. ಅವನನ್ನು ನೋಡಿದಾಕ್ಷಣ ಏನೋ ಹೇಳುವ ತವಕದಿಂದ ಓಡಿದಳು ಗಂಗೆ.

"ಕಾವೇರಿಯನ್ನು ನೋಡಿದೆಯಾ, ಹೇಗೆ ಸೊರಗಿಹೋಗಿದ್ದಾಳೆ ಪಾಪ!" ಎಂದು ಅಪಹಾಸ್ಯ ಮಾಡಿ ನಕ್ಕಿದಳು ಗಂಗೆ. ಚಂದ್ರನಿಗೆ ಅವಳ ವ್ಯಂಗ್ಯ ಸ್ವಲ್ಪ ಮುಜುಗರ ತಂದಿತು.

"ಕಾವೇರಿ ಬಂದಿದ್ದಾಳೆಯೇ, ಎಲ್ಲಿದ್ದಾ ?" ಎಂದು ಅಭಿಮಾನದಿಂದ ಕೇಳಿದನು ಚಂದ್ರ.

"ಶಿವನ ಆಸ್ಥಾನದಲ್ಲಿ ಗೋಡೆಗೆ ಒರಗಿ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಕುಳಿತಿದ್ದಾಳೆ. ನನ್ನ ಹಾಗೆ ಆರೋಗ್ಯವಂತಳಾಗಲು ಆ ಭಗವಂತನಲ್ಲಿ ಬೇಡಲು ಬಂದಿದ್ದಾಳೋ ಏನೋ!" ಎಂದು ಚುಚ್ಚುಮಾತು ಮುಂದುವರೆಸುತ್ತ ಹೇಳಿದಳು ಗಂಗೆ.

"ಹಣ್ಣೆಲೇನ ನೋಡಿ ಚಿಗುರೆಲೆ ನಕ್ಕಂತಿದೆ ನಿನ್ನ ಮಾತು. ಇದು ನಿನಗೆ ಶೋಭೆಯಲ್ಲ ಗಂಗಾ" ಎಂದು ಅವಳಿಗೆ ತಿಳಿಹೇಳಿದನು ಚಂದ್ರ.

"ಅವಳು ಹಣ್ಣೆಲೆ, ನಾನು ಚಿಗುರೆಲೆಯೇ! ನಾನು ಹಿರಿಯಳು. ನಾನು ಎಲ್ಲರಿಂದ ಪೂಜಿಸಲ್ಪಡುವವಳು. ದಷ್ಟಪುಷ್ಟವಾಗಿರುವ ನಾನೆಲ್ಲಿ, ನಿಲ್ಲಲೂ ಶಕ್ತಿಯಿಲ್ಲದ ಅವಳೆಲ್ಲಿ! ನಮ್ಮಿಬ್ಬರ ಮಧ್ಯೆ ಎಲ್ಲಿಯ ಸಾಮ್ಯತೆ?" ಎಂದು ಸೊಕ್ಕಿಂದ ವದರಿದಳು ಗಂಗೆ.

"ನೀನು ತಪ್ಪು ತಿಳಿದಿದ್ದೀಯ ಗಂಗೆ. ಸತ್ಯದ ದರ್ಶನ ಮಾಡಿಸುತ್ತೇನೆ ಕೇಳು. ಭೂದೇವಿಯು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಸಮಯವದು. ಹಾ... ಗರ್ಭದಲ್ಲಿ ಶಿಶುವು ಭ್ರೂಣಾವಸ್ಥೆಯಲ್ಲಿದ್ದಾಗ ಜೀವಕೋಶಗಳು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗವಾಗುತ್ತ ಬೇರೆಬೇರೆ ಅಂಗಾಂಗಗಳನ್ನು ಸೃಷ್ಟಿಸುತ್ತವೆ ಅನ್ನುವುದು ನಿನಗೆ ತಿಳಿದಿದೆಯಲ್ಲವೇ?" ಚಂದ್ರ ಗಂಗೆಯನ್ನು ಕೇಳಿದ.

"ಹೌದು. ಅದು ಮಗುವಿನ ಬೆಳವಣಿಗೆಯ ಮುಖ್ಯವಾದ ನೈಸರ್ಗಿಕ ಕ್ರಿಯೆ" ಗಂಗೆ ಉತ್ತರಿಸಿದಳು.

"ಹಾಗೆಯೇ ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯ ಮೇಲ್ಮೈ ಈಗಿನ ಹಾಗಿರಲಿಲ್ಲ. ಉತ್ತರ ದಿಕ್ಕಿನಲ್ಲಿ ಅಂಗಾರ ಮತ್ತು ದಕ್ಷಿಣದಲ್ಲಿ ಗೋಂಡ್ವಾನ ಎಂಬ ಎರಡು ಮಹಾಖಂಡಗಳಿದ್ದವು. ಈಗಿನ ಉತ್ತರ ಅಮೇರಿಕ, ಯುರೋಪ್ ಮತ್ತು ಏಷಿಯಾಗಳು

ಅಂಗಾರದ ಭಾಗವಾಗಿದ್ದರೆ, ಈಗಿನ ದಕ್ಷಿಣ ಅಮೇರಿಕ, ಆಫ್ರಿಕ ಮತ್ತು ಆಸ್ಟ್ರೇಲಿಯಾಗಳು ಗೋಂಡ್ವಾನಾ ಭಾಗಕ್ಕೆ ಸೇರಿದ್ದವು. ಖಂಡಗಳನ್ನು ತಟ್ಟೆಗಳೆಂದೂ ಕರೆಯುವುದುಂಟು."

ಗಂಗೆ ಚಂದ್ರನ ಮಾತನ್ನು ಅತ್ಯಾಶ್ಚರ್ಯದಿಂದ ಕೇಳಿಸಿಕೊಳ್ಳುತ್ತಿದ್ದಳು. ಚಂದ್ರನು ಮುಂದುವರೆಸಿದ. "ಭರತಖಂಡವು ಅಂದಿನ ಗೋಂಡ್ವಾನದ ಭಾಗವಾಗಿತ್ತು. ಡೈನಸೋರ್‌ಗಳು ಭೂಮಿಯಿಂದ ನಶಿಸಿಹೋದ ನಂತರದ ಸಮಯದಲ್ಲಿ, ಅಂದರೆ ಸರಿ ಸುಮಾರು ಹತ್ತರಿಂದ ಹದಿನೈದು ಸಾವಿರ ಲಕ್ಷ ವರ್ಷಗಳ ಹಿಂದೆ ಭಾರತದ ತಟ್ಟೆಯು ಗೋಂಡ್ವಾನದಿಂದ ತುಂಡರಿಸಿಕೊಂಡು ಉತ್ತರ ದಿಕ್ಕಿಗೆ ಸಾಗಲಾರಂಭಿಸಿತು. ಆಗ ಮುರಿದ ಭೂಖಂಡದಲ್ಲಿ ಹುಟ್ಟಿದ ಬ್ರಹ್ಮಗಿರಿಯ ಪುತ್ರಿಯೇ ಈ ಕಾವೇರಿ".

"ಮತ್ತೆ, ನನ್ನ ಜನನವಾಗಿದ್ದು ಯಾವಾಗ, ಚಂದ್ರದೇವ?" ಕುತೂಹಲದಿಂದ ಪ್ರಶ್ನಿಸಿದಳು ಗಂಗೆ.

"ಭರತಖಂಡವು ಸಾವಿರಾರು ವರ್ಷಗಳ ಕಾಲ ಪ್ರಯಾಣಮಾಡಿದ ನಂತರ ಇಂದಿನ ಏಷಿಯಾ ಖಂಡವನ್ನು ಸೇರಿತು. ಎರಡು ತಟ್ಟೆಗಳು ಡಿಕ್ಕಿ ಹೊಡೆದಾಗ, ಸುಮಾರು ಐವತ್ತು ಲಕ್ಷ ವರ್ಷಗಳ ಹಿಂದೆ ನಿನ್ನ ತಂದೆ ಹಿಮಗಿರಿಯ ಜನನವಾಯಿತು. ತದನಂತರ ನಿನ್ನ ಜನ್ಮ!"

ಈ ಮಾತನ್ನು ಕೇಳಿದ ಗಂಗೆಯ ಮನದಲ್ಲಿ ನಾನಾ ಪ್ರಶ್ನೆಗಳು ಮೂಡಿದವು. ಆದರೆ ಜಂಬವಂತೂ ಇಳಿಯಲಿಲ್ಲ. "ಆದರೂ ನನ್ನನ್ನು ನೋಡು. ಎಷ್ಟು ಸೌಂದರ್ಯಯುತಳಾಗಿ ನವಚೇತನದಿಂದ ಕೂಡಿರುವೆ. ಅವಳಿಗೆಲ್ಲಿ ಆ ಭಾಗ್ಯ!" ಎಂದು ತನ್ನ ಉಬ್ಬುಕಾಯವನ್ನು ತೋರಿಸುತ್ತ ಗರ್ವದಿಂದ ನುಡಿದಳು ಗಂಗೆ.

"ಇದರಲ್ಲಿ ನಿನ್ನ ಹೆಚ್ಚುಗಾರಿಕೆಯೇನಿದೆ ಗಂಗೆ? ನಿನ್ನ ತವರಿನಲ್ಲಿರುವ ಮಂಜಿನರಾಶಿಯ ದೆಸೆಯಿಂದ ನೀನು ನಿತ್ಯ ಸುಂದರಿಯಾಗಿ ಮೆರೆಯುತ್ತಿರುವಿ. ಕಾವೇರಿಯಂತೂ ವರುಣದೇವನ ಕೃಪೆಯಿಂದ ಜನಿಸಿದವಳು. ಸೂರ್ಯನ ಅಟ್ಟಹಾಸ ಹೆಚ್ಚಾದಾಗ ವರುಣದೇವನ ಶಕ್ತಿ ಕುಂದುತ್ತದೆ. ಹಾಗಾಗಿ ಬೇಸಿಗೆಯಲ್ಲಿ ಪಾಪ ಕಾವೇರಿ ಸೊರಗುತ್ತಾಳೆ. ಆಷಾಢ, ಶ್ರಾವಣದ ಹೊತ್ತಿಗೆ ವರುಣನ ಪ್ರಾಬಲ್ಯವು ಹೆಚ್ಚಾಗುತ್ತದೆ. ಆಗ ಕಾವೇರಿಯು ಮತ್ತೆ ಮೈತುಂಬಿ ನಲಿಯುತ್ತಾಳೆ. ಋತುಗಳ ಆಟದಿಂದ ತನ್ನಲ್ಲಾಗುವ ಏರುಪೇರುಗಳಿಂದ ವಿಚಲಿತಗೊಳ್ಳದೆ ಸಮಚಿತ್ತದಿಂದಿರುವ ಗಟ್ಟಿಗಿತ್ತಿ ಆ ಮಹಾತಾಯಿ! ಅದಕ್ಕೆ ಅವಳನ್ನು ಕನ್ನಡ ನಾಡಿನ ಜೀವನದಿ ಎನ್ನುತ್ತಾರೆ. ಜೀವನದಿಯೇನು ಅವಳು ಕನ್ನಡ ನಾಡಿನ ಜೀವನಾಡಿಯೆಂದು ಕರೆದರೂ ತಪ್ಪಿಲ್ಲ" ಚಂದ್ರನ ಉವಾಚ.

ಗಂಗೆ ಕಾವೇರಿಯರ ಜನನದ ಕಥೆ ಮತ್ತು ಕಾವೇರಿಯ ಬದುಕಿನ ಬಗ್ಗೆ ಸತ್ಯವನ್ನರಿತ ಗಂಗೆಗೆ ತನ್ನ ವರ್ತನೆಯ ಬಗ್ಗೆ ನಾಚಿಕೆಯುಂಟಾಯಿತು. ಅಳುಕಿ ತಲೆತಗ್ಗಿಸಿ ನಿಂತಳು. ಗಂಗೆ ಮತ್ತು ಚಂದ್ರರ ನಡುವೆ ನಡೆದ ಸಂಭಾಷಣೆಯನ್ನು ಯೋಗನಿದ್ರೆಯಲ್ಲೇ ಗಮನಿಸಿದ್ದ ಶಿವನು ಮೆಲ್ಲಗೆ ಕಣ್ತೆರೆದ. ಶಿವನ ತಪಸ್ಸು ಮುಗಿದ ಕೂಡಲೆ ಕಾವೇರಿಯೂ ಎದ್ದು ಕಾಲೆಳೆದುಕೊಂಡು ಶಿವನ ಮುಂದೆ ಬರತೊಡಗಿದಳು. ಶಿವನು ಅವಳನ್ನು ನೋಡಿ, ಮತ್ತೆ ಗಂಗೆಯನ್ನು ಅಲ್ಲಿಗೆ ಕರೆಸಿದನು. ಶಿವನ ಕೂಗಿಗೆ ಓಗೊಟ್ಟು ಓಡಿಬಂದಳು ಗಂಗೆ. ಇತ್ತ ಕಾವೇರಿಯು ಬಿಲ್ವಪತ್ರೆಗಳಿಂದ ಶಿವನನ್ನು ಭಕ್ತಿಯಿಂದ ಪೂಜಿಸಿ, ಅವನಿಗೆ ತಲೆಬಾಗಿ ನಮಿಸಿದಳು.

ಅವಳ ಭಕ್ತಿಯನ್ನು ಮೆಚ್ಚಿದ ಶಿವನು, "ವರುಣದೇವನ ಕೃಪೆ ನಿನ್ನ ಮೇಲೆ ಸದಾ ಇರಲಿ ಮಗು" ಎಂದು ಆಶೀರ್ವದಿಸಿದನು. ಗಂಗೆಯ ಕಡೆ ತಿರುಗಿ, "ಗಂಗೆ, ನಿನ್ನ ಅಕ್ಕ ಬಂದಿದ್ದಾಳೆ. ಅವಳನ್ನು ಆದರದಿಂದ ಸತ್ಕರಿಸಮ್ಮ" ಎಂದು ಆಜ್ಞಾಪಿಸಿದನು. ಗಂಗೆಯು ತಲೆಯಾಡಿಸಿ ಕಾವೇರಿಯ ಕೈಹಿಡಿದಳು. ಇಬ್ಬರೂ ಶಿವನ ಅಪ್ಪಣೆ ಪಡೆದು ಅಲ್ಲಿಂದ ನಿರ್ಗಮಿಸಿದರು. ಗಂಗೆ ಮತ್ತು ದಕ್ಷಿಣ ಗಂಗೆಯರು ಸ್ನೇಹದಿಂದ ಒಟ್ಟಿಗೆ ಸಾಗುತ್ತಿರುವುದನ್ನು ಕಣ್ತುಂಬಿಕೊಂಡು ಆನಂದಿಸಿದನು ಶಿವ.

***

ಮುಂಡಿಗೆಗಳು

- ಗಣಪತಿ ಹೆಗಡೆ

"ಹಾಡಿದ್ದೇ ಹಾಡ್ತಾನೆ ಕಿಸ್ಬಾಯಿ ದಾಸ" ಎನ್ನುವ ಮಾತನ್ನು ನಾವೆಲ್ಲಾ ಕೇಳಿಯೇ ಇರುತ್ತೇವೆ. 'ಇವನೊಬ್ಬ ವಾಚಾಳಿ. ಮಾತನಾಡುವ ಚಪಲ. ಆದುದರಿಂದ ಹೇಳಿದ್ದನ್ನೇ ಪುನಃ ಪುನಃ ಹೇಳುತ್ತಾನೆ' ಎನ್ನುವುದು ಮೇಲ್ನೋಟಕ್ಕೆ ತಿಳಿಯುವ ಅರ್ಥ.

ಆದರೆ ದಾಸರು ಇದನ್ನು ಅರ್ಥೈಸುವ ಕ್ರಮವೇ ಬೇರೆ.

ಕಿಸ್ಬಾಯಿ ಅಂದರೆ ಅಗಲವಾಗಿ ತೆರೆದ ಬಾಯಿ. ಅಂದರೆ ಹಿರಣ್ಯಕಶಿಪುವನ್ನು ಕೊಂದ ನರಸಿಂಹ ದೇವರು. ಅವನ ದಾಸ ಅಂದರೆ ಭಕ್ತನೇ ಪ್ರಲ್ಹಾದ. ಪ್ರಲ್ಹಾದ ಪದೇಪದೇ ಹಾಡುವುದು ಹರಿಯ ಭಜನೆ. ಎಂಬಲ್ಲಿ 'ಪ್ರಲ್ಹಾದರಾಯರು ಸದಾ ಹರಿಯ ಸಂಕೀರ್ತನೆಯಲ್ಲಿ ತೊಡಗಿಕೊಂಡಿರುತ್ತಾರೆ ಎನ್ನುವುದು ಗೂಢಾರ್ಥ.

ಇಂತಹ ವಾಕ್ಯ ಅಥವಾ ವಾಕ್ಯಸಮೂಹವನ್ನೇ ಮುಂಡಿಗೆ ಎನ್ನುತ್ತಾರೆ.

ಕವಿಗಳು ಗೂಢವಾದ ಅಥವಾ ಸಂಕೀರ್ಣವಾದ ಅರ್ಥವನ್ನು ಹೊಂದಿರುವ ರೀತಿಯಲ್ಲಿ ರಚಿಸಿದ ಪದ್ಯಗಳು.

ಮುಂಡಿಗೆ ಅಂದರೆ ಗಟ್ಟಿಯಾದ ಮರದ ದಿಮ್ಮಿ ಅಂತ ಅರ್ಥ. ಸುಲಭವಲ್ಲ ಅಂತ ಅರ್ಥ.

ಮೇಲಿನ ಉದಾಹರಣೆಯನ್ನು ಗಮನಿಸಿದರೆ ಇದು ಮನೋರಂಜನೆಗೆ ಸಹಾಯಕಾರಿಯಾಗಿಯೂ ಇರುತ್ತದೆ.

'ಹನ್ನೆರಡನೇ ನಕ್ಷತ್ರದವಳ ತಾಯಿಯ ತಮ್ಮನನ್ನು ಗುದ್ದಿ ಗುದ್ದಿ ಕೊಂದವನ ಅಣ್ಣನ ತಂದೆಯ ವಾಹನನ ಹೆಂಡತಿ ಗಂಡು ಮಗುವನ್ನು ಹಡೆದಳು' ಎನ್ನುವದರ ಅರ್ಥ 'ಎಮ್ಮೆಗೆ ಗಂಡುಗರು ಆಯಿತು' ಎಂದು ಹೇಳಿದರೆ ಎಷ್ಟು ಮಂದಿಗೆ ಅರ್ಥವಾದೀತು?.

ಹನ್ನೆರಡನೇ ನಕ್ಷತ್ರ = ಉತ್ತರಾ
ಅವಳ ತಾಯಿ = ಸುದೇಷ್ಣೆ
ಅವಳ ತಮ್ಮ = ಕೀಚಕ
ಅವನನ್ನು ಕೊಂದವನು = ಭೀಮ
ಅವನ ಅಣ್ಣ = ಧರ್ಮರಾಯ
ಅವನ ತಂದೆ = ಯಮಧರ್ಮ
ಅವನ ವಾಹನ= ಕೋಣ
ಕೋಣನ ಹೆಂಡತಿ = ಎಮ್ಮೆ
ಎಮ್ಮೆ ಗಂಡು ಕರು ಹಾಕಿತು ಎನ್ನುವುದು ಅರ್ಥ.

ಹೀಗೆ ನೇರವಾಗಿ ತಿಳಿಯುವ ಅರ್ಥಕ್ಕಿಂತ ಆಳವಾಗಿ ಅಧ್ಯಯನ ಮಾಡಿದಾಗ ತಿಳಿಯುವ ಅರ್ಥ ಬೇರೆಯದೇ ಇರುತ್ತದೆ.

ಕನಕದಾಸರ ಕೃತಿಯಲ್ಲಿರುವ ಮುಂಡಿಗೆ:

ಪರಮಪುರುಷ ನೀನೆಲ್ಲಿಕಾಯಿ
ಸರಸಿಯೊಳಗೆ ಕರಿಕೂಗಲುಕಾಯಿ
ಹಿರಿದು ಮಾಡಿದ ಪಾಪ ನುಗ್ಗೇಕಾಯಿ
ಹರಿ ನಿನ್ನ ಧ್ಯಾನ ಬಾಳೇಕಾಯಿ
ಸರುವ ಜೀವರ್ಗುಣಿಸಿಯುಂ ಬದನೆಕಾಯಿ
ಅರಿಷಡ್ವರ್ಗಗಳೊದಗಿಲಿಕಾಯಿ"

ಇದೆಲ್ಲಿಯ ನೆಲ್ಲಿಕಾಯಿ, ಕರಿಕೂಗಲುಕಾಯಿ, ನುಗ್ಗೇಕಾಯಿ, ಬಾಳೇಕಾಯಿ ಅಂತ ಗಾಬರಿಯಾಗಬೇಡಿ. ಇದು ಕನಕದಾಸರು ರಚಿಸಿದ ಒಂದು ಮುಂಡಗೆಯ ಉದಾಹರಣೆ ಅಷ್ಟೇ.

ತಾತ್ಪರ್ಯ:–

ಪರಮಪುರುಷನೇ ನೀನೆಲ್ಲಿದ್ದೀಯ? ನನ್ನನ್ನು ರಕ್ಷಿಸು (ನೀನೆಲ್ಲಿ ಕಾಯಿ)
ಸರೋವರದಲ್ಲಿ ಗಜೇಂದ್ರ ಮೊಸಳೆಯ ಬಾಯಿಗೆ ಸಿಕ್ಕಿ ಕೂಗಿಕೊಂಡಾಗ ಕಾಪಾಡು (ಕರಿಕೂಗಲು ಕಾಯಿ)
ಅಪಾರವಾದ ಪಾಪ ಸಂಚಯವನ್ನೆಲ್ಲಾ ನುರಿದು ಪುಡಿಪುಡಿಯಾಗುವಂತೆ ಮಾಡು (ನುಗ್ಗೆ ಕಾಯಿ)
ಹರಿ ನಿನ್ನ ಧ್ಯಾನವೇ ಉಸಿರಾಗಿ ಬಾಳುವಂತೆ ಮಾಡು (ಬಾಳೇಕಾಯಿ)
ಎಲ್ಲ ಜೀವರಾಶಿಗಳನ್ನೂ ಉಣಿಸಿ ತಣಿಸಿ ಬೆಳೆಸುವ ನೀನು ಮಾತ್ರ ಉಣ್ಣದವನು (ಜೀವರಿಗುಣಿಸಿಯುಂಬದನೆಕಾಯಿ)
ಅರಿಷಡ್ವರ್ಗಗಳಿಲ್ಲದಂತೆ ರಕ್ಷಿಸು (ಇಲಿಕಾಯಿ)"

ಇದು ಒಳಾರ್ಥ.

ಇನ್ನೊಂದು ಮುಂಡಿಗೆ:

"ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ,
ಇದರ ಕುರುಹು ಪೇಳಿ ಕುಳಿತಿರುವ ಜನರು,
ಒಂಟಿ ಕೊಂಬಿನ ಪಕ್ಷಿ ಒಡಲೊಳಗೆ ಕರುಳಿಲ್ಲ
ಗಂಟಲು ಮೂರು ಉಂಟು ಮೂಗಿಲ್ಲ
ಕುಂಟು ಮನುಜನ ತೆರದಿ ಕುಳಿತಿಹುದು ಮನೆಯೊಳಗೆ
ಎಂಟು ಹತ್ತರ ಭಕ್ಷ್ಯ ಭಕ್ಷಿಸುವುದು"

ತಾತ್ಪರ್ಯ:–

ಬೀಸುವ ಕಲ್ಲನ್ನು ಹಿಡಿದು ಬೀಸುವ ಮರದ ಗೂಟವೇ ಒಂಟಿ ಕೊಂಬು. ಹೊಟ್ಟೆಯಲ್ಲಿ ಏನೂ ಇಲ್ಲ. ಖಾಲಿ ಶರೀರ. ಬೀಸುವ ಕಲ್ಲಿನ ಮೇಲ್ಭಾಗದ ಕಲ್ಲಿನಿಂದ ಧಾನ್ಯ ಇಳಿಯಲು ಮಾಡಿರುವ ಮೂರು ರಂಧ್ರಗಳು. ಉಸಿರಾಟಕ್ಕೆ ಮೂಗು ಇಲ್ಲ. ಎಲ್ಲಿಯೂ ಚಲಿಸದೇ ಕುಂಟನ ಹಾಗೆ ಇರುವುದು. ಹತ್ತು ಹಲವಾರು ಧಾನ್ಯಗಳನ್ನು ಅದರ ಬಾಯಲ್ಲಿಟ್ಟಾಗ ತಿಂದು ಹಾಕುವುದು. ಇದು ಸಾಮಾನ್ಯವಾದ ಮೇಲುನೋಟದ ಅರ್ಥ.

ಪಾರಮಾರ್ಥಿಕ ಅರ್ಥ ಬೇರೆಯೇ ಇದೆ:

ಪಾರಮಾರ್ಥಿಕ ಅರ್ಥದಲ್ಲಿ ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ ಎಂದರೆ ಮಾಯೆಯನ್ನು ನುಂಗುವ ಚೈತನ್ಯ ರೂಪಿ ಪರಮಾತ್ಮ ದೇಹವೆಂಬ ಮನೆಯೊಳಗೆ ಬಂದು ಕುಳಿತಿದ್ದಾನೆ. ಓಂ ಎಂಬಲ್ಲಿ ಓ ಅಕ್ಷರದ ಮೇಲೆ ದೀರ್ಘ ಸ್ವರದ

ಕೊಂಬಿದೆ. ಸಾಂಸಾರಿಕ ವ್ಯಾಮೋಹದ ಕರುಳು ಒಡಲಿನಲ್ಲಿಲ್ಲ. ಓಂಕಾರದ ಅ ಉ ಮ ಮೂರಕ್ಷರಗಳೇ ಮೂರು ರಂದ್ರಗಳು. ವಿಷಯ ವಾಸನೆಯ ಗುಂಗಿಲ್ಲವೆಂಬುದೇ ಮೂಗಿಲ್ಲವೆಂಬುದರ ಅರ್ಥ. ಪಂಚಭೂತಗಳು, ಮನ, ಬುದ್ಧಿ, ಅಹಂಕಾರಗಳೂ ಸೇರಿ ಎಂಟು ಹಾಗೂ ಜ್ಞಾನೇಂದ್ರಿಯಗಳು ಹಾಗೂ ಕರ್ಮೇಂದ್ರಿಯಗಳೂ ಸೇರಿ ಹತ್ತು ಇವುಗಳ ಮೂಲಕ ಎಲ್ಲಾ ವಿಷಯ ಗಳನ್ನೂ ಅರಗಿಸಿಕೊಳ್ಳುವುದು ಅಂದರೆ ನಿರ್ಲಿಪ್ತತೆಯನ್ನು ತಂದುಕೊಳ್ಳುವುದು ಎಂದಾಗುತ್ತದೆ.

ಮುಂಡಿಗೆಗಳನ್ನು ಅರ್ಥೈಸಿಕೊಳ್ಳಬೇಕೆಂದರೆ:

೧. ಪ್ರತಿ ಪದವನ್ನು ಬೇರ್ಪಡಿಸಿ ಅದರ ಅರ್ಥವನ್ನು ವಿಶ್ಲೇಷಿಸಬೇಕು.

೨. ಪದ್ಯವನ್ನು ಯಾವ ಸಂದರ್ಭದಲ್ಲಿ ಬರಿದಿದ್ದಾರೆ ಅಂತ ತಿಳಿದುಕೊಳ್ಳಬೇಕು.

೩. ಇತಿಹಾಸ, ಪುರಾಣಗಳು ಹಾಗೂ ಇತರ ಕಾವ್ಯಗಳಲ್ಲಿ ಆಳವಾದ ಜ್ಞಾನವನ್ನು ಹೊಂದಿದ್ದು ಪ್ರಸ್ತುತ ಮುಂಡಿಗೆಯಲ್ಲಿ ಬರುವ ಶಬ್ದಗಳಿಗೆ ಅರ್ಥ ಹುಡುಕಲು ಸಮರ್ಥವಾದ ತರಬೇತಿ ಹೊಂದಿರಬೇಕು.

***

ಕನ್ನಡಿಗನೊಬ್ಬನ ಕಳವಳ

– ಮನೋಹರ ಎಂ.ಗೋಖಲೆ

ಕನ್ನಡ ಮನೆಮನೆಗಳಲಿ ಜನರ ಮಾತಾಗಿತ್ತು
ರಾಜ ಮಹಾರಾಜರ ಆಶ್ರಯ ಆಶೀರ್ವಾದವಿತ್ತು
ಕವಿ ಕಾವ್ಯ ಗುರು ಪರಂಪರೆಯಲಿ ಬೆಳಗುತ್ತಿತ್ತು
ಯಕ್ಷಗಾನ ಗಮಕ ಜನಪದದಿಂದ ಬೆಳೆಯುತ್ತಿತ್ತು
ವಿದೇಶೀಯರಿಂದ ಮಾನ್ಯತೆ ಗಳಿಸಿಕೊಂಡಿತ್ತು

ನ್ಯಾಯಾಂಗ ಕಾರ್ಯಾಂಗ ಇಂಗ್ಲಿಷ್ ಮಯವಾಗಿತ್ತು
ಕಾಲೇಜು ಶಿಕ್ಷಣ ಇಂಗ್ಲಿಷಿನಲಿ ಮುಂದುವರಿದಿತ್ತು
ಇಂಗ್ಲಿಷ್ ಓದಿನ ವ್ಯಾಮೋಹ ಬೆಳೆಯತೊಡಗಿತ್ತು
ಜನರಲ್ಲಿ ಕನ್ನಡ ಅಭಿಮಾನ ಸೊರಗತೊಡಗಿತ್ತು
ಸರಕಾರದ ನೀತಿನಿಯಮವೂ ಸಡಿಲವಾಗಿತ್ತು

ಭಾಷಾವಾರು ರಾಜ್ಯ ರಚನೆ ದಾರಿ ತೋರಿಸಿತ್ತು
ರಾಜ್ಯಾಡಳಿತಕೆ ದಾರಿ ಮಾತ್ರ ಕಾಣದಾಗಿತ್ತು
ಕರ್ನಾಟಕ ರಾಜ್ಯ ನಾಮಕರಣ ಖುಷಿ ತಂದಿತ್ತು
ಗೋಕಾಕ್ ವರದಿ ಚಳುವಳಿ ಕಿಚ್ಚು ಹಬ್ಬಿಸಿತ್ತು
ಮಹಿಷಿ ವರದಿ ಕನ್ನಡಿಗರನು ಬಡಿದೆಚ್ಚರಿಸಿತ್ತು

ಪರಿಷತ್ತು ಅಕಾಡೆಮಿ ಪ್ರಶಸ್ತಿ ನೀಡಿಕೆಗೆ ಸೀಮಿತ
ಇಲಾಖೆ ಪ್ರಾಧಿಕಾರ ಅಧಿಕಾರದಾಹಿಗಳಿಗೆ ಮಿತ
ಸಂಘಸಂಸ್ಥೆಗಳ ಕಾರ್ಯ ಸ್ಥಳೀಯರಲ್ಲೇ ಸ್ಥಿತ
ಕನ್ನಡಪರ ಚಳುವಳಿ ಬೆಂಗಳೂರಿಗೆ ಪರಿಮಿತ
ಮಂತ್ರಿಗಳ ಭರವಸೆ ಭಾಷಣಗಳಿಗಷ್ಟೇ ಹಿತ

ಪ್ರೌಢಶಾಲೆ ತನಕ ಕನ್ನಡ ಕಡ್ಡಾಯವಾಗಲಿಲ್ಲ
ಪೋಷಕರಿಗೂ ಮಕ್ಕಳಿಗೂ ಕನ್ನಡ ಬೇಕಾಗಲಿಲ್ಲ
ಆಂಗ್ಲ ಶಾಲೆಗಳ ಮೇಲೆ ಕಡಿವಾಣ ಬೀಳಲಿಲ್ಲ
ಪದವಿ ಕನ್ನಡದ ಪಠ್ಯಕ್ರಮ ವಿಸ್ತಾರವಾಗಲಿಲ್ಲ
ಮಾಧ್ಯಮಗಳಿಗೂ ಕನ್ನಡ ಪ್ರೀತಿ ಬೇಕಾಗಿರಲಿಲ್ಲ

ಗ್ರಾಮಾಂತರದಲ್ಲೂ ಕನ್ನಡ ಶಾಲೆಗೆ ಬಲವೇ ಇಲ್ಲ
ಅಭಿವೃದ್ಧಿಗೆ ಪೂರಕ ಸಾಹಿತ್ಯ ಸೃಷ್ಟಿ ಆಗಲೇ ಇಲ್ಲ
ರಾಜಕೀಯದಲ್ಲಿ ಇಚ್ಛಾಶಕ್ತಿ ಮೂಡುತ್ತಲೇ ಇಲ್ಲ
ರಾಜ್ಯದಲಿ ಕನ್ನಡ ಅನ್ನದ ಭಾಷೆಯಾಗಲೇ ಇಲ್ಲ
ಕವಿ ಕನಸಿನ ಕನ್ನಡನಾಡು ಉದಯವಾಗಲೇ ಇಲ್ಲ.

***

ಏನು ಪುಕ್ಕರಪ್ಪ ನೀವು

– ಗೋಪಿನಾಥ್

ಸಾಯಂಕಾಲ, ಅಮಾವಾಸ್ಯೆ ಕತ್ತಲು ಜೊತೆಗೆ ಜಿಟಿ ಜಿಟಿ ಮಳೆ, ನನ್ನವಳು ನಾಮಕರಣಕ್ಕೆ ಹೋಗಿದ್ದಳು. ಬೇಗ ಬಂದಬುಡ್ತೀನಿಂತ ಹೋದವಳು ಏಳು ಗಂಟೆಯಾದರು ಬರಲಿಲ್ಲ,

ಮೊದಲೆ ಹೊಸ ಲೇಔಟ್, ಹೆಚ್ಚು ಮನೆಗಳಿಲ್ಲ. ಹೇಗೆ ಬಂದರೂ ಹುಣಿಸೆ ತೋಪು ಒಳಗಿನಿಂದ ಹಾದುಹೋಗಬೇಕು/ ಬರಬೇಕು. ಛತ್ರಿ ತೆಗೆದುಕೊಂಡು ಹೊರಟೆ, ಪತಿ ಕರ್ತವ್ಯ ನೆರವೇರಿಸಬೇಕಲ್ಲ. ಹೊಸ ಜಾಗ. ತಲೆ ಒಡೆದರೂ ಕೇಳೋರಿಲ್ಲ. ನನಗೇ ಭಯ. ಅಂತಹದರಲ್ಲಿ ಇವಳು ಹೇಗೆ ಬಂದಾಳು ಎಂದು ಇದ್ದಬದ್ದ ಧೈರ್ಯ ಒಟ್ಟುಗೂಡಿಸಿ ನನಗೆ ನಾನೇ,. "ಪರವಾಗಿಲ್ಲ ಹೋಗು" ಎಂದು ಹೇಳಿಕೊಂಡು ಹೊರಟೆ, ಇವಳಿಗೇಕೆ ಬುದ್ದಿಯಿಲ್ಲ, ಇವಳಿಂದ ನನಗೂ ತೊಂದರೆ ಕೊಡುತ್ತಾಳೆಂದು ಶಪಿಸಿದೆ.

ಏನಾದರೂ ಹೇಳಿದರೆ.. "ಇದು ಸ್ಮಶಾನದಲ್ಲಿ ಸೈಟ್ ಮಾಡಿರೊ ಜಾಗ, ಬೇಧಾಂತ ನಾ ಬಡಕೊಂಡೆ. ನನ್ನ ಮಾತೆಲ್ಲಿ ಕೇಳಿದಿರಿ, ಅನುಭವಿಸಿ" ಎನ್ನುತ್ತಾಳೆ. ಜೊತೆಗೆ ನಿಮ್ಮಿಂದ ನನಗೂ ಗೋಳು ತಪ್ಪಿದ್ದಲ್ಲ ಎಂದು ಹಿಡಿ ಶಾಪ ಹಾಕೋದು ತಪ್ಪಿರಲಿಲ್ಲ. ಬಿಡಿ ಅವಳದು ಇದ್ದದ್ದೇ, ಆರಕ್ಕೇ ಏರಲ್ಲ ಮೂರಕ್ಕೆ ಇಳಿಯಲ್ಲ. ಸರಿ, ಈಗ ಅರ್ಧ ಕಿಲೋಮೀಟರ್ ನಡೆದು ತೋಪಿನ ಒಳಗೆ ಹೋದೆ.

ಮೊದಲೇ ಧೈರ್ಯವಂತ. ಎರಡು ಹೆಜ್ಜೆ ಮುಂದಡಿಯಿಟ್ಟೆ. ಧೊಪ್ ಅಂತ ಹಿಂದುಗಡೆ ಮರದ ಕೊಂಬೆ ಬಿತ್ತು! "ಅಮ್ಮ.. ಅಯ್ಯೋ..'' ಅಂತ ಕೂಗಿಕೊಂಡೆ. ಕಗ್ಗತ್ತಲು, ಒಂದು ನರಪಿಳ್ಳೆಯೂ ಕಾಣಲ್ಲ. ಸುಡುಗಾಡು ಬ್ರೋಕರ್ ಯಾಕೆ ಈ ಸೈಟು ಕೊಡಸಿದ ಎಂದು ಶಪಿಸುತ್ತ ಹೊರಟೆ.

ಅವನನ್ನ ಶಪಿಸಿ ಏನು ಪ್ರಯೋಜನ. ಇದು ಶಪಿಸುವ ಸಮಯವಲ್ಲ ಎನಿಸಿ, "ದೇವರ ಸ್ತೋತ್ರ ಪಠಿಸು, ಧೈರ್ಯ ಬರುತ್ತೆ" ಎಂದು ಬಾಯಿಗೆ ಬರುವುದೆಲ್ಲವನ್ನೂ ಗಟ್ಟಿಯಾಗಿ ಹೇಳಿಕೊಳ್ಳುತ್ತ ನನ್ನ ಧ್ವನಿ ನನಗೇ ಅಪ್ಪಳಿಸುವಹಾಗೆ ಹೇಳಿಕೊಳ್ಳುತ್ತ ಸಾಗಿದೆ. ಅಕ್ಕಪಕ್ಕದ ಸಣ್ಣಪುಟ್ಟ ಪ್ರಾಣಿಗಳು ಕಂಗಾಲಾಗಿ ಓಡಿದವು, ಸ್ವಲ್ಪ ಸಮಾಧಾನವಾಯಿತು. ನನಗಿಂತಲೂ ಪುಕ್ಕಲು ಜಂತಗಳು ಇವೆ ಈ ಪ್ರಪಂಚದಲ್ಲಿ ಎಂಬುದನ್ನು ಮೊದಲಬಾರಿಗೆ ಅರಿತೆ. ಹೀಗೆ ಕತ್ತಲಲ್ಲಿ ಹೆದರಿ ನಡೆಯುವಾಗ ಯಾವ ದಾರಿಯಲ್ಲಿ ಸಾಗುವುದೆಂದು ತಿಳಿಯದೆ ಅರ್ಧಕಿಲೋಮೀಟರ್ ಆದ ಮೇಲೆ ಒಂದು ಕಟ್ಟೆ ಸಿಗುತ್ತೆ, ಅದರ ಬಲಭಾಗಕ್ಕೆ ತಿರುಗಬೇಕೆಂಬುದು ಮರೆತುಹೋಗಿ ನೇರವಾಗಿ ಬಂದುಬಿಟ್ಟಿದ್ದೆ! ಬರುಬರುತ್ತ ತೋಪು ಕಡಿದಾಗುತ್ತ ಹೋಯಿತು. ದಾರಿ ತಪ್ಪಿ ಬಂದಿರುವುದು ತಿಳಿದು ನಾಲಿಗೆಯ ಪಸೆ ಆರಿ ಹೋಗಿತ್ತು.

.ದೂರದಲ್ಲಿ ಬೆಂಕಿ ಎದ್ದಿದೆ, ಎದೆ ಡವಗುಟ್ಟುತ್ತಿದೆ.. ನನ್ನ ಎದುರಿಗೆ ಯಾರೋ ಇಬ್ಬರು ಓಡಿ ಹೋದರು. "ನಾ ಬಂದೆ.. ನಾ ಬಂದೆ" ಎಂದು ಇನ್ನೊಬ್ಬನ್ನ ಅಟ್ಟಿಸಿಕೊಂಡು ಓಡಿದ ಹಿಂದಿನವನು.

ಹೆದರಿಕೆಗೆ ಓಡಿ ಹೋಗಬೇಕೆನಿಸಿತು. ಅದೇ ದೆವ್ವಗಳಾಗಿದ್ದರೆ? ಯೋಚನೆಗೆ ಸತ್ತುಹೋಗುವ ಹಾಗಾಯಿತು. ಕಾಲುಗಳು ನಡುಗುತ್ತಿವೆ, ಮುಂದಡಿ ಇಡಲಾಗುತ್ತಿಲ್ಲ, ಬಾಯಿಗೆ ಸ್ತೋತ್ರ ಬರುತ್ತಿದ್ದುದು ಈಗ ಬರುತ್ತಿಲ್ಲ. ಆಗಲೇ ರಾತ್ರಿ ಬಹಳವಾಗಿದೆ, ಗಂಟೆ ಎಷ್ಟೆಂದು ಗೊತ್ತಿಲ್ಲ. ದೇವರೆ ಎಂದು ಯಾವ ದಿಕ್ಕಿನಲ್ಲಿ ಹೊರಟಿದ್ದನೋ ಅದೇ ದಿಕ್ಕಿನಲ್ಲಿ ಹಿಂದಿರುಗಿದೆ.

"ನಾ ಬಂದೆ.. ನಾ ಬಂದೆ'' ಧ್ವನಿ ನಿರಂತರವಾಗಿ ಕೇಳುತ್ತಲಿದೆ.

"ಅಯ್ಯೋ " ಎಂದು ಜೋರಾಗಿ ಕಿರುಚಿಕೊಂಡೆ. ಯಾರಾದರೂ ಉಳಿಸಿ... ಹೆಲ್ಪ್... ಹೆಲ್ಪ್" ಎಂದು ಕೂಗಿದೆ.

"ರೀ..ಏನಾಯಿತು, ಭಯವೇಕೆ. ಕನಸು ಕಂಡಿರಾ. ಏನು ಯೋಚಿಸುತ್ತಿದ್ದಿರಿ, ಏನದು ಅಟ್ಟಿಸಿಕೊಂಡು ಬರುತ್ತಿದ್ದುದು? ತೋಪಿನ ಕಡೆ ಹೋಗಿದ್ದಿರಾ" ಕೇಳಿದಳು.

"ಹೌದು'' ಎಂದೆ.

"ಮಹಾ ಧೈಯಶಾಲಿ, ಮೋಹಿನಿ ಹುಡುಕಿಕೊಂಡು ಹೋಗಿದ್ದಿರಾ, ಅಟ್ಟಿಸಿಕೊಂಡು ಬಂದಳಾ.. ಮೋಹನಾಂಗ, ಹೇಗೆ ಬಿಡ್ತಾಳೆ" ಎಚ್ಚರವಾಗಿಸಿದ್ದಲ್ಲದೆ ಇವಳ ಮೂದಲಿಕೆ ಮಾತುಬೇರೆ ಎಂದುಕೊಂಡೆ.

"ಈ ಸೈಟು ಬೇಡಾಂದೆ, ನನ್ನ ಮಾತೆಲ್ಲಿ ಕೇಳಿದಿರಿ. ಚೀಪಾಗಿ ಸಿಗುತ್ತಿದೆ ಎಂದುದಲ್ಲದೆ, ಈಗ ಮನೆಕಟ್ಟುವುದು ಬೇಡಾಂದೆ.. ನನ್ನ ಮಾತೆಲ್ಲಿ ಕೇಳಿದಿರಿ. ಮನೆ ಕಟ್ಟಿ, ನನ್ನನ್ನೂ ಏಗಿಸಿಕೊಂಡು ಬಂದಿರಿ. ಈಗ ನೋಡಿದರೆ ಮೂರು ದಿನಕ್ಕೊಮ್ಮೆ ಭಯಕ್ಕೆ ಜ್ವರ. ಏನು ಪುಕ್ಕರಪ್ಪ ನೀವು, ನಡೀರಿ ಸಾಯಂಕಾಲ ಹನುಮಂತರಾಯರ ಗುಡಿಗೆ ಹೋಗಿ ತಾಯಿತ ಕಟ್ಟಿಸಿಕೊಂಡು ಬರೋಣ" ಎಂದು ಎಲ್ಲವನ್ನು ಒದರಿ ಮುಸುಕೆಳದಳ!

***

ಟಾಮಾ ಶಾಸ್ತ್ರಿ

– ಉಷಾರಾಣಿ ಟಿ.ಆರ್.

"ಅಮ್ಮಾ, ಸಕಾಲದಲ್ಲಿ ಜನನವಾಗಿದೆ. ಶ್ರೀರಾಮನದೇ ನಕ್ಷತ್ರ, ಪುನರ್ವಸು, ಕರ್ಕಾಟಕ ರಾಶಿ. ತುಂಬಾ ಚೆನ್ನಾಗಿದೆ". ಮನೆಗೆ ಪ್ರತಿನಿತ್ಯ ಬರುವ ಶಾಮಾಶಾಸ್ತ್ರಿಗಳು ಹೇಳಿದ ಮೇಲೆ ಮುಗಿಯಿತು ಅದು ವೇದವಾಕ್ಯ ಪಂಕಜಮ್ಮನವರಿಗೆ.

"ಒಳ್ಳೆಯದಾಯಿತು ಬಿಡಿ ಶಾಮಾಶಾಸ್ತ್ರಿಗಳೇ. ಎಷ್ಟು ಮುದ್ದಾಗಿದಾನೆ, ಆ ಕಣ್ಣು ನೋಡಿ ಅದೆಷ್ಟು ಪ್ರಕಾಶಮಾನವಾಗಿವೆ. ಇವನು ನಮ್ಮ ಮನೆ ಭಾಗ್ಯಜ್ಯೋತಿ" ಎಂದು ಇನ್ನೂ ಅವರು ವಾಕ್ಯವನ್ನು ಪೂರ್ಣಗೊಳಿಸಿಲ್ಲ, ಮೊಮ್ಮಗ ಗುರುಮೂರ್ತಿ ಮನೆಯ ಮುಂಬಾಗಿಲಿನಿಂದಲೇ ಕೂಗುತ್ತಾ ಬಂದ. "ಅಜ್ಜಿ, ನಾನು ಪಾಸಾದೆ. ಫಸ್ಟ್ ಕ್ಲಾಸ್‌ನಲ್ಲಿ." ಪಂಕಜಮ್ಮನವರ ಮುಖ ಅರಳಿತು.

"ನೋಡಿ ಶಾಮಾಶಾಸ್ತ್ರಿಗಳೇ, ಇವನು ಮನೆಗೆ ಬಂದ ಘಳಿಗೆ, ಬರೀ ಶುಭಸುದ್ದೀನೇ. ನನ್ನ ಮೊಮ್ಮೊಗ ಮೂರು ವರ್ಷದ ಬಿ. ಎ ಪರೀಕ್ಷೇನಾ ಕಳೆದ ಆರು ವರ್ಷದಿಂದ ಮಾಡ್ತಾ ಇದ್ದ. ಈಗ ನೋಡಿ".

ಅದುವರೆಗೂ ಪಿಳಿಪಿಳಿ ಎಂದು ಕಣ್ಣು ಬಿಡುತ್ತಾ ಅತ್ತ–ಇತ್ತ ನೋಡುತ್ತಿದ್ದ ನಾಯಿಮರಿ, ಶಾಸ್ತ್ರಿಗಳ ಕಂಕುಳಿಂದ ಜಿಗಿದು ಪಂಕಜಮ್ಮನವರ ಕಾಲು ನೆಕ್ಕಲು ಪ್ರಾರಂಭಿಸಿತು. ಶಾಮಾಶಾಸ್ತ್ರಿಗಳ ವಠಾರದಲ್ಲಿ ಅದರ ತಾಯಿಯ ವಾಸಸ್ಥಾನ, ಸೆಕ್ಯುರಿಟಿ ಗಾರ್ಡ್ ಇದ್ದಹಾಗೆ. ಪಂಕಜಮ್ಮನವರ ಹಿರಿಮಗ ಶಂಕರಶಾಸ್ತ್ರಿಗೆ ಅದನ್ನು ಕಂಡರಾಗುತ್ತಿರಲಿಲ್ಲ. "ಸುಮ್ನೆ ಬೀದಿ ನಾಯಿಗಳನ್ನೆಲ್ಲಾ ಯಾಕಮ್ಮಾ ಮನೆ ಒಳಗೆ ಸೇರಿಸ್ತೀಯ, ನೆಟ್ಟಗೆ ನಾನು ಹೇಳೋ ಮಂತ್ರ ನನಗೇ ಕೇಳಿಸೊಲ್ಲ" ಎನ್ನುತ್ತಿದ್ದರು. ಈಗ ಅದರ ಸಂತತಿಯೂ ಬೆಳೆದು ಪೂರಾ ಖಾನ್ ದಾನ್ ಇವರ ಮನೆಯಲ್ಲೇ ಠಿಕಾಣಿ ಎಂದರಿತಾಗ ಅವರ ಕೋಪ ಮತ್ತಷ್ಟು ನೆತ್ತಿಗೇರಿತು.

"ಲೋ ಶಂಕ್ರಾ, ಶ್ರಾವಣಕ್ಕೆ ನಿನ್ನ ಮೊಮ್ಮಗನ ನಾಮಕರಣ ಇದ್ಯಲ್ಲ ಅದರ ಜೊತೆ ಇವನ ನಾಮಕರಣಾನೂ ಆಗಬೇಕು" ಎಂದು ಆದೇಶ ಹೊರಡಿಸಿದರು ಪಂಕಜಮ್ಮನವರು.

"ಅಮ್ಮ, ಈ ಬೀದಿ, ಪಕ್ಕದ ಬಿದೀಲಿ ಇದರ ನೆಂಟರಿಷ್ಟರೆಲ್ಲಾ ಇರ್ತಾರೇ ಎಲ್ಲಾ ನಾಯಿಗಳಿಗೂ ಹೇಳಿಕೆ ಕಳಿಸಿಬಿಡು. ಇದಕ್ಕೆ ನಾಮಕರಣ ಮಾಡಿದಾಗ ಒಂದೇ ಸಮನೆ ಭೌ ಭೌ ಅಂತಾ ಹೊಡಕ್ಕೊಳ್ಳಿ. ಮಂಗಳವಾದ್ಯಾನೂ ಬೇಡಾ, ಎಂತದ್ದೂ ಬೇಡ". ಟಾಮಿ ಶಾಸ್ತ್ರಿಗಳ ಕಡೆ ಗುರ್ ಎಂದು ನೋಡಿ ಪಂಕಜಮ್ಮನವರ ಸಂದಿಯಲ್ಲಿ ಸೇರಿಕೊಂಡಿತು. "ಯಾರಪ್ಪಾ ನಿನ್ನನ್ನ ಬೈದೋರು? ನಾಲ್ಕು ಛಡಿ ಏಟು ಕೊಡೋಣ ಬಿಡು" ಎಂದು ಅದರ ಕುತ್ತಿಗೆಯ ಕೆಳಗೆ ನೇವರಿಸಿದರು. ಶಾಸ್ತ್ರಿಗಳಿಗೆ ಅದರ ಉಪಟಳ ಒಂದೇ ಎರಡೇ? ಪಂಚಾಂಗವನ್ನು ಬಾಯಲ್ಲಿ ಕಚ್ಚಿಕೊಂಡು ಮುಚ್ಚಿಟ್ಟುಬಿಡುತ್ತದೆ ಅಥವಾ ಅವರ ಧೋತರದ ಚುಂಗನ್ನು ಹಿಡಿದೆಳೆದು. ಜಗಳಕ್ಕೆ ತಯಾರಾದಂತೆ ಕಾಲು ಕೆರೆಯುತ್ತದೆ. ಪಂಕಜಮ್ಮನವರ ಆರೈಕೆಯಲ್ಲಿ ಮೈ ಕೈ ತುಂಬಿಕೊಂಡು ದಷ್ಟಪುಷ್ಟವಾಗಿತ್ತು. ಅದಕ್ಕೆ ಸ್ನಾನ ಮಾಡಿಸುವುದೊಂದು ಅವರಿಗೆ ಆಗುತ್ತಿರಲಿಲ್ಲ. ಕೊನೆಗೆ ಶಾಸ್ತ್ರಿಗಳಿಂದ ಪೌರೋಹಿತ್ಯ ಕಲಿಯಲು ಬರುತ್ತಿದ್ದ ಮಾರ್ಕಂಡೇಯನನ್ನು ಪುಸಲಾಯಿಸಿ ಪಂಕಜಮ್ಮನವರು ನಾಯಿಗೆ ಸ್ನಾನದ ವ್ಯವಸ್ಥೆ ಮಾಡಿಬಿಟ್ಟರು. ಇದರಿಂದ ತಪ್ಪಿಸಿಕೊಳ್ಳಲು ಅವನು ಸಮಯ ನೋಡಿಕೊಂಡು ಹಿಂದಿನ ಬಾಗಿಲಿನಿಂದ ಬಂದು ಮೆಲ್ಲನೆ ಶಾಸ್ತ್ರಿಗಳ ರೂಮಿನಲ್ಲಿ ಕುಳಿತಿರುತ್ತಿದ್ದ. "ಹಾಳಾದವನು ಒಂದು ದಿನ ತಪ್ಪಿಸ್ತಾ ಇರಲಿಲ್ಲ ಈಗ ದಿನಾ ಚಕ್ಕರ್ ಹೊಡೀತಾನೇ" ಎಂದು ತಮಗೆತಾವೇ ಜೋರಾಗಿ ಬೈದುಕೊಳ್ಳುವಾಗ ರೂಮಿನಲ್ಲಿ ಶಾಸ್ತ್ರಿಗಳು ಮತ್ತು ಮಾರ್ಕಂಡೇಯ ಮುಸಿಮುಸಿ ನಗುತ್ತಿದ್ದರು.

ದರ್ಜಿ ರಾಮೋಜಿ ರಾವ್‌ಗೆ "ರಾಮೋಜಿ, ನೀನು ದಕ್ಷಿಣೆ ಕೊಡದಿದ್ದರೂ ಪರವಾಗಿಲ್ಲ. ನೀನು ಬಟ್ಟೆ ಹೊಲಿಯುವಾಗ ಉಳಿಸಿ ಕೊಂಡಿರುತ್ತೀಯಲ್ಲ ಆ ಬಟ್ಟೆಗಳನ್ನೆಲ್ಲಾ ಸೇರಿಸಿ ಒಂದು ಹಾಸಿಗೆ ದಿಂಬು ಮಾಡಿಕೊಡು ನಮ್ಮ ಟಾಮೀಗೆ" ಎಂದು ಮಾಡಿಸಿ

ಕೊಂಡರು. 'ಬರೋ ದಕ್ಷಿಣೆಗೂ ಕಲ್ಲು ಹಾಕ್ತೀಯಲ್ಲಮ್ಮ'' ಎಂದು ಶಾಸ್ತ್ರಿಗಳೆಂದರೆ, ''ನೀನು ಬಾಯಿಮುಚ್ಚಿಕೊಂಡು ಮಂತ್ರ ಹೇಳೋ''. ಶಾಸ್ತ್ರಿಗಳು ತಲೆ ಚೆಚ್ಚಿಕೊಳ್ಳುವರು, ''ಬಾಯಿಮುಚ್ಚಿಕೊಂಡು ಮಂತ್ರ ಹೇಗಮ್ಮಾ ಹೇಳೋದು !!'' ಎಂದು.

ನಾಮಕರಣ ಸಮಾರಂಭ ಹತ್ತಿರ ಬಂದಂತೆ ಮನೆಯಲ್ಲಿ ಸಿದ್ಧತೆಗಳು ಭರದಿಂದ ಸಾಗಿದ್ದವು. ತಮ್ಮ ಬಳಿ ಇದ್ದ ಜರಿಯ ರವಿಕೆ ಖಣ ಕೊಟ್ಟು ಅದಕ್ಕೆ ಅಂಗಿಯೂ ಹೊಲೆಸಿಟ್ಟುಬಿಟ್ಟರು. ಸುಮ್ಮನಿರಲಾರದೆ ಯಾರೋ ಒಬ್ಬರು, ''ಅಮ್ಮಾ, ಇದಕ್ಕೆ ಕುತ್ತಿಗೆಗೆ ಬೆಲ್ಟು ಹಾಕಬೇಕು, ಇಲ್ಲದಿದ್ದರೆ ಬೀದಿ ನಾಯಿಗಳಂತಾ ಎಳೆದುಕೊಂಡು ಹೊರಟುಹೋಗ್ತಾರೆ'' ಎಂದದ್ದೇ ತಡ, ಪಂಕಜಮ್ಮನವರಿಗೆ ಕೋಪ ನೆತ್ತಿಗೇರಿತು. ''ನೀವು ನಾಯಿಗೀಯಿ ಅಂತಾ ಹೇಳಬೇಡಿ. ಇವನನ್ನ ಯಾರಾದ್ರೂ ಮುಟ್ಟಿನೋಡಲಿ ನೋಡೋಣ. ಒಂದು ಕೆಲಸಮಾಡಿ, ನಾಮಕರಣದ ದಿನ ನೀವು ಹೇಗೂ ಏನಾದ್ರೂ ಉಡುಗೊರೆ ಕೊಡಬೇಕು. ಬೆಲ್ಟನ್ನೇ ಓದಿಸಿಬಿಡಿ'' ಎಂದಾಗ ಸಲಹೆ ಕೊಟ್ಟವರು ಇಂಗು ತಿಂದ ಮಂಗನಂತೆ ಜಾಗ ಖಾಲಿ ಮಾಡಿದ್ದರು. ''ಏನಂದ್ರು ನಮ್ಮಮ್ಮಾ, ಸದ್ಯ ಚಿನ್ನದ ಬೆಲ್ಟೇ ಓದಿಸಿ ಅಂತಾ ಹೇಳಲಿಲ್ಲಾ ತಾನೇ'' ಎಂದು ನಕ್ಕರು.

''ಕಳೆದುಹೋದ ನಿಮ್ಮ ದುಡ್ಡಿನ ಬ್ಯಾಗನ್ನು ಇದರಮ್ಮ ನಾಯಿ ತಂದುಕೊಟ್ಟಿತ್ತಂತೆ ಹೌದಾ..'' ಮತ್ತೊಬ್ಬರ ಪ್ರಶ್ನೆಗೆ ಶಾಸ್ತ್ರಿಗಳು ತಲೆತಲೆ ಚಚ್ಚಿಕೊಂಡರು. ''ಓಹೋ, ಆಗಲೇ ವರದಿ ಒಪ್ಪಿಸಿಬಿಟ್ಟರಾ? ಅದು ಬಿಬಿಸಿ ನ್ಯೂಸಿನಲ್ಲಿ ಬರುವುದು ಬಾಕಿ ಇತ್ತು. ಕುಚೇಷ್ಟೆಯ ಆತ, ''ಪಂಕಜಮ್ಮನವರೆ, ದುಡ್ಡಿನ ಚೀಲ ಹುಡುಕಿ ಕೊಟ್ಟಿದ್ದು ಇವನ ತಾಯೀನಾ?'' ಎಂದರು ಏನೂ ಗೊತ್ತಿಲ್ಲದಂತೆ. ಸರಿ, ಪಂಕಜಮ್ಮನವರ ಜಿಹ್ವಾಚಾಪಲ್ಯ ಗರಿಗೆದರಿತು. ''ಅಯ್ಯೋ, ನಮ್ಮ ಶಂಕ್ರ ಮರೆಗುಳಿ. ಸ್ವಲ್ಪ ತೋಟ ದೂರ ಅವನಿಗೆ. ಲಗ್ನ ಕಟ್ಟಿಸಕ್ಕೆ ಅಂತಾ ಬಂದವರೊಬ್ಬರಲ್ಲಿ ಮೆಲ್ಲಗೆ ಇವನ ಹಣದ ಚೀಲನ ಲಪಟಾಯಿಸಿಬಿಟ್ಟಿದಾನೆ. ಇವರಮ್ಮ ಅವನನ್ನ ಗೇಟು ದಾಟಕ್ಕೆ ಬಿಡಲಿಲ್ಲ. ಒಂದೇ ನೆಗೆತಕ್ಕೆ ಹಾರಿ ದುಡ್ಡಿನ ಚೀಲ ಪೀಕಿಸ್ತು'' ಎಂದು ಕಥೆಯನ್ನು ಬಿಚ್ಚಿಟ್ಟರು. ಅದಕ್ಕೆ ತಾಳ ಹಾಕಲು ಟಾಮಿ ಬೇರೆ. ತಲೆ ಅಲ್ಲಾಡಿಸಿಕೊಂಡು ''ಬೆಪ್ಪು ನನ್ನ್ ಮಗ" ಎನ್ನುವಂತೆ ಶಾಸ್ತ್ರಿಗಳತ್ತ ನೋಡುತ್ತಿತ್ತು.

ನಾಮಕರಣದ ದಿನ ತೊಟ್ಟಿಲನ್ನು ಸಿಂಗರಿಸಿ ಮಗುವನ್ನು ತೊಟ್ಟಿಲಲ್ಲಿ ಹಾಕುವಂತೆ ಶಾಸ್ತ್ರಿಗಳು ಸೊಸೆಗೆ ತಿಳಿಸಿದರು. ಅವರ ತಾಯಿ ತೊಟ್ಟಿಲ ಬಳಿ ಬಂದು ಇನ್ನೇನು ಮಗುವನ್ನು ತೊಟ್ಟಿಲಲ್ಲಿ ಮಲಗಿಸಬೇಕು, ಕಿಟಾರನೆ ಕಿರುಚಿ ಬಿಟ್ಟರು. ಎಲ್ಲರಿಗೂ ಗಾಬರಿ ಏನಾಯಿತೋ ಎಂದು ನೋಡಿದರೆ ಟಾಮಿ ಅದರಲ್ಲಿ ಸುಖವಾಗಿ ಪವಡಿಸಿದೆ. ''ಅಯ್ಯೋ ಮುದ್ದು. ನೋಡೋ ಶಂಕರಾ, ಲೆಕ್ಕದ ಪ್ರಕಾರ ಇವನೇ ದೊಡ್ಡವನು. ಶಾಸ್ತ್ರದ ಪ್ರಕಾರ ಇವನಿಗೇ ಮೊದಲ ನಾಮಕರಣ ಶಾಸ್ತ್ರ ಮಾಡಬೇಕು'' ಎಂದಾಗ ಟಾಮಿ ಅಭಿಮಾನದಿಂದ ಪಂಕಜಮ್ಮನವರ ಕಡೆ ನೋಡಿ ಶಾಸ್ತ್ರಿಗಳ ಮಗನತ್ತ ನೋಡಿ ಬಾಲ ಅಲ್ಲಾಡಿಸಿತು.

ಶಾಸ್ತ್ರಿಗಳು ಹೆಂಡತಿಯ ಕಡೆ ತಿರುಗಿ, ''ಲೇ, ದೇವರಿಗೆ ನೈವೇದ್ಯ ಮಾಡುವ ಮೊದಲು ಇವನಿಗೆ ಕೇಸರಿ, ಪಚ್ಚಕರ್ಪೂರ ಎಲ್ಲಾ ಹಾಕಿ ಹಾಲಿನ ನೈವೇದ್ಯ. ನಿನ್ನ ಮೊದಲ ಮೊಮ್ಮಗ, ನಮ್ಮ ಪಾಲಿನ ಪರಮ ಶತ್ರು ಈ ನಾಯಿಗೆ ಮಾಡು'' ಎಂದಾಗ ಟಾಮಿ ಶಾಸ್ತ್ರಿಗಳ ಮೈಮೇಲೆ ಹಾರಿತು. ಪಂಕಜಮ್ಮನೋರು ಅದನ್ನು ಎದೆಗವಚಿಕೊಂಡು, ''ನಿಮಗೆಲ್ಲ ಸೈರಣೆ ಇಲ್ಲ. ಸದ್ಯಕ್ಕೆ ನಾನೇ ಇವನ ಸಾಕುತಾಯಿ'' ಎಂದರು.

''ಅಮ್ಮಾ, ಅದರ ಕಿವಿಯಲ್ಲಿ ಹೆಸರು ಬೊಗಳ್ತೀನಿ ಏನು ಬೊಗಳಬೇಕು?'' ಶಂಕರ ಶಾಸ್ತ್ರಿಗಳು ತಮ್ಮ ಕೋಪವನ್ನೆಲ್ಲಾ ತೀರಿಸಿಕೊಂಡಿದ್ದರು.

''ಇವನನ್ನ ಮೊದಲು ನಮ್ಮ ಮನೆಗೆ ತಂದುಕೊಟ್ಟಿದ್ದು ಶಾಮಾ ಶಾಸ್ತ್ರಿಗಳು. ಇವನಿಗೂ ಅದೇ ಹೆಸರಿಟ್ಟರೆ ಹೇಗೆ?''

''ಓಹೋ ಅವರದ್ದಾ ಈ ಕಿತಾಪತಿ, ರೀ... ಶಾಮಾಶಾಸ್ತ್ರಿಗಳೇ" ಎಂದು ಶಾಸ್ತ್ರಿಗಳು ದುರದುರನೆ ನೋಡಿದರು. ,ಪಟ್ಟಾಂಗ ಹೊಡೆಯುತ್ತಿದ್ದ ಶಾಮಾ ಶಾಸ್ತ್ರಿಗಳು ''ಅಮ್ಮಾ, ಅಯ್ಯೋ ನಮ್ಮ ತಾತನವರ ಹೆಸರನ್ನು ನನಗೆ ಇಟ್ಟಿರುವುದು. ಅದನ್ನು ಈ

ನಾಯಿಗೆ ಇಡುವುದಾ, ಅಲ್ಲಿ ಸ್ವರ್ಗದಲ್ಲಿ ಅವರ ಆತ್ಮ ನೊಂದುಕೊಳ್ಳಲ್ವೇ? ಬೇಕಾದರೆ ನಿಮ್ಮ ಯಜಮಾನರ ಹೆಸರನ್ನೇ ಇಡಿ''. ಎಂದು ಅಂಗಲಾಚಿದರು.

''ಏನು? ನಮ್ಮ ಯಜಮಾನರು ಅಂದ್ರೆ ಏನೆಂದುಕೊಂಡಿದ್ದೀರಿ? ಅವರ ಹೆಸರಿಟ್ಟರೆ ಇವನನ್ನು ಹೆಸರು ಹಿಡಿದು ಕರೆಯುವುದು ಹೇಗೆ?'' ಎಂದು ಶಂಕರ ಶಾಸ್ತ್ರಿಗಳಿಗೆ ತಮಗೆ ಕೇಳಿಸಿದ್ದನ್ನು ಮರುಮಾತಿಲ್ಲದೆ ಅದರ ಕಿವಿಯಲ್ಲಿ ಮೂರು ಬಾರಿ 'ವ್ಯವಹಾರ ನಾಮ' ಎಂದು ಕೂಗಿಬಿಟ್ಟಿದ್ದರು.

''ಅಮ್ಮ ಹೆಸರಿಟ್ಟಾಯಿತು. ಲೇ, ಕೊಬ್ಬರಿ ಸಕ್ಕರೆ ಹಂಚು'' ಎಂದರು ಹೆಂಡತಿಯ ಕಡೆ ತಿರುಗಿ. ಹೆಂಡತಿ ಮೂತಿ ತಿರುಗಿಸಿಕೊಂಡರು. ಶಾಸ್ತ್ರಿಗಳು ಸದ್ಯಕ್ಕೆ ಪೀಡೆ ತೊಲಗಿದರೆ ಸಾಕೆಂದು ''ನಾಮಕರಣ ಸಾಂಗವಾಗಿ ನೆರವೇರಿತು. ಓದಿಸೋವ್ರೆಲ್ಲಾ ಓದಿಸಬಹುದು. ಎಲ್ಲವನ್ನೂ ಇವನ ಮಾತೃಶ್ರೀ ಪಂಕಜಮ್ಮನವರಿಗೆ ಓದಿಸತಕ್ಕದ್ದು.'' ಎಂದರು.

ಎಲ್ಲಿಂದಲೋ ಯಾರೋ ಕೂಗಿದರು. ನಮ್ಮದು ಒಂದು ಕೆ.ಜಿ. ಪೆಡಿಗ್ರಿ, ಮತ್ತೊಬ್ಬರು ನಮ್ಮದು ನಾಯಿ ಬೆಲ್ಟ್, ಮಗದೊಬ್ಬರು ನಾಯಿ ಬಿಸ್ಕತ್ತು.

ಶಾಮಾಶಾಸ್ತ್ರಿಗಳು ಕುತೂಹಲದಿಂದ ಕೇಳಿದರು, ''ಶಾಸ್ತ್ರಿಗಳೇ ಹೆಸರೇನಿಟ್ಟಿರಿ?''

''ಅದೇ ನಮ್ಮಮ್ಮ ಹೇಳಿದರಲ್ಲ ಅದೇ ಹೆಸರು.''

''ಶಂಕರ ಶಾಸ್ತ್ರಿಗಳೇ ನಿಮ್ಮ ಪ್ರಾಣ ಸ್ನೇಹಿತ ನಾನು. ನಿಮ್ಮ ಮನೆ ನಾಯಿಗೆ ನನ್ನ ಹೆಸರಿಡಬಹುದಾ? ಚಿಕ್ಕವನಿದ್ದಾಗ ಮಹಾಭಾರತ ನಾಟಕದಲ್ಲಿ ಕೊನೆಗೆ ಧರ್ಮರಾಯನ ಜೊತೆ ಸ್ವರ್ಗಕ್ಕೆ ಹೋಗೋ ನಾಯಿ ಪಾತ್ರ ಮಾಡಿದ್ದೆ. ಕೊನೆಗೂ ನನಗೆ ಅದೇ ಗತಿ ಆಗೋಯ್ತು.''

''ಅಂದ ಹಾಗೆ ಏನು ಹೆಸರು ಇಟ್ಟೆ ಶಂಕರ.'' ಪಂಕಜಮ್ಮನವರು ತೊಟ್ಟಿಲಿನಿಂದ ಟಾಮಿಯನ್ನು ಎತ್ತಿಕೊಂಡರು.

''ನೀನೇ ಹೇಳಿದೆಯಲ್ಲ ಅಮ್ಮ ಅದೇ ಹೆಸರೇ.''

''ಶಾಮಾಶಾಸ್ತ್ರೀನೇ..."

''ಹೂಂ ಅದೇ. ಟಾಮಾಶಾಸ್ತ್ರಿ'' ಎಂದಾಗ ದೊಡ್ಡ ಉಸಿರು ತೆಗೆದುಕೊಂಡ ಶಾಮಾಶಾಸ್ತ್ರಿಗಳು, ''ಸದ್ಯ ದೇವರು ಶಂಕರಶಾಸ್ತ್ರಿಗಳಿಗೆ ಸ್ವಲ್ಪ ಕಿವುಡುತನ ಕೊಟ್ಟಿದ್ದು ಒಳ್ಳೇದೇ ಆಯ್ತು'' ಎಂದರು.

***

ಮಹಿಳಾ ಸಾಹಿತ್ಯ : ಅಂದು - ಇಂದು

- ಕಮಲಾಕ್ಷಿ ಸಿ.ಆರ್.

"ಸಾಹಿತ್ಯದ ಕೆಲಸವೆಂದರೆ ಮನುಷ್ಯನ ಅಂತರಾಳಕ್ಕೆ ಪ್ರವೇಶ ದೊರಕಿಸಿಕೊಡುವುದು. ಪ್ರೀತಿ, ಅನುಕಂಪ, ಕರುಣೆಗಳನ್ನು ಹುಟ್ಟಿಸುವುದು" ಎಂದು ಡಾ. ಎಸ್.ಎಲ್.ಭೈರಪ್ಪನವರು ಹೇಳಿದ್ದಾರೆ. ಪ್ರೀತಿ, ಅನುಕಂಪ, ಕರುಣೆಗಳಿಗೆ ಸಾಕಾರಮೂರ್ತಿಯಾಗಿರುವ ಮಹಿಳೆ ಸಾಹಿತ್ಯದೆಡೆಗೆ ಆಕರ್ಷಿತಳಾಗುವುದು ಸಹಜ. ಅಂದಿನಿಂದ ಇಂದಿನವರೆಗೂ ಸಾಹಿತ್ಯದೊಡನೆ ಮಹಿಳೆಯ ಸಾಂಗತ್ಯವಿದ್ದೇ ಇದೆ. ಮಹಿಳೆಯ ಮನಸ್ಸು, ಆಶಯ ಮತ್ತು ಸ್ಥಾನಮಾನ ಬದಲಾದಂತೆ ಅವಳ ಸಾಹಿತ್ಯ ಸ್ವರೂಪ ಹಾಗೂ ಸಾಹಿತ್ಯಾಭಿರುಚಿಯೂ ಬದಲಾಗುತ್ತ ಬಂದಿದೆ.

ಅಂದು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ, ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗದೇ ಸ್ತ್ರೀಯರು ವಿದ್ಯೆಯಿಂದ ವಂಚಿತರಾಗಿದ್ದರಿಂದ ಸಾಮಾನ್ಯ ಮಹಿಳೆಯರು ಸಾಹಿತ್ಯ ಕ್ಷೇತ್ರದಿಂದ ದೂರವೇ ಉಳಿದಿದ್ದರು. ಶಾತವಾಹನರ ಕಾಲದಲ್ಲಿ ಕೆಲ ರಾಜವಂಶದ ಮಹಿಳೆಯರು ಸಾಹಿತ್ಯ ಪ್ರತಿಭೆಗೆ ಉದಾಹರಣೆಯಾಗಿದ್ದರು. ಸುಮಾರು ಕ್ರಿ.ಶ.610ರಲ್ಲಿ ಚಾಲುಕ್ಯರ 'ವಿಜ್ಜಿಕೆ' ಎಂದು ಹೆಸರಾದ ವಿಜಯಮಹಾದೇವಿ ಸಂಸ್ಕೃತ ಪಂಡಿತೆಯೂ, ಕವಯತ್ರಿಯೂ ಆಗಿದ್ದಳೆಂದು, 'ಕೌಮುದಿ ಮಹೋತ್ಸವ' ಎಂಬ ಸಂಸ್ಕೃತ ನಾಟಕವನ್ನು ರಚಿಸಿದ್ದಳೆಂದು ತಿಳಿದುಬರುತ್ತದೆ. ಸುಮಾರು 1100ರಲ್ಲಿ ಬರುವ ಕಂತಿಯನ್ನು ಕನ್ನಡದ ಪ್ರಪ್ರಥಮ ಕವಯತ್ರಿ ಎಂದು ಪರಿಗಣಿಸಲಾಗಿದೆ. ಈಕೆ 'ಹಂಪನ ಸಮಸ್ಯೆಗಳು' ಎಂಬ ಕೃತಿಯನ್ನು ಬರೆದಿರುವಳೆಂದು ತಿಳಿದುಬಂದಿದ್ದು ಇವಳಿಗೆ ಅಭಿನವ ವಾಗ್ದೇವಿ, ಆದೀಕ ಕವೀಶ್ವರಿ ಎಂಬ ಬಿರುದುಗಳು ಇದ್ದವೆಂದು ಹೇಳಲಾಗಿದೆ.

ಮಹಿಳೆಯರಿಗೆ ಸಾಮಾಜಿಕ ಹಾಗೂ ಸಾಹಿತ್ಯಿಕ ಸಮಾನತೆಗಾಗಿ ಪ್ರಯತ್ನಿಸಿದ್ದು 12ನೇ ಶತಮಾನದಲ್ಲಿ. ಅನುಭವ ಮಂಟಪದಲ್ಲಿ ಕನ್ನಡ ಮಹಿಳಾ ಸಾಹಿತ್ಯದ ಆರಂಭದ ಕುರುಹುಗಳು ವಚನ ಸಾಹಿತ್ಯದಲ್ಲಿ ಗುರುತಿಸುವಂತಾಯಿತು ಎನ್ನಬಹುದು. ಸಮಾಜದ ರೀತಿ-ನೀತಿಗಳನ್ನು, ಜಾತಿ-ಭೇದಗಳನ್ನು ಅಲ್ಲದೆ ಲಿಂಗಭೇದಗಳನ್ನು ತೊಡೆದುಹಾಕುವ ಚಿಂತನೆಗೆ ಎಡೆಮಾಡಿಕೊಟ್ಟಿತು. ಅಕ್ಕಮಹಾದೇವಿ, ಅಕ್ಕಮ್ಮ, ರೆಮ್ಮವ್ವ, ಗಂಗಮ್ಮ ಮೊದಲಾದ ವಚನಕಾರ್ತಿಯರು ವಚನ ರಚನೆಯಲ್ಲಿ ತೊಡಗಿದ್ದರು. ಅಷ್ಟೇ ಅಲ್ಲ ವಚನ ಸಾಹಿತ್ಯ ರಚನೆಯಲ್ಲಿ ದಲಿತ ಸ್ತ್ರೀಯರೂ ತೊಡಗಿದ್ದು ಆಗಿನ ಕಾಲಕ್ಕೆ ಪವಾಡಸದೃಶವಾಗಿತ್ತು. ಅಕ್ಷರ ಜ್ಞಾನವಿಲ್ಲ ದವರೂ ವಚನ ರಚನೆ ಕಾರ್ಯಕ್ಕಿಳಿದಿದ್ದು ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಕೊಡುಗೆಯಾಗಿರುವುದನ್ನು ಇಂದಿಗೂ ಕಾಣಬಹುದು.

ವಚನ ಸಾಹಿತ್ಯಕ್ಕೆ ಸರಿಸಮಾನವಾಗಿ ಬೆಳೆದಿದ್ದು ಜಾನಪದ ಸಾಹಿತ್ಯ. ಮಹಿಳೆ ಹಿಟ್ಟು ಬೀಸುವಾಗ, ಹೊಲಗದ್ದೆಗಳಲ್ಲಿ ನಾಟಿ ಕೊಯ್ಲಿನಲ್ಲಿರುವಾಗ, ಪೈರು ಹಸನು ಮಾಡುವಾಗ, ತೊಟ್ಟಿಲು ತೂಗುವಾಗ, ಸಂತೋಷ-ದುಃಖ, ನೋವು- ನಲಿವು, ಮದುವೆ, ಜಾತ್ರೆ ಹೀಗೆ ಯಾವುದೇ ಸಂಧರ್ಭದಲ್ಲೂ ತನ್ನ ಭಾವನೆಗಳನ್ನು ಜಾನಪದ ಸಾಹಿತ್ಯದಲ್ಲಿ ಹೊರಚೆಲ್ಲುತ್ತಿದ್ದಳು. ಬಾಯಿಂದ ಬಾಯಿಗೆ ಹರಿದುಬಂದ ಅಲಿಖಿತ ಸಾಹಿತ್ಯ ಇಂದಿಗೂ ಜನಮಾನಸದಲ್ಲಿ ನಿತ್ಯ ಸಂಜೀವಿನಿಯಾಗಿ ಉಳಿದಿದೆ. ಒಗಟು, ಗಾದೆ, ಕೋಲಾಟ, ಸುಗ್ಗಿ ಕುಣಿತ, ಡೋಲು ಕುಣಿತ ಇವೆಲ್ಲವೂ ಜಾನಪದ ಸಾಹಿತ್ಯದ ಹಲವು ಅನ್ವಯಿಕೆಗಳು. ಈಗಂತೂ ಜಾನಪದ ಸಾಹಿತ್ಯವೇ ಒಂದು ವಿಶ್ವವಿದ್ಯಾಲಯವಾಗಿದೆ.

ಇತಿಹಾಸದತ್ತ ಮಹಿಳಾ ಸಾಹಿತ್ಯವನ್ನು ಪರಿಗಣಿಸಿದರೆ ಸ್ವಲ್ಪ ಚೇತರಿಸಿಕೊಂಡಿತೆನ್ನಬಹುದು. ವಿಜಯನಗರ ಸಾಮ್ರಾಜ್ಯದ ಗಂಗಾಬಿಕೆ 'ಮಧುರಾವಿಜಯ'ವನ್ನು, ತಿರುಮಲಾಂಬೆ 'ವರದಾಂಬಿಕಾ ಪರಿಣಯ'ಎಂಬ ಕೃತಿಗಳನ್ನು ರಚಿಸಿದರು. ಹದಿನೇಳನೇ ಶತಮಾನದಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಚಿಯ ಹೊನ್ನಮ್ಮ, ಶೃಂಗಾರಮ್ಮ ಎಂಬ ಕವಯತ್ರಿಯರು ಇದ್ದರು. ಸಂಚಿಯ ಹೊನ್ನಮ್ಮನ "ಕುವರನಾದರೇ ಬಂದ ಗುಣವೇನದರಿಂದ ಕುವರಿಯಾದೊಡೆ ಕುಂದೇನದರಿಂದ" ಎಂಬ ಕವನ ಸ್ತ್ರೀಪರ ವಾದ ಹುಟ್ಟುಹಾಕಿದ್ದು ಉಲ್ಲೇಖನೀಯ. ಆಕೆಯ 'ಹದಿಬದಿಯ ಧರ್ಮ' ಎಂಬ ಕಾವ್ಯದಲ್ಲಿ ಸಮಾಜವು ಪುರುಷ ಪ್ರಧಾನವಾದರೂ, ಹೆಣ್ಣು ಪುರುಷನ ಸುಖ-ಸಂತೋಷಗಳಿಗಾಗಿ ದುಡಿಯುತ್ತಾಳೆ ಇದರಿಂದಲೇ ಕುಟುಂಬದಲ್ಲಿ ಮತ್ತು

ಸಮಾಜದಲ್ಲಿ ಸುಖ ನೆಮ್ಮದಿ ನೆಲೆಸುತ್ತದೆ ಎಂಬುದನ್ನು ಪ್ರತಿಪಾದಿಸಿರುತ್ತಾಳೆ. ಇವರ ಜೊತೆಜೊತೆಯಲ್ಲಿಯೇ ದಾಸ ಸಾಹಿತ್ಯದಲ್ಲಿ ಅನೇಕ ಮಹಿಳೆಯರು ಕೀರ್ತನೆ ರಚನೆಯಲ್ಲಿ ತೊಡಗಿದ್ದರು. ರುಕ್ಮಿಣೀಬಾಯಿ, ವಿಜಾಪುರದ ಪ್ರಯಾಗಬಾಯಿ, ಗಲಗಲಿ ಅವ್ವ, ಹರಪನಹಳ್ಳಿ ಭೀಮವ್ವ ಮೊದಲಾದವರು ಕೀರ್ತನೆ ರಚಿಸಿದ್ದಾರೆ.

"ಉತ್ತಮವಾದದ್ದು ಶ್ರಮವಿಲ್ಲದೆ ಲಭಿಸದು, ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಇಲ್ಲ" ಎಂಬ ಕುವೆಂಪುರವರ ಉಕ್ತಿಯಂತೆ ಸಾಹಿತ್ಯವೆಂಬ ಸುಧೆ ಓದು ಬರಹದ ಜ್ಞಾನವಿಲ್ಲದೆ ಲಭಿಸುವುದಿಲ್ಲ. ಹತ್ತೊಂಬತ್ತನೆಯ ಶತಮಾನದ ಆದಿಯಿಂದ ಸಾಂಸ್ಕೃತಿಕ ವಾತಾವರಣ ನೆಲೆಗೊಂಡು ಸ್ವಾತಂತ್ರ್ಯಾಂದೋಲನಕ್ಕೆ ಸ್ತ್ರೀಪರ ಆಲೋಚನೆಗಳು ಮೊಳೆತು ಸ್ತ್ರೀ ಶಿಕ್ಷಣಕ್ಕೆ ಪ್ರಾತಿನಿಧ್ಯ ನೀಡುವ ಕಳಕಳಿ ಸೇರಿತು. ಆ ದಿನಗಳಲ್ಲಿ ಕೆಲವು ಪತ್ರಿಕೆಗಳು ಹಾಗೂ ಸಂಘ ಸಂಸ್ಥೆಗಳು ಹೆಣ್ಣು ಮಕ್ಕಳ ಬರಹಗಳಿಗೆ ಬಹುಮಾನಗಳನ್ನಿಟ್ಟು ಸ್ಪರ್ಧೆ ಮುಖಾಂತರ ಬರಹಗಳಿಗೆ ಪ್ರಚೋದನೆ ನೀಡಿದುವು. ಇಂತಹ ಸ್ಪರ್ಧೆಗಳಿಂದ ಶಾಂತಬಾಯಿ ನೀಲಗಾರರೆಂಬ ಮೊದಲ ಕಾದಂಬರಿಗಾರ್ತಿಯ ಉದಯವಾಯಿತು (ಕೃತಿ: ಉತ್ತಮ ಗೃಹಿಣಿ). ಅ ನಂತರ ನಂಜನಗೂಡು ತಿರುಮಲಾಂಬಾ ಅವರು ವಿಧವೆಯರ ಕೇಶಮುಂಡನ, ಬಾಲ್ಯ ವಿವಾಹ, ವಿಧವಾ ವಿವಾಹಗಳ ಕುರಿತು ಕಥೆ, ಕಾದಂಬರಿ, ನಾಟಕ, ಲೇಖನಗಳನ್ನು ಬರೆದಿದ್ದರು. ಇವರ ಸಮಕಾಲೀನರಾದ ಆರ್.ಕಲ್ಯಾಣಮ್ಮನವರು 'ಸರಸ್ವತಿ' ಎಂಬ ಪತ್ರಿಕೆಯನ್ನು 1917ರಲ್ಲಿ ಪ್ರಾರಂಭಿಸಿದರು. 43 ವರ್ಷಗಳ ಕಾಲ ಮಹಿಳೆಯರಿಗೆ ಶಿಕ್ಷಣ, ಸ್ವಾವಲಂಬನೆ ಅಗತ್ಯದ ಬಗೆಗಿನ ಬರಹಗಳ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಿದ ಕೀರ್ತಿ ಅವರದು.

ಇವರದೇ ಹಾದಿಯಲ್ಲಿ ನಡೆದ ತಿರುಮಲೆ ರಾಜಮ್ಮನವರು ಬರೆದ ತಪಸ್ವಿನಿ, ಮಹಾಸತಿ, ವಾತ್ಸಲ್ಯ, ತರಂಗ ಲೀಲದಂತಹ ಹಲವು ಕೃತಿಗಳು, ನಾಟಕಗಳು, ವಿಮರ್ಶೆಗಳು ಕನ್ನಡಕ್ಕೆ ನೀಡಿದ ಕೊಡುಗೆಗಳಾಗಿವೆ. ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಮಹಿಳಾ ಸಾಹಿತ್ಯ ಕ್ಷೇತ್ರ ಬಲಿಷ್ಠವಾಗಿತೆಂದೇ ಹೇಳಬಹುದು. ಈ ಹಂತದಲ್ಲಿ ಅನೇಕ ಪ್ರತಿಭಾವಂತ ಕಾದಂಬರಿ ಗಾರ್ತಿಯರು ಸಾಮಾಜಿಕ ಸಮಸ್ಯೆಗಳು ಮತ್ತು ಸ್ತ್ರೀಶೋಷಣೆಯ ಬಗ್ಗೆ ಸೂಕ್ಷ್ಮವಾಗಿ ಚಿತ್ರಿಸಿದರು. ತ್ರಿವೇಣಿಯವರ ಹಣ್ಣೆಲೆ ಚಿಗುರಿದಾಗ, ಬೆಳ್ಳಿಮೋಡ, ಶರಪಂಜರ, ಹೂವು ಹಣ್ಣು, ಸೋತು ಗೆದ್ದವಳು.. ಕಾದಂಬರಿಗಳು ಪುಸ್ತಕ ರೂಪದಲ್ಲಷ್ಟೇ ಅಲ್ಲ ಚಲನಚಿತ್ರವಾಗಿಯೂ ಇಂದಿಗೂ ಜನಮಾನಸದಲ್ಲಿ ಉಳಿದಿವೆ. ನಿತ್ಯ ಕಾಣಸಿಗುವ ಮಹಿಳೆಯರ ಸಮಸ್ಯೆಗಳ ಕಥಾವಸ್ತು, ಸುಂದರ ಭಾಷೆ, ನಿರೂಪಣೆ, ಮನೋವೈಜ್ಞಾನಿಕ ಸೂತ್ರಗಳಾಧರಿತ ಬರವಣಿಗೆ ಅವರನ್ನು ಉತ್ತಮ ಸಾಹಿತಿ ಎಂದು ಒಪ್ಪಿಕೊಂಡರು. ಆನಂತರ ಎಂ.ಕೆ.ಇಂದಿರಾ ಅವರ ತುಂಗಭದ್ರ, ಗೆಜ್ಜೆಪೂಜೆ, ಫಣಿಯಮ್ಮ ಇಂತಹ ಕೃತಿಗಳು ಅವಿಸ್ಮರಣೀಯ.

ಇತ್ತೀಚಿನ ಉಷಾ ನವರತ್ನರಾಮ್, ಸಾಯಿಸುತೆ, ಹೆಚ್.ಜಿ.ರಾಧಾದೇವಿ, ಮುಕ್ತಾ, ಅಶ್ವಿನಿ ಇವರ ಬರಹಗಳಲ್ಲಿ ಸಮಾಜದ ಸ್ಥಿತಿಗತಿಗಳನ್ನು ಅಕ್ಷರ ರೂಪದಲ್ಲಿ ಸೊಗಸಾಗಿ ಚಿತ್ರಿಸಲಾಗಿದೆ. ಇವರ ಅನೇಕ ಕಾದಂಬರಿಗಳು ಚಲನಚಿತ್ರವಾಗಿ ಸಮಾಜದ ಕಣ್ಣು ತೆರೆಸಿವೆ. ಮಹಿಳೆಯರಿಗೆ ಸಾಕಷ್ಟು ಶಿಕ್ಷಣ, ಸ್ವಾವಲಂಬನೆ ದೊರೆತು ವಿವಿಧ ಆಯಾಮಗಳಲ್ಲಿ ಆಲೋಚನೆ ಮಾಡಲು ಸಶಕ್ತಳಾಗಿ ಸಾಹಿತ್ಯ ಕ್ಷೇತ್ರವನ್ನು ಸಾಕಷ್ಟು ಬಳಸಿಕೊಂಡು ಬೆಳೆಯಲು ಸಾಧ್ಯವಾಯಿತು. ಕುಟುಂಬ, ಸಮಾಜ, ಉದ್ಯೋಗಗಳಲ್ಲಿನ ಮಹಿಳಾ ಶೋಷಣೆ ಬಗ್ಗೆ ಅರಿವು ಮೂಡಿಸುವ ಸ್ತ್ರೀವಾದಿ ಚಿಂತನೆಗಳ ಬರಹಗಾರರು ಹೆಚ್ಚಾದರು. ಇದರೊಂದಿಗೆ ಸಮಾಜದ ಏರಿಳಿತಗಳ ವಿರುದ್ಧ ಧ್ವನಿಯೆತ್ತುವ ಬಂಡಾಯ ಸಾಹಿತಿಗಳು ಉಗಮವಾಗಿ ಕೆಳವರ್ಗದ ಸಮಸ್ಯೆಗಳು ಮತ್ತು ನೋವುಗಳಿಗೆ ಮಿಡಿದರು. ಇಂತಹ ಸಮಸ್ಯೆಗಳ ಕುರಿತು ಸಾಹಿತ್ಯ ಸಮ್ಮೇಳನಗಳಲ್ಲಿ ಪುರುಷರಿಗೆ ಸಮನಾಗಿ ಪ್ರಶ್ನಿಸಿ ಸಮಾಜದ ಕಣ್ತೆರೆಸುವ ಶಕ್ತಿಯಾದರು.

"ಪ್ರತಿಯೊಂದು ಕಾಲದಲ್ಲೂ ಮನಸ್ಸು ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಹೋಗುತ್ತದೆ. ಅತೃಪ್ತ ಮನಸ್ಸಿನ ಆಶಯ ಹೇಗೆ ಬೇಕಾದರೂ ಅಭಿವ್ಯಕ್ತವಾಗಬಹುದು. ಆಗ ಸಾಹಿತ್ಯವೂ ಬದಲಾಗಬಹುದು" ಎಂದು ಕಾದಂಬರಿಗಾರ್ತಿ ತ್ರಿವೇಣಿ ಹೇಳಿದ್ದರು. ಕಾಲ ಬದಲಾದಂತೆ ನಾಗಾಲೋಟದಲ್ಲಿ ಬದಲಾಗುತ್ತಿರುವ ತಂತ್ರಜ್ಞಾನದಿಂದ ಪುಸ್ತಕಾಸಕ್ತಿಯನ್ನು ಕುಂಠಿತವಾಗಿಸುತ್ತಿದೆಯೋ ಎಂದು ಭಾಸವಾಗುತ್ತಿದೆ. ಆದರೆ ಸಾಹಿತ್ಯಾಸಕ್ತರು ಎಂದಿಗೂ ಓದು ಬರಹದಲ್ಲಿ ನಿರಾಸಕ್ತರಾಗುವುದಿಲ್ಲ ಎಂಬುದಕ್ಕೆ ಜಾಲತಾಣದ ಮುಖಪುಟದಲ್ಲಿ ಮಹಿಳೆಯರೇ ಮುನ್ನಡೆಸುತ್ತಿರುವ ಸಾಹಿತ್ಯ ಗುಂಪುಗಳು, ವಾಟ್ಸಪ್ ಗುಂಪುಗಳೇ ಸಾಕ್ಷಿ. ಮಹಿಳೆಗೆ ಅಂದಿನಿಂದ ಇಂದಿನವರೆಗೂ ಸಾಹಿತ್ಯಾಸಕ್ತಿ ಇದ್ದೇ ಇದೆ, ಎಂದಿಗೂ ಇದ್ದೇ ಇರುತ್ತದೆ.

***

ಬಾಗಿಲು ತೆಗೆಯೇ ಸೇಸಮ್ಮ

– ಜಿ.ವಿ.ನಿರ್ಮಲ

'ಬಾಗಿಲು ತೆಗೆಯೇ ಸೇಸಮ್ಮ' ಎಂದೊಡನೆ ಅರೇಬಿಯನ್ ನೈಟ್ಸ್‌ನ 'ಆಲಿಬಾಬಾ ಮತ್ತು ನಲವತ್ತು ಕಳ್ಳರು' ಕಥೆ ಜ್ಞಾಪಕ ವಾಯಿತೇ? ಹೌದು, ಕಥೆಯಲ್ಲಿ ಅಪಾರ ಧನಕನಕಗಳನ್ನು ಬಚ್ಚಿಡುತ್ತಿದ್ದ ಗುಹೆಯ ಬಾಗಿಲನ್ನು ತೆರೆಯಲು ಕಳ್ಳರು ಬಳಸುತ್ತಿದ್ದ 'ಗುಪ್ತ ಸಂಕೇತ' ಇದೇ. ಅಕಸ್ಮಾತ್ತಾಗಿ ಇದನ್ನು ಕಂಡುಕೊಂಡ ಬಡ ಆಲಿಬಾಬಾ ಸಾಹುಕಾರನಾದ ದೊಡ್ಡ ಕಥೆ ಎಲ್ಲರಿಗೂ ತಿಳಿದಿರುವುದೇ. ಹಾಗೆಯೇ ಕೇರಳದ ತಿರುವನಂತಪುರ ದೇವಾಲಯದ ಕೊಟಡಿಗಳ ಬೀಗವನ್ನು ತೆಗೆಯಬಹುದೇ ಎಂದು ಅತೀವ ಚರ್ಚೆಯಾದದ್ದು ಇತ್ತೀಚಿನ ಕಥೆ. ಒಟ್ಟಿನಲ್ಲಿ ಗುಪ್ತ ಸಂಕೇತದಿಂದ ಅಥವಾ ಕೀಲಿಕೈನಿಂದ ಬೀಗ ತೆಗೆಯುವುದು ಎಲ್ಲಾ ಕಾಲದಲ್ಲಿಯೂ ಇರುವುದೇ. ಕೀಲಿ ಮತ್ತು ಕೀಲಿಕೈಗಳನ್ನು ಮೊತ್ತಮೊದಲು ಜಾರಿಗೆ ತಂದದ್ದು ಈಜಿಪ್ಟಿನವರು. ಮೊದಲು ಮರದಿಂದ ತಯಾರಾಗುತ್ತಿದ್ದ ಬೀಗ ಮತ್ತು ಕೀಲಿಕೈ ಅನಂತರದ ದಿನಗಳಲ್ಲಿ ಲೋಹದಿಂದ ತಯಾರಾಗಲು ಪ್ರಾರಂಭ ವಾಯಿತು. ಈ ದಿನಗಳಲ್ಲಿ ಹಲವಾರು ಬಗೆಯ ಕೀಲಿಗಳಿವೆ.

ಸಾಮಾನ್ಯ ಜನರಿಗೂ ಕೀಲಿಕೈ ಬಹಳ ಮುಖ್ಯವೇ. ಮನೆಯ ಮುಂಬಾಗಿಲನ್ನು ಕೀಲಿಯಿಂದ ಭದ್ರ ಮಾಡುವುದು, ಕೀಲಿಯನ್ನು ಯಾರಿಗೂ ಕಾಣದಂತೆ ಮುಚ್ಚಿಡುವುದು, ಬಚ್ಚಿಡುವುದು ಎಲ್ಲವೂ ಸಾಮಾನ್ಯವೇ. ಮನೆಯಿಂದ ಆಚೆ ಹೋಗುವಾಗ ಇದ್ದಕ್ಕಿದ್ದಂತೆ ಕೀಲಿಕೈ ಮಾಯವಾಗಿ, ಇರಬೇಕಾದ ಜಾಗದಲ್ಲಿ ಅದು ಸಿಕ್ಕದಿದ್ದರೆ ದೇವರೇ ಗತಿ. ಒಂದು ವೇಳೆ ವಾಪಸ್ಸಾದಾಗ ಅದೇ ಕೀಲಿಕೈ ಜಂಭದ ಚೀಲದಲ್ಲಿ ಅಡಗಿಕುಳಿತು ಕಾಣದಿದ್ದರೆ ಎದೆಬಡಿತವೇ ನಿಲ್ಲುತ್ತದೆಯಲ್ಲವೇ? ಸಣ್ಣದಾಗಿದ್ದರೂ ಸಮಯಕ್ಕೆ ಸರಿಯಾಗಿ 'ಟಾಂಗ್' ಕೊಡುವ ಕೀಲಿಗಳು ನಮ್ಮ ಜೀವನದ ಅವಿಭಾಜ್ಯ ಅಂಗವೆಂದೇ ಹೇಳಬಹುದು. ಕೀಲಿಕೈಗಳ ಮಹತ್ವ ಇಷ್ಟೆಲ್ಲಾ ಇದ್ದರೂ 'ಕ್ಲಿಪ್', ಚಿಕ್ಕ ಸ್ಕ್ರೂ, ಸೂಜಿ ಇತ್ಯಾದಿಗಳಿಂದ ಬೀಗವನ್ನು ಸುಲಭವಾಗಿ ತೆಗೆಯುವ ಚಾಕಚಕ್ಯತೆ ಉಳ್ಳವರೂ ನಮ್ಮಲ್ಲಿದ್ದಾರೆ.

ಜೋರಾಗಿ ಗಾಳಿಬಂದರೂ ಸಾಕು, ಮನೆಯ ಬಾಗಿಲುಗಳು ತನ್ನಷ್ಟಕ್ಕೆತಾನೇ ಗಪ್ಪೆಂದು ಮುಚ್ಚಿಕೊಳ್ಳುತ್ತವೆ, ಆಗ ಮನೆಯೊಳಗೆ ಚಿಕ್ಕ ಮಗುವೋ, ವೃದ್ಧರೋ ಇದ್ದರಂತೂ ಫಜೀತಿಯೋ ಫಜೀತಿ. ಒಮ್ಮೆ ನನ್ನ ಅಕ್ಕನ ಚಿಕ್ಕ ಮಗು ಮನೆಯೊಳಗೆ ಮಲಗಿದ್ದಾಗ, ನಮ್ಮ ಅಕ್ಕ ತರಕಾರಿ ತರಲು ಮನೆಯಿಂದ ಆಚೆ ಬಂದದ್ದೇತಡ ಮುಂಬಾಗಿಲು ಗಾಳಿಗೆ ಬಡಿದು ಮುಚ್ಚಿ ಕೊಂಡಿತು. ಒಳಗಿನಿಂದ ಬಾಗಿಲು ತೆಗೆಯಬಹುದು. ಆದರೆ ಹೇಗೆ? ಕೊನೆಗೆ ತರಕಾರಿಯವನು, ಅಕ್ಕಪಕ್ಕದವರೂ ಸೇರಿ, ಒಬ್ಬ ಚಿಕ್ಕ ಹುಡುಗನನ್ನು ಕಿಟಕಿಯೊಳಗಿಂದ ಒಳಗೆ ತೂರಿಸಿ, ಬಾಗಿಲು ತೆಗೆಸಿದರಂತೆ. ಅಷ್ಟರೊಳಗೆ ಮಗು ಎದ್ದು ಅಳಲು ಪ್ರಾರಂಭ ಮಾಡದಿದ್ದದ್ದು ಪುಣ್ಯ.

ಒಮ್ಮೆ ಗೃಹಿಣಿಯೊಬ್ಬಳು ಶೌಚಾಲಯದಲ್ಲಿದ್ದಾಗ ಮನೆಯೊಳಗೆ ಆಡುತ್ತಿದ್ದ ಪುಟ್ಟ ಮಗು ಶೌಚಾಲಯದ ಬಾಗಿಲನ್ನು ಹೊರಗಡೆಯಿಂದ ಜಡೆಯಿತಂತೆ. ಮಗು ಹೊರಗೆ ಹೋಗಿ ಬೇರೆಯವರನ್ನು ಕರೆತರಲು ಮುಂಬಾಗಿಲು ಹಾಕಿದೆ. ಮಹಿಳೆ ಶೌಚಾಲಯದಲ್ಲಿ ಬಂದಿ. ಅವಳು ಕಿಟಕಿಯ ಮೂಲಕ ಕಿರುಚಾಡಿ, ಪಕ್ಕದ ಮನೆಯಲ್ಲಿಟ್ಟಿದ್ದ ಕೀಲಿಕೈನಿಂದ ಬೀಗ ತೆಗೆಸಿ 'ಉಸ್ಸಪ್ಪ' ಎಂದು ಉಸಿರೆಳೆದುಕೊಂಡರಂತೆ. ನಿಜ, ಇಂತಹ ಸಂದರ್ಭಗಳಲ್ಲಿ ಪರಿಚಿತರ ಮನೆಯಲ್ಲಿಟ್ಟ ಕೀಲಿಕೈ ಮಾಡುವ ಕೆಲಸ ವರದಾನವೇ ಸೈ. ಬೇರೆ ಊರುಗಳಿಗೆ ಹೋಗುವಾಗಲೂ ಮನೆಯ ಕೀಲಿಯೊಂದನ್ನು ಅಕ್ಕಪಕ್ಕದವರಿಗೆ ಕೊಟ್ಟಿರುವುದು ಒಳ್ಳೆಯ ರೂಢಿ. ಆದರೆ ನಿಮಗೆ ವಾಪಸ್ಸು ಕೊಡುವಾಗ ಅವರಿಗೆ ಕೀಲಿ ಸಿಕ್ಕದೆ, ಮನೆಯವರು ಕೀಲಿ ಇಟ್ಟ ಸ್ಥಳವನ್ನು ಹುಡುಕತೊಡಗಿದರೆ ಹಾಗೂ ಫಜೀತಿಯೇ.

ಇತ್ತೀಚೆಗೆ ವಿದೇಶಗಳಿಗೆ ಪಯಣಿಸುವಾಗ ಸ್ಯೂಟ್‌ಕೇಸ್‌ಗೆ ಬೀಗ ಹಾಕದಿರುವುದು ಅಭ್ಯಾಸವಾಗಿದೆ. ಜೊತೆಗೆ ಸಾಮಾನುಗಳು ಕಳೆದುಹೋಗಿರುವ ಪ್ರಸಂಗಗಳೂ ಇಲ್ಲದಿಲ್ಲ. ನಾನು ಬಹಳ ಹಿಂದೆ ಅಮೆರಿಕದ ಒಂದೂರಿನಿಂದ ಮತ್ತೊಂದೂರಿಗೆ

ಹೋಗುವಾಗ ಅಭ್ಯಾಸಬಲದಂತೆ ಸ್ಯೂಟ್‌ಕೇಸ್‌ಗೆ ಬೀಗ ಜಡಿದು ತೊಂದರೆಗೆ ಒಳಗಾಗಿದ್ದೆ. ನನ್ನ ಬಳಿ ಕೀಲಿಕೈ ತೆಗೆದುಕೊಂಡ ವಿಮಾನದ ಸಿಬ್ಬಂದಿ, ಪೆಟ್ಟಿಗೆಯನ್ನು ಪರೀಕ್ಷಿಸಿ, ನನ್ನ ಕೀಲಿಕೈಯ್ಯನ್ನು ನಾನಿದ್ದ ವಿಮಾನಕ್ಕೇ ಗಗನಸಖಿಯ ಮೂಲಕ ತಲುಪಿಸಿದರು. ನಾನೊಬ್ಬಳೇ ಪಯಣಿಸುತ್ತಿದ್ದ ಮೊದಲ ಪ್ರಯಾಣವಾದ್ದರಿಂದ ಸರಿಯಾದ ವಿಮಾನದಲ್ಲಿರುವೆನಾ ಎಂದು ಗೊಂದಲಕ್ಕೊಳಗಾಗಿದ್ದ ನನಗೆ ಕೀಲಿಕೈ ಕೈಗೆ ಬಂದಾಗ ನಾನು ಸರಿಯಾದ ವಿಮಾನದಲ್ಲಿ ಇರುವೆನಲ್ಲಾ ಎನ್ನುವ ಸಂಗತಿಯೇ ಹೆಚ್ಚು ಸಮಾಧಾನ ತಂದು ನಿರಾಳವಾಯ್ತು. ಆ ಕೀಲಿಕೈಗೆ ನಾನು ಇಂದಿಗೂ ಋಣಿಯೇ.

ಬ್ಯಾಂಕ್ ಅಧಿಕಾರಿಯಾಗಿದ್ದ ಮಹಿಳೆಯೊಬ್ಬರು ಪ್ರತಿನಿತ್ಯ ಬ್ಯಾಂಕಿನ ಕೀಲಿಕೈಗಳನ್ನು ಇರಿಸಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡು ಪರದಾಡಿದ ಪ್ರಸಂಗ ಹೀಗಿದೆ. ಒಂದು ಶುಭದಿನ ಬೆಳಗ್ಗೆ ಮಹಿಳೆಯ ಚೀಲದಲ್ಲಿ ಕೀಲಿಕೈ ಕಾಣಲೇ ಇಲ್ಲ! ಹುಡುಕಿಹುಡುಕಿ ಆಕೆ ಕಂಗಾಲಾದಾಗ ಮನೆಯ ಹಿರಿಯರು, 'ಆ ಪರ್ಸ್ ಕೊಡು ತಾಯಿ, ನಾನು ನೋಡುತ್ತೇನೆ' ಎಂದರಂತೆ. ಆ ಪರ್ಸಿನಲ್ಲಿದ್ದ ಚಿಕ್ಕ ಕಿಂಡಿಯಿಂದ ತೂರಿದ್ದ ಕೀಲಿ ಯಾರಿಗೂ ಕಾಣಿಸದೆ ಒಳಪದರದಲ್ಲಿ ಬೆಚ್ಚಗೆ ಕುಳಿತಿದ್ದುದು ಅವರು ತಡಕುತ್ತಿದ್ದಂತೆ ಸಿಕ್ಕಿತಂತೆ. ಕೀಲಿಕೈ ಕಂಡೊಡನೆ ಮಹಿಳೆಯ ಕಂದಿದ್ದ ಮುಖ ಕಮಲ ಅರಳಿತೆಂದು ಹೇಳಲೇಬೇಕಿಲ್ಲ.

ಈಗೀಗ ಪ್ರತ್ಯೇಕ ಬೀಗವಿಲ್ಲದೆ ಬಾಗಿಲಿಗೇ ಅಂಟಿರುವ ಬೀಗಗಳು ರಾರಾಜಿಸುತ್ತಿವೆ. ಪ್ರಯಾಣ ಕಾಲದಲ್ಲಿ ಬಳಸುವ ಸ್ಯೂಟ್‌ಕೇಸ್‌ಗಳಿಗೂ 'ಡಿಜಿಟಲ್' ಕೀಲಿ ಅವತರಿಸಿರುವುದರಿಂದ ಕೀಲಿಕೈ ಮರೆಯುವ, ಕಳೆಯುವ ತಾಪತ್ರಯವೂ ಇಲ್ಲ. ಸ್ಯೂಟ್‌ಕೇಸ್ ತೆರೆಯಲು 'ಗುಪ್ತಾಂಕ'ಗಳು ನೆನಪಿರಬೇಕು, ಅಷ್ಟೆ. ಒಮ್ಮೆ ನನ್ನ ಆಪ್ತ ಸ್ನೇಹಿತೆಯೊಬ್ಬರು ಮಗ-ಸೊಸೆಯರೇ ಪ್ಯಾಕ್ ಮಾಡಿ ಸಿದ್ಧಗೊಳಿಸಿದ್ದ ಹೊಸ ಸ್ಯೂಟ್‌ಕೇಸನ್ನು ಜರ್ಬಾಗಿ ತಳ್ಳುತ್ತಾ ಪ್ರವಾಸ ಹೊರಟರು. ಮಕ್ಕಳು ಡಿಜಿಟಲ್ ಕೀಲಿಯ 'ಗುಪ್ತಾಂಕ' ವನ್ನೂ ಹೇಳಿದ್ದರು. ಆದರೆ ಪೆಟ್ಟಿಗೆ ತೆರೆಯುವ ಸಮಯದಲ್ಲಿ 'ಗುಪ್ತಾಂಕ' ನನ್ನ ಸ್ನೇಹಿತೆಗೆ ನೆನಪಾಗಲೇ ಇಲ್ಲ. ಶತಪ್ರಯತ್ನದ ನಂತರ, ಮಗನಿಗೇ ಫೋನಾಯಿಸಿದರು. ಅವನು ತಕ್ಷಣ 'ಗುಪ್ತಾಂಕ'ವನ್ನು ಹೇಳಿದ್ದರಿಂದ ಸಾವಿರಾರು ಮೈಲಿ ದೂರದಲ್ಲಿದ್ದವರಿಗೆ ಪೆಟ್ಟಿಗೆ ತೆರೆಯುವುದು ಸಾಧ್ಯವಾಯಿತು. ಇದು ಮೊಬೈಲ್ ಫೋನಿನ ವರದಾನವೆನ್ನೋಣವೇ?

ಒಮ್ಮೆ ಹೋಟೆಲ್ ರೂಮಿನ ಕೀಲಿಕೈಯನ್ನು ನನ್ನ ಮಗ ಎಲ್ಲಿಯೋ ಇಟ್ಟುಬಿಟ್ಟ. ನಾವು ಲ್ಯಾಪ್‌ಟಾಪ್ ಮತ್ತು ಪ್ರಮುಖ ದಾಖಲೆಗಳನ್ನಿಟ್ಟಿದ್ದ ಕೊಠಡಿಯನ್ನು ಭದ್ರಪಡಿಸಿ ಹೊರಗಡೆ ಹೋಗಲು ತಯಾರಾಗಿದ್ದೆವು. ಕೀಲಿಕೈ ಮಾಯವಾಗಿತ್ತು! ಕೀಲಿಕೈ ಕಳೆದರೆ ಹೋಟೆಲ್ಲಿಗೆ ಸಾವಿರ ರೂಪಾಯಿ ಬೇರೆ ತೆರಬೇಕಾಗಿತ್ತು. ನಮ್ಮ ಪರದಾಟ ನೋಡಲಾರದೆ ಹೋಟೆಲ್ಲಿನ ಕೆಲಸಗಾರನೂ ಬಂದು ಮಂಚಗಳನ್ನು ಎಳೆದು ಕೀಲಿಕೈ ಹುಡುಕಲು ಸಹಾಯ ಮಾಡಿದ. ಸಮಯ ಮೀರುತ್ತಿತ್ತು. ಕೊನೆಗೆ ಕಂಡದ್ದೇನು? ಹುಡುಕುತ್ತಿದ್ದ ಕೀಲಿಕೈ ನನ್ನ ಮಗನ ಜೇಬಿನಲ್ಲೇ ಇತ್ತು! ಕೊಂಕಳಲ್ಲೇ ಕೂಸನ್ನಿಟ್ಟುಕೊಂಡು ಮನೆಯೆಲ್ಲಾ ಹುಡುಕಿದಂತಾಗಿತ್ತು ನಮ್ಮ ಹುಡುಕಾಟ. ಭಾರವಾಗಿದ್ದ ದೊಡ್ಡ ಕೀಲಿಕೈ ಅವನ ಜೇಬಿನಲ್ಲೇ ಇದ್ದುದು ಅವನಿಗೇಕೆ ತಿಳಿಯಲಿಲ್ಲ ಎನ್ನುವುದು ಇಂದಿಗೂ ಯಕ್ಷಪ್ರಶ್ನೆಯೇ.

ಇತ್ತೀಚಿನ ಪ್ರಸಂಗ. ಎಲ್ಲಿಂದಲೋ ರಿಕ್ಷಾದಲ್ಲಿ ಬಂದಿಳಿದ ನಮಗೆ ಗೇಟಿನ ಕೀಲಿಕೈ ಮಾಯವಾಗಿ, ಗೇಟು ತೆಗೆಲಾಗಲಿಲ್ಲ. ಬೇರೆ ಗೇಟಿದ್ದದ್ದರಿಂದ ಒಳಗಂತೂ ಹೊಕ್ಕಿದ್ದಾಯಿತು. ಹಳೆಯ ಬೀಗವೆಂದು ಗೇಟಿನ ಬೀಗ ಒಡೆಯಲು ಶತಪ್ರಯತ್ನ ಮಾಡಿದೆವು. ಊಹುಂ, ಬೀಗ ಜಗ್ಗಲಿಲ್ಲ. ನಾವು ಪ್ರವಾಸಿ ಕಂಪನಿಯ ರಿಕ್ಷಾದಲ್ಲಿ ಪಯಣಿಸಿದ್ದರಿಂದ, ಕೊನೆಗೆ ಅವರ ಕಂಪನಿಗೆ ನಮ್ಮ ಮನೆಯ ಕೀಲಿಕೈ ರಿಕ್ಷಾದಲ್ಲಿ ಕಳೆದಿದೆಯೆನ್ನುವ ಸಂದೇಶ, ರಿಕ್ಷಾದ ನಂಬರ್, ನನ್ನ ಹೆಸರು, ಸಮಯ ಇತ್ಯಾದಿಗಳನ್ನು ಕಳಿಸಿದೆ. ಆ ಕಂಪನಿಯವರು ಕೂಡಲೆ ರಿಕ್ಷಾ ಚಾಲಕನನ್ನು ಪತ್ತೆಮಾಡಿ ಸಂದೇಶ ಕಳಿಸಿದರಂತೆ. ಅವನು ಕೂಡಲೆ ನನಗೆ ಕರೆಮಾಡಿದ. ಮೊದಲು ಅವನಿಗೂ. ಕೀಲಿ ಕಂಡಿರಲಿಲ್ಲವಂತೆ. ನಾವಿಳಿಯುವಾಗ ರಿಕ್ಷಾ ಸೀಟು ಸ್ವಲ್ಪ ಸರಿದಿದ್ದರಿಂದ ನನ್ನ ಪತಿಯ ಜೇಬಿನಿಂದ ಜಾರಿದ್ದ ಕೀಲಿಕೈ ಮೆತ್ತೆ ಮತ್ತು ಸೀಟಿನ ನಡುವೆ ಅಡಗಿತ್ತಂತೆ. ಅಂತೂ ನಾನು ಕೇಳುತ್ತಿದ್ದಂತೆ ಆತ ಮೆತ್ತೆ ಎತ್ತಿ ಹುಡುಕಿದಾಗ ಕಾಣಿಸಿತ್ತು. ಮರುದಿನ ನಮ್ಮ ಮನೆಯಕಡೆ ಬಂದಾಗ ಕೀಲಿಯನ್ನು ತಲುಪಿಸಿದ. ರಿಕ್ಷಾ ಚಾಲಕನಿಗೆ ಭಕ್ಷೀಸು ನೀಡಿದೆ. ಅಮೂಲ್ಯವಾದ ಕೀಲಿಕೈ ಸಿಕ್ಕಾಗ ನನಗೆ ದೊಡ್ಡ ನಿಧಿಯೇ ಸಿಕ್ಕಂತಾಯ್ತು. ಅಷ್ಟರಲ್ಲಿ ನಮ್ಮ ಪೆಟ್ಟುಗಳಿಂದ

ಘಾಸಿಗೊಂಡಿದ್ದ ಬೀಗ ಕೀಲಿಕೈನಿಂದ ತೆರೆದುಕೊಳ್ಳದೆ ತಗಾದೆ ಮಾಡಿತು. ಬಹುಶಃ 'ನನ್ನನ್ನು ಬಿಟ್ಟು ಎಲ್ಲಿಗೆ ಹೋಗಿದ್ದೆ' ಎಂದು ಮಗು ಅಮ್ಮನ ಜೊತೆ ಮಾಡುವಂತೆ ಅದು ಕೀಲಿಕೈನ ಜೊತೆ ಹಠ ಮಾಡುತ್ತಿತ್ತೋ ಏನೋ. ಬೀಗಕ್ಕೆ ಮತ್ತಷ್ಟು ಹೊಡೆದು ಕೀಲಿಕೈಗೆ ಅನುವು ಮಾಡಿಕೊಟ್ಟೆವು. ಅಂತೂ ಇಂದಿಗೂ ಗೇಟಿನ ಬೀಗದ ಈ ಪ್ರಸಂಗ ನೆನಪಾಗುತ್ತದೆ.

ಜಗತ್ತಿನಲ್ಲಿರುವ ಎಲ್ಲರಿಗೂ ಒಂದಲ್ಲ ಒಂದು ಬಾರಿ ಕೀಲಿಕೈನಿಂದ ಎಡವಟ್ಟಾಗಿರುವುದೂ ಸತ್ಯ ಎನ್ನುವುದು ನನ್ನ ಅನಿಸಿಕೆ. ಇಂತಹ ನನ್ನ ನೆನಪುಗಳನ್ನು ಅನಾವರಣ ಮಾಡಿದಾಗ ನಿಮಗೂ ಹಲವು ಪ್ರಸಂಗಗಳು ನೆನಪಾಗಿರಬಹುದಲ್ಲವೆ?

***

ಯಾಯಾವರ

– ಜಾನಕಿರಾಮು

ಗಾವುದದ ಅಳತೆಯಲಿ ಜೀವನವನಳೆದು
ಸಾಗುತಿದೆ ದಿಗ್ಗೇಡಿ ತಿಳಿಗೇಡಿ ಪಯಣ
ಜೊತೆಯಲ್ಲಿ ಮಣ್ದಾರಿ, ಹುಲ್ಲುಹದಿ ಅರಣಗಳು
ಗೆಳೆತನಕೆ ಸಂಧ್ಯೆ ಉಷೆ ನಿಶೆ ಮತ್ತು ಅರುಣ
ಕಾಲಚಕ್ರದ ಮೇಲೆ ಹತ್ತಿ ಚಾರಣ ನಡೆಸು
ನಿಲ್ಲದಿರು ನಿಲ್ಲದಿರು ಯಾಯಾವರ...

ದಾರಿ ಅಲ್ಲೇ ಇಹುದು ಹಗಲಿರಲಿ ಇರುಳಿರಲಿ
ದಾರಿಹೋಕರ ದಾರಿ ಬದಲಾಯಿತು
ನದಿಯು ಹರಿಯುತಲಿಹುದು ಯುಗದ ಆ ಮೂಲೆಯಿಂ
ದಂಡೆಗಳ ಮುಖಗವುಸು ಬದಲಾಯಿತು
ಜೀವಿತದ ಭಾವಿತದ ವ್ಯತಿರೇಕತೆಯನರಿತು
ನಿಲ್ಲದಿರು ನಿಲ್ಲದಿರು ಯಾಯಾವರ...

ತಿರುಗುತ್ತಲೇ ಇಹುದು ಮುಳ್ಳು ಗಡಿಯಾರದಲಿ
ಕ್ಷಣಗಳೋ ಉದುರುದುರಿ ಹಬೆಯಾದವು
ಅನುಭವದ ಹೆಗ್ಗಂಟು ಕೇಶಗಳ ಬೆಳ್ಳಿತನ
ನಿಲವಿನ ಚೆಲುವಿಕೆಯ ಪ್ರಭೆಯಾದವು
ಚರತತ್ವ ಪರತತ್ವ ವ್ಯತಿರೇಕತೆಯನರಿತು
ನಿಲ್ಲದಿರು ನಿಲ್ಲದಿರು ಯಾಯಾವರ...

***

ಓ ಹೆನ್ರಿಯ ಕತೆ

ಗಾಜಿನ ತಾರಸಿ ಕೋಣೆ (ದಿ ಸ್ಕೈ ಲೈಟ್ ರೂಂ)

– ವಿಠ್ಠಲ. ಇಜೇರಿ

ಕಥೆಗಳು ಅನಾದಿ ಕಾಲದಿಂದ ಮನುಷ್ಯರಿಗೆ ಅನಿವಾರ್ಯವೆನಿಸಿವೆ. ಮೂರನೇ ಶತಮಾನದ 'ವಡ್ಡರಾಧನೆ'ಯಿಂದ ಇಂದಿನ ವರೆಗಿನ ಕಥಾ ಸಾಹಿತ್ಯವನ್ನು ಈ ದಿಶೆಯಲ್ಲಿ ಗಮನಿಸಬಹುದು. ಜಿ.ಕೆ. ಚೆಸ್ಟರಸನ್ ಅವರು "Literature is a luxary and fiction is a necessity" ಎಂಬ ಮಾತನ್ನು ಹೇಳುತ್ತಾರೆ. ಅಂದರೆ ಹೆಚ್ಚಿನ ಕತೆಗಳಲ್ಲಿ ವಾಸ್ತವತೆಯ ಕೊರತೆ ಇರುತ್ತದೆ. ಒಂದು ವಿಷಯದ ವೈಭವೀಕರಣ ಇರುತ್ತದೆ ಆದರೆ ಕತೆ ಸತ್ಯದತ್ತ ಬೆಟ್ಟು ತೋರಿಸುತ್ತಿರುತ್ತದೆ. ಅದನ್ನು ಇಂದಿನ ಓ ಹೆನ್ರಿ ಕತೆಗಳಲ್ಲೂ ಕಾಣಬಹುದು. ಕತೆಗಳ ಸರಳತೆ ಮತ್ತು ಸೊಬಗಿನ ಕಾರಣ ಕತೆಗಳ ಮೂಲಕ ನಮ್ಮ ನಾಡಿನಲ್ಲಿ ಧರ್ಮ ಪ್ರಚಾರ (ವಡ್ಡರಾಧನೆ), ನೈತಿಕ ಶಿಕ್ಷಣ (ಪಂಚತಂತ್ರ, ಇಸೋಫನ ನೀತಿ ಕಥೆಗಳು). ಮನರಂಜನೆ (ಕಥಾ ಸರಿತ್ಸಾಗರ) ಇತ್ಯಾದಿ ಕತೆಗಳ ಸಂಕಲನಗಳನ್ನು ಗಮನಿಸಬಹುದು. ಕತೆ ಹೇಳುವವರಿಗೆ, ಬರೆಯುವವರಿಗೆ ಕತೆಯ ಪಯಣದ ಕುರಿತು ತಿಳಿದಿರುತ್ತದೆ, ಅಂತಹದೇ ಪಯಣಕ್ಕೆ ಓದುಗರನ್ನು, ಕೇಳುಗರನ್ನು ಕರೆದೊಯ್ಯುವ ಉದ್ದೇಶ ಅವರದಾಗಿರುತ್ತದೆ. ಕತೆ ಹೇಳುವವರು ತಮ್ಮದೇ ಆದ ರೀತಿಯಲ್ಲಿ ಪಾತ್ರಗಳಿಗೆ ಜೀವ ತುಂಬುತ್ತಾರೆ. ಕಥೆಗಳು ಹಿರಿಯರಿಗೆ, ಮಕ್ಕಳಿಗೆ, ಅವರವರ ವಯಸ್ಸಿಗೆ ಅನುಗುಣವಾಗಿ ಇಷ್ಟವಾಗುತ್ತವೆ. ಮ್ಯಾಕ್ ಸ್ಮಿತ್ ಎಂಬವರು "We are all stories in the end – ನಾವೆಲ್ಲ ಒಂದು ದಿನ ಕಥೆಗಳೇ ಆಗುತ್ತೇವೆ" ಎಂದು ಅಭಿಪ್ರಾಯಪಡುತ್ತಾನೆ. ಮರಣ ಹೊಂದಿದವರ ಕುರಿತು ಮುಂದಿನ ಪೀಳಿಗೆಗೆ ಅವರ ಬಗೆಗಿನ ಕಥೆಗಳನ್ನು ಹೇಳುತ್ತಾ ಹಿನ್ನೆಲೆಗೆ ಸಾರಿದವರ ಪರಿಚಯ ಮಾಡಿಕೊಡುತ್ತಾರೆ. ಇದಿಷ್ಟು ಹಿನ್ನೆಲೆಯಲ್ಲಿ ವಿಲಿಯಂ ಸಿಡ್ನಿ ಪೋರ್ಟರ್ ಕಾವ್ಯನಾಮ ಓ ಹೆನ್ರಿ ಅವರು ಬರೆದ "ದಿ ಸ್ಕೈಲೈಟ್ ರೂಮ್" ಅಂದರೆ "ಗಾಜಿನ ತಾರಸಿ ಕೋಣೆ" ಕತೆಯನ್ನು ನೋಡೋಣ.

ಓ ಹೆನ್ರಿ ಅವರ ಕಥೆಗಳಲ್ಲಿ ಅನಿರೀಕ್ಷಿತ ಮತ್ತು ಆಶ್ಚರ್ಯಕರ ತಿರುವುಗಳಿರುತ್ತವೆ ಮತ್ತು ಓದುಗರ ಕುತೂಹಲ ಉಳಿಸಿಕೊಳ್ಳುತ್ತವೆ. ಅದನ್ನು ಈ ಕತೆಯಲ್ಲೂ ಕಾಣಬಹುದಾಗಿದೆ. ಈ ಕತೆಯನ್ನು ಓ ಹೆನ್ರಿ 1906ರಲ್ಲಿ ಬರೆದಿರುವರು. ಇದು ಮಿಸ್ ಲೆಸೆನ್ ಎಂಬ ಯುವತಿಯ ಕತೆಯಾಗಿದೆ. ಆಕೆ ಮಿಸೆಸ್ ಪಾರ್ಕರ ಎಂಬವರ ಪೇಯಿಂಗ್ ಗೆಸ್ಟ್ ಆಗಿ ಆಕೆಯ ಮನೆಯಲ್ಲಿ ಇರುವ ಸಮಯದ ಕಷ್ಟದ ದಿನಗಳ ಕತೆಯಾಗಿದೆ.

ಲೆಸೆನ್ ಹಣವಂತಳಲ್ಲ. ಆದುದರಿಂದ ಪಾರ್ಕರಳ ಮನೆಯ ಕೊನಯ ಅಂತಸ್ತಿನ ಒಂಟಿ ಕೋಣೆಯಲ್ಲಿ ಬಾಡಿಗೆಗೆ ಇದ್ದಾಳೆ. ಅದೊಂದು ಸೂರ್ಯನ ಬೆಳಕು ಬೀಳುವ ಗಾಜಿನ ತಾರಾಸಿಯ ಚಿಕ್ಕ ಕೋಣೆ. ಆಕೆ ಅಲ್ಲಿ ಊಟದ ಹಣ ಮತ್ತು ಕೋಣೆಯ ಬಾಡಿಗೆ ಕೊಡಲಾಗದೆ ಬಸವಳಿದಿರುತ್ತಾಳೆ. ಒಂದು ದಿನ ಸಂತೋಷ ಕೂಟದಲ್ಲಿ ಒಬ್ಬ ಆಕೆಯನ್ನು ಮದುವೆಯಾಗಲು ಮುಂದೆ ಬರುತ್ತಾನೆ. ಆಕೆ ಮದುವೆಗೆ ಒಪ್ಪುವುದಿಲ್ಲ.

ತನ್ನ ಕೋಣೆಗೆ ಬಂದ ಲೆಸೆನ್ ತುಂಬಾ ದಣಿದಿರುತ್ತಾಳೆ. ಬಾಗಿಲು ಮುಚ್ಚಿದ್ದಷ್ಟೇ ಗೊತ್ತು ಹಾಸಿಗೆಯ ಮೇಲೆ ಗಾಜಿನ ಮೂಲಕ ಆಕಾಶದತ್ತ ನೋಡುತ್ತಾ ಮಲಗಿಬಿಡುತ್ತಾಳೆ. ಆಗ ಆಗಸದಲ್ಲಿಯ ನಕ್ಷತ್ರವೊಂದನ್ನು ನೋಡುತ್ತಾ ಆ ನಕ್ಷತ್ರಕ್ಕೆ ಬಿಲ್ಲಿ ಜೋಕ್ಸನ್ ಎಂದು ಕರೆಯುತ್ತಾಳೆ. ಹಾಗೆಯೇ ಪ್ರಜ್ಞೆ ತಪ್ಪಿ ಮಲಗುತ್ತಾಳೆ. ಮರುದಿನ ಬೆಳಿಗ್ಗೆ ಬಂದ ಮನೆಕೆಲಸದವಳು ಬಲವಂತವಾಗಿ ಬಾಗಿಲು ತೆಗೆದು ಪ್ರಜ್ಞೆ ತಪ್ಪಿದ ಲೆಸೆನ್‌ಳನ್ನು ಎಚ್ಚರಿಸುವ ವಿಫಲ ಪ್ರಯತ್ನ ಮಾಡುತ್ತಾಳೆ. ನಂತರ ಆಂಬುಲೆನ್ಸ್‌ನಲ್ಲಿ ಲೆಸೆ ಳನ್ನು ಆಸ್ಪತ್ರೆಗೆ ತಂದು ಸೇರಿಸಲಾಗುತ್ತದೆ. ಅಲ್ಲಿಯ ಡಾಕ್ಟರ್ ಆಕೆಯ ಜೀವ ಉಳಿಸುತ್ತಾನೆ. ಆ ಡಾಕ್ಟರ್ ಹೆಸರು ಕೂಡಾ ಬಿಲ್ಲಿ ಜೋಕ್ಸನ್ ಎಂದಿರುತ್ತದೆ. ಇದೂ ಒಂದು ಓ ಹೆನ್ರಿ ಮಾದರಿಯ ಕಾಕತಾಳೀಯ.

ಈ ಕತೆಯನ್ನು 1917ರಲ್ಲಿ ಚಲನಚಿತ್ರಕ್ಕೆ ಅಳವಡಿಸಿದ್ದರು. ನೆನೆದವರ ಮನದಲ್ಲಿ ಎಂಬುದಕ್ಕೆ ಉದಾಹರಣೆಯಾಗಿ ಈ ಕತೆ ನಿಲ್ಲುತ್ತದೆ.

***

ತಾರಾಳ ಮುಡಿಯಲ್ಲಿ ತಾರೆ

– ಶೀಲಾ ಅರಕಲಗೂಡು

ತಾರಾಳ ಮನೆ ಇದ್ದದ್ದು ಸಮುದ್ರದ ತೀರದಲ್ಲಿದ್ದ ಒಂದು ಅಪಾರ್ಟ್ಮೆಂಟಿನಲ್ಲಿ. ಅವಳಮ್ಮ ಸೌಭಾಗ್ಯ, ಪ್ರತಿದಿನ ಹಾಲು ಕುಡಿಸುವಾಗ, ತಿಂಡಿ ತಿನ್ನಿಸುವಾಗ, ಊಟ ಮಾಡಿಸುವಾಗ, ಕಿಟಕಿಯ ಮೂಲಕ ಕಾಣಿಸುತ್ತಿದ್ದ ಸಮುದ್ರವನ್ನು ತೋರಿಸುತ್ತಿದ್ದಳು. ಸಮುದ್ರವನ್ನು ಕಂಡರೆ ಅದೇನೋ ಆಕರ್ಷಣೆ ತಾರಾಳಿಗೆ. ಸ್ವಲ್ಪ ದೊಡ್ಡವಳಾದ ನಂತರ ತಂದೆ, ತಾಯಿ ಅವಳನ್ನು ಸಮುದ್ರ ತೀರಕ್ಕೆ ಕರೆದುಕೊಂಡು ಬಂದು ಆಡಿಸುತ್ತಿದ್ದರು. ಸಮುದ್ರದ ನೀರು ಕಾಲು ಸೋಕಿದಾಗ ಏನೋ ಪುಳಕವಾಗುತ್ತಿತ್ತು ತಾರಾಳಿಗೆ. ಖುಷಿಯಿಂದ ತಕಪಕ ಕುಣಿಯುತ್ತಿದ್ದಳು. ಕೈಗಳಿಂದ ನೀರನ್ನು ತಟ್ಟಿ ತಟ್ಟಿ ಆನಂದಿಸುತ್ತಿದ್ದಳು. ಯಾವ ಮಕ್ಕಳಿಗೂ ಇರದಷ್ಟು ಸಂತೋಷ, ಉತ್ಸಾಹ, ಉಲ್ಲಾಸ ತಾರಾಳಿಗೆ ಸಮುದ್ರವನ್ನು ಕಂಡರೆ. ಒಂದು, ಒಂದೂವರೆ ಗಂಟೆಯ ನಂತರ ತಂದೆ, ತಾಯಿ ಅವಳನ್ನು ಮನೆಗೆ ಬಲವಂತವಾಗಿ ಕರೆದೊಯ್ಯಬೇಕಾಗುತ್ತಿತ್ತು.

"ನೀರು ನನ್ನ ಹತ್ರಾನೇ ಬರ್ತೀನಿ ಅನ್ನುತ್ತೆ. ಪಾಪ, ಅದನ್ನ ಬಿಟ್ಟು ಹೋಗೋದು ಹೇಗಮ್ಮಾ? ಇನ್ನೊಂದ್ ಸ್ವಲ್ಪ ಹೊತ್ತು ಇರೋಣ್ವಾ?" ಅಂತ ನಾಲ್ಕು ವರ್ಷದ ತಾರಾ ಬೇಡುತ್ತಿದ್ದರೆ ತಾಯಿ ಸೌಭಾಗ್ಯ ಹಾಗೂ ತಂದೆ ಸುರೇಶರಿಗೆ 'ಇದೇಕೆ ಇಷ್ಟೊಂದು ಸೆಳೆತ ಈ ಮಗುವಿಗೆ ಸಮುದ್ರದ ಬಗ್ಗೆ?' ಎನಿಸುತ್ತಿತ್ತು. ಆದರೂ ಸಮಾಧಾನ ಹೇಳಿ ವಾಪಸ್ಸು ಕರೆದುಕೊಂಡು ಹೋಗುತ್ತಿದ್ದರು. ಕನಿಷ್ಠ ಪಕ್ಷ ವಾರದಲ್ಲಿ ನಾಲ್ಕೈದು ದಿನಗಳಾದರೂ ತಾರಾಳನ್ನು ಸಮುದ್ರಕ್ಕೆ ಕರೆದೊಯ್ಯಲೇಬೇಕಿತ್ತು. ಕೆಲವೊಮ್ಮೆ ಆಟ ನಿಲ್ಲಿಸಿ ತಾರಾ ನೀರನ್ನೇ ನೋಡುತ್ತಾ ನಿಂತುಬಿಡುತ್ತಿದ್ದಳು.

ಈಗ ತಾರಾಳಿಗೆ ಆರು ವರ್ಷ. ಅವಳಿಗೆ ಸಮುದ್ರಕ್ಕೆ ಹೋಗುವ ದಾರಿ ಹಾಗೂ ಹಿಂದಿರುಗಿ ಬರುವ ದಾರಿಯೂ ಗೊತ್ತಿತ್ತು. ಆದರೆ ಅಪ್ಪ ಅಮ್ಮ, ಅವಳೊಬ್ಬಳನ್ನೇ ಕಳಿಸಲು ಸಾಧ್ಯವೇ?

ಅದೊಂದು ದಿನ ಸಂಜೆ 5.00 ಗಂಟೆಗೆ, ತಾರಾ ತಾನೊಬ್ಬಳೇ ಸಮುದ್ರ ತೀರಕ್ಕೆ ಬಂದುಬಿಟ್ಟಳು. ಇದು ಅಪ್ಪ ಅಮ್ಮನ ಗಮನಕ್ಕೆ ಬರಲಿಲ್ಲ. ಅಂದು ಹುಣ್ಣಿಮೆಯಾಗಿದ್ದರಿಂದಲೋ ಏನೋ, ಸಮುದ್ರದ ತೆರೆ ಮೇಲುಮೇಲಕ್ಕೆ ಉಕ್ಕಿ ಉಕ್ಕಿ ಬರುತ್ತಿತ್ತು. ಅದನ್ನೇ ನೋಡುತ್ತಾ ಕುಳಿತಳು ತಾರಾ. ಅವಳಿಗೆ ತೆರೆಯ ಮೇಲೆ ಕುಳಿತು ಸಮುದ್ರದ ಮೇಲೆಲ್ಲ ತೇಲಾಡಬೇಕೆಂಬ ಆಸೆ ಉಂಟಾಯಿತು. ತೆರೆಯನ್ನು ಕೇಳಿದಳು,

"ತೆರೆಯೇ, ತೆರೆಯೇ, ನನ್ನನ್ನು ನೀನು ನಿನ್ನ ಮೇಲೆ ಕೂರಿಸಿಕೊಂಡು ಸುತ್ತಾಡಿಸುವೆಯಾ?"

ಮುಗ್ಧ ಬಾಲಕಿಯ ಮಾತಿಗೆ ಮನಸೋತ ನೀರಿನ ತೆರೆ, "ಬಾ ತಾರಾ, ನಿಧಾನವಾಗಿ ನನ್ನ ಮೇಲೆ ಕುಳಿತುಕೋ. ನಿನ್ನನ್ನು ಎಲ್ಲೆಡೆ ತೇಲಾಡಿಸುತ್ತೇನೆ" ಎಂದಿತು.

ಮೆಲು ಹೆಜ್ಜೆಗಳನ್ನಿಡುತ್ತಾ, ತಾರಾ ತೆರೆಯ ಮೇಲೆ ಕುಳಿತಳು. ತೆರೆ ಮುಂದೆ ಮುಂದೆ ಸಾಗಿದಂತೆ ಅವಳಿಗೆ ದಿವ್ಯಾನಂದ! ಖುಷಿಯಿಂದ ಚಪ್ಪಾಳೆ ತಟ್ಟಿ ಸುತ್ತಲೂ ನೋಡತೊಡಗಿದಳು. ತಲೆಯೆತ್ತಿ ನೋಡಿದಾಗ ಅಲ್ಲೊಂದು ಹಕ್ಕಿ ಹಾರುತ್ತಿರುವುದನ್ನು ಕಂಡಳು. ಹಕ್ಕಿಯೂ ತಾರಾಳನ್ನು ನೋಡಿತು. ಅದು ಮೆಲ್ಲಗೆ ಕೆಳಗೆ ಇಳಿದು ತೆರೆಯನ್ನು ಕೇಳಿತು, "ತೆರೆಯೇ, ತೆರೆಯೇ, ನಾನೂ ಕೂಡಾ ನಿನ್ನ ಮೇಲೆ ಕುಳಿತುಕೊಳ್ಳಬಹುದೇ?"

"ತಾರಾ ಒಪ್ಪಿದರೆ ಆಗಬಹುದು" ಎಂದಿತು ತೆರೆ. ತಾರಾ ಅತ್ಯಂತ ಪ್ರೀತಿಯಿಂದ, "ಬಾ ಹಕ್ಕಿ, ನನ್ನ ತೊಡೆಯ ಮೇಲೆ ಕುಳಿತುಕೋ. ಇಬ್ಬರೂ ಒಟ್ಟಿಗೆ ಎಲ್ಲೆಡೆ ತೇಲಾಡೋಣ. ಎಷ್ಟು ಮಜಾ ಇದೆ ಅಲ್ವಾ?" ಎಂದಳು. ಹಾಗೆ ಇಬ್ಬರೂ ಖುಷಿಯಿಂದ

ಹೋಗುತ್ತಿರುವಾಗ ತಲೆಯೆತ್ತಿ ನೋಡಿದರೆ ಆಕಾಶದ ತುಂಬಾ ಚದುರಿದ ಮೋಡಗಳು! ಅಲ್ಲಲ್ಲೇ ಮಿನುಗುವ ನಕ್ಷತ್ರಗಳು! ಹಕ್ಕಿಗೆ ಒಮ್ಮೆಯಾದರೂ ನಕ್ಷತ್ರವೊಂದನ್ನು ಮುಟ್ಟಿ ಅದನ್ನು ಕಿತ್ತು ತರುವ ಆಸೆ. ಆದರೆ ತಾರಾಳಿಗೋ, ಮೋಡದ ಮೇಲೆ ನಡೆದಾಡುವ ಆಸೆ. ಒಟ್ಟಿನಲ್ಲಿ ಇಬ್ಬರಿಗೂ ಮೇಲೆ ಗಗನದಲ್ಲಿ ಸಂಚರಿಸುವ ಆಸೆ. ಇಬ್ಬರೂ ತಮ್ಮ ತಮ್ಮ ಆಸೆಗಳನ್ನು ಹೇಳಿಕೊಳ್ಳುತ್ತಿರುವಾಗ, ನೀರಿನ ತೆರೆ ಈ ಮಾತುಗಳನ್ನು ಕೇಳಿಸಿಕೊಂಡಿತು. ಅದು ಹೇಳಿತು, "ನಿಮ್ಮಿಬ್ಬರ ಆಸೆಯೂ ನನಗೆ ತಿಳಿಯಿತು. ಚಿಂತೆ ಬೇಡ. ಹೇಗಿದ್ದರೂ ನಾನು ಸೂರ್ಯನ ಶಾಖಕ್ಕೆ ಆವಿಯಾಗಿ ಮೇಲೆ ಆಗಸದತ್ತಲೇ ಹೋಗುತ್ತೇನೆ. ನನ್ನ ಜೊತೆ ನಿಮ್ಮಿಬ್ಬರನ್ನೂ ಕರೆದೊಯ್ಯುತ್ತೇನೆ". ತೆರೆಯ ಮಾತನ್ನು ಕೇಳಿದ ಹಕ್ಕಿ ಹಾಗೂ ತಾರಾ ಅತ್ಯಂತ ಖುಷಿಯಿಂದ ಅಲ್ಲಿಯೇ ಎರಡು ಸುತ್ತು ತಿರುಗಿದರು.

ನಾವು ಹೋಗುವ ಗಗನಕ್ಕೆ
ಆವಿಯ ಜೊತೆಗೆ ಮೇಲಕ್ಕೆ

ಎಂದು ಹಾಡಿ ಹಾಡಿ ನಲಿದರು. ಇಷ್ಟರಲ್ಲಿ ಸಮಯ ಕಳೆಯುತ್ತಾ ಕಳೆಯುತ್ತಾ ರಾತ್ರಿಯೂ ಮುಗಿದು ಹಗಲಾಗಿ ಸೂರ್ಯ ಉರಿಯತೊಡಗಿದ. ಸೂರ್ಯನ ಶಾಖಕ್ಕೆ ನೀರು ಆವಿಯಾಗಿ ಮೇಲೇರತೊಡಗಿತು. ಅದರೊಂದಿಗೆ ಹಕ್ಕಿ ಹಾಗೂ ತಾರಾ ಕೂಡಾ ಚಪ್ಪಾಳೆ ತಟ್ಟುತ್ತಾ ಖುಷಿಯಾಗಿ ಮೇಲೇರತೊಡಗಿದರು. ತಮ್ಮ ಕನಸು ನನಸಾಗುತ್ತಿರುವ ಇಂತಹ ಸುಸಮಯಕ್ಕೆ ಅವರಿಗೆ ಆನಂದವೋ ಆನಂದ. ಹೋದ್ರೂ, ಹೋದ್ರೂ, ಬಹಳ ಹೊತ್ತು ಮೇಲೆ ಮೇಲೆ ಹೋಗುತ್ತಲೇ ಇದ್ದರು. ಕಡೆಗೊಮ್ಮೆ ಮೋಡದ ಹತ್ತಿರ ತಲುಪಿದರು. ಆವಿಯು ಮೋಡದೊಡನೆ ಸೇರಿಕೊಂಡಿತು. ನಿಧಾನವಾಗಿ ತಾರಾ ಮೋಡದ ಮೇಲೆ ನಡೆದಾಡ ತೊಡಗಿದಳು. ಅವಳು ಹಕ್ಕಿಗೆ, "ನನ್ನ ಮುದ್ದು ಹಕ್ಕಿಯೇ, ನೀನೀಗ ತಾರೆಯ ಸಮೀಪದಲ್ಲಿರುವೆ. ಹೋಗಿ ನಿನ್ನಿಷ್ಟದ ಯಾವುದಾದರೊಂದು ತಾರೆಯನ್ನು ತೆಗೆದುಕೊಂಡು ಬಾ" ಎಂದಳು. ಹಕ್ಕಿ ಖುಷಿಯಿಂದ ಮೇಲೆ ಹಾರಿತು. ಹತ್ತಿರವೆಂದು ಕಂಡಂತಹ ಒಂದು ತಾರೆಯನ್ನು ಹಾಗೇ ಮೇಲಿಂದ ಸೆಳೆದು ಕೈಯಲ್ಲಿ ಹಿಡಿದು ತಂದಿತು. ಥಳಥಳನೆ ಹೊಳೆಯುತ್ತಿತ್ತು ತಾರೆ. ಅದನ್ನು ಕಣ್ಣರಳಿಸಿ ನೋಡಿದಳು ತಾರಾ. ಅವಳ ಮನದ ಆಸೆ ತಿಳಿಯಿತೋ ಎಂಬಂತೆ ಹಕ್ಕಿ ಆ ನಕ್ಷತ್ರವನ್ನು ತಾರಾಳ ಮುಡಿಯ ಮೇಲೆ ಇರಿಸಿ, "ಆಹಾ, ನೀನೀಗ ಎಷ್ಟು ಚಂದ ಕಾಣ್ತಿ ಗೊತ್ತಾ?" ಎಂದು ಹೇಳಿ ಚಪ್ಪಾಳೆ ತಟ್ಟಿತು. ತಾರಾಳಿಗೆ ಈ ಅನಿರೀಕ್ಷಿತ ಉಡುಗೊರೆಯಿಂದ ಮತ್ತಷ್ಟು ಖುಷಿಯಾಯಿತು.

ಸ್ವಲ್ಪ ಸಮಯದಲ್ಲೇ ಮೋಡ ದಟ್ಟವಾಗಿ ಕಪ್ಪಾಗಿ ಭಾರವಾಗತೊಡಗಿತು. ಕಡೆಗೊಮ್ಮೆ ಮಳೆಯ ರೂಪದಲ್ಲಿ ಕೆಳಗೆ ಸುರಿಯ ತೊಡಗಿತು. ಅದರ ಜೊತೆಜೊತೆಗೆ ತಾರಾ ಹಾಗೂ ಹಕ್ಕಿ ಕೂಡ ಕೆಳಗೆ ಇಳಿಯುತ್ತಾ ಬಂದರು. ಬಟ್ಟೆ ತೋಯ್ದಿತ್ತು. ಸಮುದ್ರದ ದಡದಲ್ಲಿ ತಾರಾಳನ್ನು ಮಳೆ ಕೆಳಗೆ ಇರಿಸಿತು. ಹಕ್ಕಿ, "ನಾನೀಗ ಮನೆಗೆ ಹೋಗ್ತೀನಿ ತಾರಾ. ನನ್ನಮ್ಮ ಕಾಯ್ತಾ ಇರ್ತಾರೆ" ಅಂತ ಹೇಳಿ ಹಾರಿಹೋಯಿತು. ತಾರಾಳಿಗೂ ತನ್ನಮ್ಮ ಅಪ್ಪನ ನೆನಪು ಬಂದು ಸುತ್ತಲೂ ನೋಡತೊಡಗಿದಳು.

ಅಷ್ಟರಲ್ಲಿ ದೂರದಿಂದ ಅಪ್ಪ ಅಮ್ಮ ಬರುವುದು ಕಂಡಿತು. ಅವರ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು. "ತಾರಾ, ತಾರಾ, ಎಲ್ಲಿರುವೆ ಪುಟ್ಟೀ?" ಎಂದು ಕೂಗುತ್ತಾ ತಾರಾಳನ್ನು ಹುಡುಕಿಕೊಂಡು ಬಂದಾಗ, ಮಳೆಯಲ್ಲಿ ನೆನೆಯುತ್ತಿದ್ದ ತಾರಾಳನ್ನು ಕಂಡರು. ಅತ್ಯಂತ ಸಂತೋಷದಿಂದ, "ಇಲ್ಲಿಯೇ ಇದ್ದೀಯ ಪುಟ್ಟೀ? ಹೇಳ್ದೆ ಕೇಳ್ದೆ ಬಂದ್ಬಿಟ್ಟಿದ್ದೀಯಲ್ಲಪ್ಪಾ?" ಎನ್ನುತ್ತಾ, ಎತ್ತಿಕೊಂಡು ಮುದ್ದುಮಾಡಿ, "ಹಾಗೆಲ್ಲ ಒಬ್ಬಳೇ ಬರಬಾರದು ಪುಟ್ಟ" ಎಂದು ಅಪ್ಪಿಕೊಂಡರು.

ತಾರಾ ತನ್ನ ವಿಹಾರದ ಬಗ್ಗೆ ಸಂತೋಷದಿಂದ ನೆನೆಯುತ್ತಾ ತಲೆಯನ್ನು ಮುಟ್ಟಿ ನೋಡಿಕೊಂಡರೆ ಅಲ್ಲಿ ನಕ್ಷತ್ರ ಇರಲಿಲ್ಲ. ಅವಳಿಗೆ ತನ್ನ ಅನುಭವ ಕನಸೋ ನನಸೋ ತಿಳಿಯಲೇ ಇಲ್ಲ. ಅಮ್ಮನ ಹೆಗಲ ಮೇಲೆ ತಲೆ ಇಟ್ಟು ಹಾಗೆಯೇ ನಿದ್ದೆ ಹೋದಳು.

***

ಅನಾವರಣ

– ಗಿರಿಜಾ ರಾಜ್ ಎಲ್.

ಅಗೋ! ಆ ಹುಚ್ಚಿ ಬಂದಳು! ಗೌರವಿ ಮನೆಯೊಳಗೆ ಏನೇ ಕೆಲಸ ಮಾಡುತ್ತಿದ್ದರೂ, ಅವಳ ದನಿಗೆ ಜಾಗೃತಳಾಗಿ ಬಿಡುತ್ತಾಳೆ. ವಯಸ್ಸಿನಲ್ಲಿ ಆ ಹುಚ್ಚಿ ಲಕ್ಷಣವಾಗಿದ್ದ ಯುವತಿಯಾಗಿದ್ದಳು ಎನ್ನುವುದಕ್ಕೆ ಅವಳ ಮುಖದ ಲಕ್ಷಣ ಪುರಾವೆ ಒದಗಿಸುತ್ತಿದ್ದವು. ಯಾರನ್ನೋ ಬೈಯುತ್ತಲೇ ಇರುತ್ತಾಳೆ. ಗಂಡನನ್ನೇ ಹೆಚ್ಚಾಗಿ. ಗಂಡನ ಮನೆಯವರನ್ನೂ, ಒಮ್ಮೊಮ್ಮೆ ಇಂಥ ಮನೆಗೆ ಕೊಟ್ಟ ತಾಯ್ತಂದೆಯರನ್ನೂ. ಆಗೆಲ್ಲ ಯಾರನ್ನಾದರೂ ಬಯ್ದುಕೋ, ತಂದೆತಾyiಯನ್ನು ಬೇಡ ಎಂದು ಗೌರವಿಗೆ ಕೂಗಿ ಹೇಳಬೇಕು ಎನ್ನಿಸುತ್ತದೆ. ಕೆಲವೊಮ್ಮೆ ಅಶ್ಲೀಲತೆಯೂ ನುಸುಳುತ್ತದೆ, ಅಚ್ಚರಿಯೆಂದರೆ ಒಮ್ಮೊಮ್ಮೆ ಅವಳ ಭಾಷೆ ಕಾವ್ಯಮಯವೂ ಆಗುತ್ತದೆ. ಅವಳ ಭಾಷೆ, ಅವಳು ಕಲಿತವಳು ಎಂಬುದಕ್ಕೆ ಸಾಕ್ಷಿ ನುಡಿಯುತ್ತದೆ. ಸಾಹಿತ್ಯದಲ್ಲೂ ಆಸಕ್ತಿ ಇರುವುದೇನೋ ಎನಿಸುತ್ತದೆ. ಎಲ್ಲರೂ ಅವಳನ್ನು 'ಹುಚ್ಚಿ' ಎಂದು ಪರಿಗಣಿಸಿ, ಏನಾದರೂ ಬಯ್ದುಕೋ ಎಂದು ಬಿಟ್ಟುಬಿಟ್ಟಿದ್ದಾರೆ. ತಮ್ಮ ತಮ್ಮ ಲೋಕಗಳಲ್ಲಿ ಮುಳುಗಿ, ಸದ್ಯ! ನಮ್ಮ ತಲೆ ಕೆಡದಂತೆ ಸರಿಯಾಗಿ ಇಟ್ಟುಕೊಂಡರೆ ಸಾಕು ಎನ್ನುವಂತಹ ದಿನಗಳಿವು! ಇಂದು ಯಾರೂ ಯಾರಿಗಾಗಿಯೂ ಲಾಭವಿಲ್ಲದೆ ತಮ್ಮ ಸಮಯ ಕೊಡಲು ಅಥವಾ ಇನ್ನೊಬ್ಬರಿಗಾಗಿ ಸ್ಪಂದಿಸಲು ಹಿಂಜರಿಯುವ ಕಾಲ! ಎಲ್ಲಿ ತಾವು ಅನವಶ್ಯಕವಾಗಿ ತೊಂದರೆಗಳನ್ನು ಮೈಮೇಲೆ ಎಳೆದುಕೊಂಡುಬಿಡುತ್ತೇವೋ ಎಂಬ ಮನಃಸ್ಥಿತಿ ಬಹುತೇಕರಿಗೆ ಇಂದು ಬಂದಿದ್ದರೆ ಅಚ್ಚರಿಯಿಲ್ಲ. ಈ ಯಾಂತ್ರಿಕ ಭಾವಗಳಲ್ಲಿ, ನಿಜವಾದ ಮಮತೆ, ಭಾವನಾತ್ಮಕ ಆರ್ದ್ರತೆ ಕೊಚ್ಚಿಕೊಂಡು ಹೋಗಿವೆ.

ಒಮ್ಮೊಮ್ಮೆ ಯಾರನ್ನೂ ಬೈಯದೆ ಮೌನವಾಗಿ ಸಾಗುತ್ತಾಳೆ. ಖಂಡುಗ ಸಂಕಟ ಎದೆಯ ಮೇಲೆ ಹೊತ್ತಂತೆ, ನಿಟ್ಟುಸಿರುಗಳನ್ನು ಬಿಡುತ್ತಾ ಹೋಗುತ್ತಿರುತ್ತಾಳೆ. ಅವಳು ನಿಜವಾಗಿ ಹುಚ್ಚಿಯೇ? ಎನಿಸಿ ಎಲ್ಲೋ ಒಳಗೆ ಸಂಕಟ! ಅವಳು ನಮ್ಮ ಹಾಗೆಯೇ ಹೆಣ್ಣುಮಗಳು! ಆ ಮನಸು ಎಷ್ಟು ನೊಂದಿದೆಯೋ ಎಂದು ಎದೆಯಾಳದಲ್ಲಿ ಎಲ್ಲೋ ಸಂಕಟ!

ಯಾರಿವಳು? ತುಂಬ ಖಾಸಗಿಯಾದ ವಿಚಾರಗಳನ್ನೆಲ್ಲ ಹೀಗೆ ಬೀದಿಯ ಮೇಲೆ ಗಳುಹುತ್ತ ಹೊರಟಿದ್ದಾಳಲ್ಲ! ಅವಳಿಗಿದೆ ಆ ಧೈರ್ಯ! ನಿನಗಿದೆಯೇ? ಎಂದು ಅವಳನ್ನು ಮನಸು ಮೂದಲಿಸುತ್ತದೆ. ಗೌರವಿ ಗತ ನೆನಪುಗಳಲ್ಲಿ ಮುಳುಗಿ ಹೋಗುತ್ತಾಳೆ, ಇಲ್ಲ, ಆ ಧೈರ್ಯವಿಲ್ಲ ಎಂದು ಸೋಲೊಪ್ಪಿ ಕೊಳ್ಳುತ್ತಾಳೆ!

ತನ್ನ ಯವ್ವನವೆಲ್ಲ ಗಂಡನ ದರ್ಪ ದೌರ್ಜನ್ಯಗಳಲ್ಲಿ ಪ್ರೀತಿಯ ಮಧುರ ಸ್ಪರ್ಶವಿಲ್ಲದೆ ಕಳೆದು ಹೋದುದಕ್ಕೆ ಅವಳಿಗೆ ವ್ಯಥೆ ಇದೆ. ಅದಕ್ಕಾಗಿ ಅಶ್ಲೀಲ ಬೈಗುಳ ಸರಮಾಲೆಯಂತೆ ಹೊರಬೀಳುತ್ತದೆ. ಲಜ್ಜೆಯಿಂದ ನಾಚುತ್ತ, ಖಂಡುಗ ಕನಸುಗಳನ್ನು ನೇಯುತ್ತ ಧಾನ್ಯ ತುಂಬಿದ ಸೇರನ್ನು ಒದ್ದಿದ್ದಷ್ಟೇ ಭಾಗ್ಯ! ನಂತರ ಅವಳು ತಿಂದಿದ್ದು ಬರೀ ಒದೆತ! ಕಠೋರ ಅನುಭವಗಳೇ ಆಗಿ, ಒಳಗೆ ಚಿಗುರಿ, ಗಂಡನ ಪ್ರೇಮದ ತೋಳಬಂಧನದಲ್ಲಿ ದಾಂಗುಡಿಯಿಟ್ಟು ಹಬ್ಬಿಕೊಳ್ಳಲು ಕಾದಿದ್ದ, ಅನುರಾಗದ ಲತೆ ಬಾಡಿ, ಎದೆಯಲ್ಲಿ ಅರಳಿದ್ದ ಪ್ರೀತಿಯ ಗಿಡ ಸುಟ್ಟು ಹೋಗಿತ್ತು. ಇಂದಲ್ಲಿ ಸತ್ತ ಪ್ರೀತಿಯ ಬೂದಿ ಮಾತ್ರ ಇದೆ!

ಇವನ ಮತ್ತು ಮನೆಯ ಸಮಸ್ತ ಚಾಕರಿ ಮಾಡಲು ತಾನು ಬೇಕು! ಹೊಡೆಸಿಕೊಳ್ಳಲು ಅವಳ ಮೈಯೇ ಬೇಕು! ಕಾಮ ಕೆರಳಿದಾಗ ಅದನ್ನೂ ಇದೇ ಮೈ ತಣಿಸಬೇಕು! ಅವನ ಹೆತ್ತವರು, ಅಕ್ಕ, ತಮ್ಮಂದಿರ ಮುಂದೆ ಹೀಯಾಳಿಸಲೂ ಅವಳೇ ಬೇಕು! ಮಾರುಕಟ್ಟೆಯಲ್ಲಿ ಕೊಂಡು ತಂದ ವಸ್ತುವನ್ನು ಬಳಸುವ ರೀತಿಯಲ್ಲಿ ಎಸೆದ ಕಡೆ ಬಿದ್ದಿರಬೇಕು. ಈ ಅರ್ಥಗಳೆಲ್ಲ ಆ ಹುಚ್ಚಿಯ ಮಾತುಗಳಲ್ಲೂ ಇಣುಕುತ್ತವೆ. ಇವಳಂಥವರನ್ನು ಘಾಸಿಗೊಳಿಸುತ್ತವೆ. ಆದರೆ ಅಲ್ಲಿಂದ ಎಲ್ಲಿಗೆ ಹೋಗಲು ಸಾಧ್ಯ?

ಈಗಲಾದರೋ ಹುಚ್ಚಿ! ಏನಾದರೂ ಅನ್ನಲಿ, ಹೇಳಿಕೇಳಿ ಹುಚ್ಚಿ ಎಂಬ ರಿಯಾಯಿತಿ. ಎಲ್ಲೆಲ್ಲೋ ತಿರುಗುತ್ತಾಳೆ, ಎಲ್ಲೋ ಬಿದ್ದುಕೊಳ್ಳುತ್ತಾಳೆ, ಯಾರೋ ಕರುಣೆಯಿಂದ ತಿನ್ನಲು ಏನೋ ನೀಡುತ್ತಾರೆ. ಮನೆಯವರು ಅವಳನ್ನು ಹೊರಹಾಕಿ, ಆ ಊರನ್ನೇ ಬಿಟ್ಟು ಬೇರೆಡೆಗೆ ಹೋಗಿದ್ದಾರೆ.

ಆ ಹುಚ್ಚಿ ದಿನ ದಿನ ಮಾತನಾಡುತ್ತ ಆಡುತ್ತ, ಗೌರವಿಯ ಎದೆಯೊಳಗೆ ಹೂತು ಹಾಕಿ ಸಮಾಧಿ ಮಾಡಿದ್ದ ಸತ್ಯ ಸಂಗತಿಗಳನೆಲ್ಲಾ ಅಗೆದು ತೆಗೆಯತೊಡಗಿದ್ದಳು. ಅರೆ! ಅವಳ ಅನುಭವ ನನ್ನ ಅನುಭವ ಏಕಾಯಿತು? ನನ್ನೆದೆಗೂಡಿನ ಅವರಣದೊಳಗೆ ಬೆಚ್ಚಗೆ ಬಚ್ಚಿಟ್ಟ ಸತ್ಯಗಳನ್ನೆಲ್ಲ ಅನಾವರಣ ಮಾಡುವ ಶಕ್ತಿಯಿದೆ ಆ ಹುಚ್ಚಿಯ ದನಿಗೆ, ಎಂದುಕೊಳ್ಳುತ್ತಾಳೆ. ಅವಳ ಎದೆಯೊಳಗೇ ಯಾರೋ ಪಿಸುಗುಟ್ಟಿದಂತಾಗುತ್ತದೆ.

"ನಿನ್ನೊಬ್ಬಳ ಅನುಭವ ಮಾತ್ರವಲ್ಲ, ಅನೇಕ ನತದೃಷ್ಟ ಹೆಣ್ಣುಮಕ್ಕಳ ಅನುಭವಗಳನ್ನೆಲ್ಲ ಅನಾವರಣ ಮಾಡುತ್ತಿದ್ದಾಳೆ ಅವಳು! ಇನ್ನಾವುದೋ ಪ್ರಿಯ ಹವ್ಯಾಸಗಳಲ್ಲಿ ಆ ನೋವುಗಳ ಕೊರತೆಯನ್ನು ಕೆಲವರು ನಿವಾರಿಸಿಕೊಂಡು ಜೀವನಕ್ಕೆ ಒಂದು 'ನವಚೇತನ' ಪಡೆದುಕೊಂಡಿರಬಹುದು. ಆದರೆ ಆ ಆಕ್ರೋಶ ಸ್ಫೋಟವಾಗದೆ, ಜೊತೆ ಜೊತೆಗೇ ಮಡಿಲ ಬೆಂಕಿಯಾಗಿ ಒಳಗೇ ಅಡಗಿರುತ್ತದೆ. ಆದರೆ ತಣ್ಣಗಿನ ಕ್ರೌರ್ಯವೂ ಅಪಾಯಕಾರಿಯೇ. ಕೆಡುಕನ್ನು ಮಾಡಲಾರದ ನತದೃಷ್ಟ ಹೆಣ್ಣಮಕ್ಕಳು ಹೀಗೆ ತಮಗೇ ಕೆಡುಕು ಮಾಡಿಕೊಳ್ಳುತ್ತಾರೆ, 'ಹುಚ್ಚಿ' ಎನಿಸಿಕೊಳ್ಳುತ್ತಾರೆ! ಸರಿಯಾಗಿದ್ದಾಗ ಹೇಳಿದ ಸತ್ಯಗಳನ್ನೇ ನಂಬದ ಸಮಾಜ ಹುಚ್ಚಿಯ ಮಾತುಗಳಲ್ಲಿ ಸತ್ಯ ಗುರುತಿಸಬಲ್ಲುದೇ?

ಎಲ್ಲೋ ದೂರದಿಂದ 'ಮನು' ಹೇಳಿದ ಮಾತುಗಳು ಕೇಳಿಬರುತ್ತವೆ, ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ ಇನ್ನೊಂದು ದಿಕ್ಕಿನಿಂದ ಮತ್ತೆ ಮನುವೇ ಅಬ್ಬರಿಸಿದಂತಾಗುತ್ತದೆ ನಸ್ತ್ರೀ ಸ್ವಾತಂತ್ರಮ್ ಅರ್ಹತಿ.

***

ನಮ್ಮ ನಾಡು – ಹೆಮ್ಮೆಯ ಬೀಡು

– ರೇಣುಕಾ ದೇಸಾಯಿ

ಕನ್ನಡಕೆ ಹೋರಾಡು ಓ ಎನ್ನ ಕಂದ, ಕನ್ನಡವ ಕಾಪಾಡು ನೀ ಎನ್ನ ಕಂದ, ಎಂದು ಎಲ್ಲ ಕನ್ನಡಿಗರಿಗೆ ಕರೆ ಕೊಡುತ್ತಾ ಕನ್ನಡದ ಹಿರಿಮೆ ಗರಿಮೆಗಳ ಅವಲೋಕನ ಮಾಡೋಣ. ನಾಲ್ಕನೇ ಶತಮಾನದಲ್ಲೇ ಕನ್ನಡದಲ್ಲಿ ಶಾಸನ ದೊರೆತಿದ್ದು ಅದು ನಮ್ಮ ಭಾಷೆಯ ಶ್ರೇಷ್ಠತೆ ಎತ್ತಿತೋರುತ್ತದೆ ಅದುವೇ ತಾಳಗುಂದದಲ್ಲಿ ದೊರೆತ ಶಾಸನ. ಈ ಶಾಸನದ ಕಾಲ ಕ್ರಿ. ಶ. ೩೭೦ರಿಂದ ೪೫ ರ ಮಧ್ಯದ ಅವಧಿಯಯೆಂದು ಪುರಾತತ್ವ ಇಲಾಖೆ ದೃಢಪಡಿಸಿದೆ. ಕರ್ನಾಟಕದ ಮೊದಲ ರಾಜಮನೆತನ ಕದಂಬರು, ಕದಂಬರ ಮೂಲ ಪುರುಷ ಮತ್ತು ಸಂಸ್ಥಾಪಕನಾದ ಮಯೂರವರ್ಮನ ಬಗ್ಗೆ ಈ ಶಾಸನ ವಿವರವಾದ ಮಾಹಿತಿ ಒದಗಿಸುತ್ತದೆ.

ಜಗದ್ಗುರು ಶಂಕರರು, ಮಧ್ವರು, ರಾಮಾನುಜರು ನೆಲೆಸಿದ ನಾಡು. ವಿದ್ಯಾರಣ್ಯ ಬಸವೇಶ್ವರರು, ರನ್ನ, ಷಡಕ್ಷರ, ಪೊನ್ನ, ಪಂಪ. ಲಕ್ಮ್ಮೀಪತಿ, ಕುಮಾರವ್ಯಾಸ ಅವರಿಂದ ಮೊದಲುಗೊಂಡು ಡಿವಿಜಿ, ಬಿ ಎಂಶ್ರೀ, ಬೇಂದ್ರೆ, ಮಾಸ್ತಿ, ಕುವೆಂಪು, ಆಲೂರು ವೆಂಕಟರಾಯರು, ಶಿವರುದ್ರಪ್ಪ, ಭೈರಪ್ಪ ಹೀಗೆ ರಸಋಷಿಗಳಿಂದ ಬೆಳೆದ ನಮ್ಮ ಕನ್ನಡ ಚೆಲುವಿನ ಭಾಷೆ ಜೇನಿನ ಹೊಳೆಯಂತೆ ಸುಮಧುರ ಮತ್ತು ಆಪ್ತವಾದ ಭಾಷೆ. ಜೊತೆಗೆ ಕನ್ನಡ ನಾಡು ಗಂಧದ ಬೀಡು ಹೊನ್ನಿನ ಗಣಿಯು ಇರುವ ಚಂದದ ನಾಡು. ಇಂತಹ ಸಂಪತ್ಭರಿತ ನಾಡಿಗೆ, ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿ ಬಂದಿರುವುದು ನಮ್ಮ ಭಾಷೆಯ ಹೆಗ್ಗಳಿಕೆಗೆ ಒಂದು ಮಾಪನ.

ಭಾಷಾವಾರು ಪ್ರಾಂತ್ಯಗಳಾಗಿ ಎಪ್ಪತ್ತು ವರ್ಷಗಳಾದರೆ, ಕನ್ನಡ ನಾಡಿಗೆ ಕರ್ನಾಟಕ ಎನ್ನುವ ಹೆಸರು ಬಂದು ೫೩ ವರ್ಷಗಳು. ರಾಜ್ಯೋತ್ಸವದ ಮಾಸದಲ್ಲಿ ನಮ್ಮ ನಾಡನ್ನು ಕಟ್ಟಿ ಬೆಳೆಸಿ ಮೆರೆಸಿ ಉಳಿಸಿದ ರಾಜಮಹಾರಾಜರುಗಳ ಬಗೆಗೆ ಒಂದಿಷ್ಟು ಅವಲೋಕನ. ದಸರೆಯನ್ನು ನಾವು ನಾಡಹಬ್ಬ ಎನ್ನುತ್ತೇವೆ, ಹಾಗೇನೇ ಕನ್ನಡ ರಾಜ್ಯೋತ್ಸವವನ್ನೂ ನಾಡಹಬ್ಬ ಎನ್ನುತ್ತೇವೆ. ತಾಯಿ ಚಾಮುಂಡಿ ಮತ್ತು ಕನ್ನಡಾಂಬೆ ಇಬ್ಬರೂ ಒಂದೇ, ನಮಗೆ ಸದಾ ಒಳ್ಳೆಯದನ್ನು ದಯಪಾಲಿಸುತ್ತಾರೆ. ಅವರ ಕೃಪಾಶೀರ್ವಾದದಲ್ಲಿ ನಾಡನ್ನು ಆಳಿದ ಶ್ರೇಷ್ಠ ಕನ್ನಡ ದೊರೆಗಳಲ್ಲಿ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ದೊರೆಗಳು ಮತ್ತು ಯದುವಂಶಜರು ಕನ್ನಡ ನಾಡಿಗೆ ಅತಿ ಮುಖ್ಯವಾದ ದೊರೆಗಳು. ಕದಂಬರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸಿದರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು ನಾಡನ್ನು ಸಿರಿಸಂಪತ್ತಿನಿಂದ ಸಮೃದ್ಧಗೊಳಿಸಿದರು, ಶಿಲ್ಪ ಕಲೆಯ ಸಿರಿನಾಡನ್ನಾಗಿಸಿದರು. ಹೊಯ್ಸಳರು ಹುಲಿಯನ್ನು ಬರಿಗೈಲಿ ಹೋರಾಡಿ ಜಯ ಗಳಿಸಿದ ವೀರರು, ಗಡಿದಾಟಿ ನಾಡನ್ನು ವಿಸ್ತರಿಸಿದರು. ಶ್ರೀಮಂತ ನಾಡನ್ನು ವಿಶಾಲವಾಗಿ ಕಾವೇರಿಯಿಂದ ಗೋದಾವರಿವರೆಗೆ ವಿಸ್ತರಿಸಿ ಮುತ್ತುರತ್ನಗಳನ್ನು ಪೇಟೆಯ ಬದಿಯಲ್ಲಿ ಮಾರಾಟ ಮಾಡಿದ ಅತ್ಯಂತ ಸಮೃದ್ಧ ನಾಡನ್ನಾಗಿಸಿತು ವಿಜಯನಗರ ಸಾಮ್ರಾಜ್ಯ. ಇನ್ನು ಯದುವಂಶಜರು ಜ್ಞಾನ ವಿಜ್ಞಾನದ ಬೀಡನ್ನಾಗಿ ಕರ್ನಾಟಕವನ್ನು ಉನ್ನತಕ್ಕೆ ಏರಿಸಿದ ಧರ್ಮಭೀರುಗಳು.

ಕರ್ನಾಟಕವೆಂದರೆ ಒಂದು ಸಂಕ್ಷಿಪ್ತ ಭಾರತ. ಇಷ್ಟು ವಿಶಿಷ್ಟವಾದ ಸಂಗಮ ಬೇರೆ ರಾಜ್ಯಗಳಲ್ಲಿ ಕಾಣುವುದು ಅಪರೂಪ. ಆದ್ದರಿಂದಲೇ ಕನ್ನಡಕ್ಕೆ ಮಹತ್ವವನ್ನು ತಂದವರಲ್ಲಿ ಮರಾಠಿ ಕನ್ನಡಿಗರು, ತಮಿಳು ಕನ್ನಡಿಗರು, ಕೊಂಕಣಿ ಕನ್ನಡಿಗರು, ತುಳು ಕನ್ನಡಿಗರು, ತೆಲುಗು ಕನ್ನಡಿಗರು, ಕೊಡವ ಕನ್ನಡಿಗರು, ಉರ್ದು ಕನ್ನಡಿಗರು ಹೀಗೆ ಹಲವರಿದ್ದಾರೆ. ಕನ್ನಡ ನಾಡಿನ ಸಂಸ್ಕೃತಿ ಮತ್ತು ಜೀವನಕ್ರಮ ಇಂಗ್ಲಿಷ್ ಭಾಷೆಯ ಸಾಹಿತ್ಯಕ್ಕೂ ಬೆಲೆಯುಳ್ಳ ಕೃತಿಯನ್ನು ಸೇರಿಸಿವೆ. ಅನೇಕತೆಯಲ್ಲಿ ಏಕತೆ ನಮ್ಮ ರಾಷ್ಟ್ರದ ವೈಶಿಷ್ಟ್ಯ, ಅದರಂತೆ ಕರ್ನಾಟಕದ ವೈಶಿಷ್ಟ್ಯವೂ ಆಗಿದೆ. ಸುಸಂಸ್ಕೃತರಾದವರು ನಮ್ಮ ಪೂರ್ವಜರು. ಅಲ್ಲದೆ ಅನಕ್ಷರಸ್ಥರಾಗಿದ್ದವರು ಕೂಡಾ, ಕಿವಿಯಿಂದ ಕಿವಿಗೆ ದಾಟುವಂತೆ ನಮ್ಮ ಪೌರಾಣಿಕ ಪ್ರಜ್ಞೆಯನ್ನು ಈ ಭಾಷೆಯಲ್ಲಿ ಉಳಿಸಿದ್ದಾರೆ. ಪಂಪನಿಂದ ಕುಮಾರವ್ಯಾಸನತನಕ ಲೇಖಕರು ಸಂಸ್ಕೃತದಲ್ಲಿನ ಜೀವಾಳವನ್ನು ದೇಶೀಯ ಅಧಿಕೃತ

ಧಾಟಿಯಲ್ಲಿ ಕನ್ನಡಿಕರಿಸಿದ್ದಾರೆ. ವಚನಕಾರರು ಉಪನಿಷತ್ತಿನ ವಿಷಯ ಸಾರವನ್ನು ಋಷಿಗಳಂತೆ ಚಿಂತಿಸಿ ಕನ್ನಡದಲ್ಲಿ ಅದನ್ನು ಪ್ರತಿಬಿಂಬಿಸಿದ್ದಾರೆ. ನಮ್ಮ ಆಧುನಿಕರು ಐರೋಪ್ಯ ಸಂಸ್ಕೃತಿಯ ಜೀವಾಳವನ್ನು ತಮ್ಮತಮ್ಮ ವಿಶಿಷ್ಟ ಅನುಭವದ ಮೂಸೆಯಲ್ಲಿ ಎರಕಹೊಯ್ದು ಕನ್ನಡಕ್ಕೆ ತಂದಿದ್ದಾರೆ. ಕನ್ನಡ ಎಲ್ಲ ಭಾಷೆಗಳಿಂದಲೂ ತನ್ನ ಹವಿಸ್ಸನ್ನು ಪಡೆದು ತನ್ನ ತನವನ್ನು ಕಳೆದು ಕೊಳ್ಳದಂತೆ ತನ್ನ ವಿಸ್ತಾರವನ್ನು ಸಾಧಿಸಿಕೊಂಡಿದೆ. ಸಾವಿರಾರು ವರ್ಷಗಳಷ್ಟು ಹಳೆಯದಾದ ಭಾಷೆ. ೫೬ ಅಕ್ಷರಗಳ ಮಾಲೆ ಮತ್ತು ಸಮೃದ್ಧ ವ್ಯಾಕರಣ ಹೊಂದಿದ ಭಾಷೆ. ಆಡಿದಂತೆ ಬರೆಯುವ, ಬರೆದಂತೆ ಆಡುವ ಭಾಷೆ ಕನ್ನಡ. ಇಂತಹ ಸತ್ವಯುತ ಭಾಷೆಯನ್ನು ನಾವು ಉಳಿಸಿ ಬೆಳೆಸಿ ನಿತ್ಯ ಮಂತ್ರವನ್ನಾಗಿಸಬೇಕಾಗಿದೆ, ಯಾವದೇ ಅನ್ಯಾಯವನ್ನು ಸಹಿಸಿಕೊಳ್ಳುವ ಜನ ಕನ್ನಡಿಗರು ಎಂಬ ಜಾಡ್ಯ ನಮಗೆ ಅಂಟುವುದು ಬೇಕಿಲ್ಲ. ನಾವು ಕನ್ನಡಿಗಎಂಬ ಹೆಮ್ಮೆ ಸದಾ ನಮ್ಮಲ್ಲಿ ಜಾಗೃತವಾಗಿರಲಿ.

ಹೊರ ದೇಶಗಳಿಗೆ ಹೋದಾಗ ನೀನು ಯಾರೆಂದು ಕೇಳಿದರೆ ನಾನು ಭಾರತೀಯಳು ಎನ್ನುತ್ತೇನೆ, ದೆಹಲಿಯಲ್ಲಿ ಇದೇ ಮಾತು ಕೇಳಿದರೆ ನಾನು ಕನ್ನಡಿಗಳು ಎನ್ನುತ್ತೇನೆ, ಬೆಂಗಳೂರಿನಲ್ಲಿ ಕೇಳಿದರೆ ಉತ್ತರ ಕರ್ನಾಟಕದವಳು ಎಂದು ಹೇಳುತ್ತೇನೆ, ಸ್ವಂತ ಊರಿನಲ್ಲಿ ಯಾರಾದರೂ ಈ ಪ್ರಶ್ನೆ ಕೇಳಿದರೆ ನಮ್ಮ ಮನೆತನ ಇತ್ಯಾದಿ ಕುರುಹುಗಳನ್ನು ಹೇಳುತ್ತೇನೆ. ಪ್ರತಿ ಭಾರತೀಯನಿಗೂ ಹೀಗೆ ಹಲವು ಕೊಂಡಿಗಳ ಸರಪಳಿಯ ವಾಸ್ತವದ ನೈಜವಾದ ಜೀವನವಿರುತ್ತದೆ, ಅದು ತನ್ನತನವನ್ನು ಉಳಿಸಿಕೊಳ್ಳುವುದೇ ಆಗಿರುತ್ತದೆ.

ಹೀಗೆ ನಮ್ಮ ನಾಡು, ನಮ್ಮ ಭಾಷೆ, ನಮ್ಮ ಧರ್ಮ ಎನ್ನುವ ಹೆಮ್ಮೆ ನಮಗೆಲ್ಲ ಇರಲಿ. ಸದಾ ನಾವು ಹೇಳುತ್ತಾ ಇರೋಣ ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವ ದೀಪ ಎಂದು.

ಎಲ್ಲರಿಗೂ ಮತ್ತೊಮ್ಮೆ ರಾಜ್ಯೋತ್ಸವದ ಶುಭಾಶಯಗಳು.

ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ.

***

ಸ್ವಾನುಭವ

ಮನೆ– ಕಲ್ಲು, ಇಟ್ಟಿಗೆ, ಕಬ್ಬಿಣ, ಮಣ್ಣು, ವುಡ್‌ವರ್ಕ್ ಇಷ್ಟೇನಾ?

– ಸುವರ್ಣಲಕ್ಷ್ಮಿ

ಅದರೊಳಗಿನ ನಾನು ನನ್ನವರು ಅತಿಥಿ ಸತ್ಕಾರ ಇವೆಲ್ಲಾ ಸೇರಿದೆಯೇ ಎಂಬ ಅನುಮಾನ ಈಗೀಗ ಕಾಡುತ್ತಿದೆ. ಇತ್ತೀಚೆಗೆ ತುಂಬಾ ಜನ ಹೊಸ ಹೊಸ ವಿನ್ಯಾಸದಲ್ಲಿ ಸಾಲಸೋಲ ಮಾಡಿ ಮನೆ ಕಟ್ಟುತ್ತಿದ್ದಾರೆ ಗೃಹಪ್ರವೇಶವನ್ನೂ ಅದ್ದೂರಿಯಾಗಿ ಮಾಡುತ್ತಾರೆ. ಆದರೆ ಗೃಹಪ್ರವೇಶದ ನಂತರ ಮನೆಗೆ ಬರುವ ಅತಿಥಿಗಳನ್ನು ಹಲವರು ಸರಿಯಾಗಿ ಸತ್ಕರಿಸುತ್ತಿಲ್ಲ ಅಭ್ಯಾಗತರ ಕಥೆಯಂತೂ ಹೇಳಲೇಬೇಡಿ.

ನನ್ನ ದೂರದ ಸೋದರತ್ತೆಯೊಬ್ಬರು ಯಾವಾಗಲೂ ನಮ್ಮ ಮನೆಗೆ ಬನ್ನಿ ಎಂದು ಬಲವಂತವಾಗಿ ಕರೆಯುತ್ತಿದ್ದರು. ಒಮ್ಮೆ ಆ ಊರಿನ ಮೇಲೆ ಹಾದು ಹೋಗುವಾಗ ಅತ್ತೆಯ ನೆನಪಾಗಿ ಅವರ ಮನೆಗೆ ಹೋದೆ. ಕಾಫಿ ಕೊಟ್ಟರು, ಕುಡಿದೆ. ನಂತರ ವಾಷ್ ರೂಂ ಎಲ್ಲಿದೆ ಅಂತ ಕೇಳಿದೆ, ತೋರಿಸಿದರು. ನಾನು ಹೋಗಿಬಂದ ನಂತರ 'ನಿಮ್ಮ ಮಾವನಿಗೆ ವಾಷ್ ರೂಂ ಬೇರೆಯವರು ಬಳಸಿದರೆ ಸರಿ ಹೋಗುವುದಿಲ್ಲ' ಅಂದರು. ಕೂಡಲೇ ಹೊರಟುಬಿಟ್ಟೆ. ಊಟ ಮಾಡು ಎಂದರೂ ಕೇಳಲಿಲ್ಲ ನಾನು. ಅದೇ ಕೊನೆ, ಮತ್ತೆ ಅವರ ಮನೆಗೆ ಹೋಗಲೇ ಇಲ್ಲ. ಅವರ ಮನೆಗೆ ಹೋದಮೇಲೆ ಅವರ ವಾಷ್ ರೂಂ ಬಳಸದೇ ಇನ್ನೆಲ್ಲಿ ಹೋಗಲಿ?

ಮತ್ತೊಬ್ಬ ನೆಂಟರ ಹುಡುಗಿ ಬೆಂಗಳೂರಿಗೆ ಮದುವೆಯಾಗಿ ಹೋದವಳು ಒಳ್ಳೆ ಮನೆ ಕಟ್ಟಿದಳು. ಗೃಹಪ್ರವೇಶಕ್ಕೂ ಕರೆದಳು. ಹೋಗಿ ಬಂದೆವು. ವರ್ಷದ ನಂತರ ಬೆಂಗಳೂರಿನಲ್ಲಿ ಒಂದು ಮದುವೆ ಸಮಾರಂಭವಿತ್ತು. ಆಹ್ವಾನ ಪತ್ರಿಕೆ ಅವಳಿಗೂ ನಮಗೂ ತಲುಪಿದಾಗಿನಿಂದ 'ಆಂಟಿ ಮದುವೆಗೆ ಬರುತ್ತೀರಾ, ಯಾವಾಗ ಬರುತ್ತೀರಿ' ಅಂತೆಲ್ಲಾ ಕರೆ ಮಾಡುತ್ತಿದ್ದಳು. ನಾನಂತೂ ರಿಸೆಪ್ಷನ್ ಮುಗಿಸಿ ನೆಮ್ಮದಿಯಾಗಿ ಅವಳ ಮನೆಗೆ ಹೋಗಿ ಮತ್ತೆ ಬೆಳಿಗ್ಗೆ ಎದ್ದು ಧಾರೆಗೆ ಹೋಗೋಣ ಅಂತೆಲ್ಲಾ ಅಂದುಕೊಂಡೆ. ಆದರೆ ಛತ್ರದಲ್ಲಿ ಕಾಣಿಸಿದವಳು ಬಾಯಿತುಂಬಾ ಮಾತನಾಡಿದ್ದೇ ಹೊರತು, ಮರೆತು ಕೂಡಾ ಮನೆಗೆ ಬನ್ನಿ ಎಂದು ಕರೆಯಲಿಲ್ಲ. ನನ್ನನ್ನು ಬಿಡಿ, ಅವರ ತಾಯಿ ಕೂಡಾ ಮದುವೆಗೆ ಬಂದಿದ್ದರು. ಅವರನ್ನೂ ಸಹ ಮನೆಗೆ ಬಾ ಎಂದು ಕರೆಯಲಿಲ್ಲ ಮತ್ಯಾವ ಭಾಗ್ಯಕ್ಕೆ ಇವರು ಮನೆ ಕಟ್ಟುವುದು? ಐದಾರು ಜನ ಹೋದರೂ ಉಳಿದುಕೊಳ್ಳುವಷ್ಟು ಜಾಗವಿತ್ತು ಅವಳ ಮನೆಯಲ್ಲಿ.

ಮತ್ತೊಂದು ಕಥೆ – ಮೈಸೂರಿನ ಐಟಿ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದ ನೆಂಟರ ಹುಡುಗಿ ಒಬ್ಬಳು ಕೋಟಿ ಬೆಲೆಬಾಳುವ ಮನೆ ಕೊಂಡು ಗೃಹಪ್ರವೇಶಕ್ಕೆ ಕರೆದಳು. ಕಾರಣಾಂತರಗಳಿಂದ ಹೋಗಲಾಗಲಿಲ್ಲ. 'ಅವಳು ಗೃಹಪ್ರವೇಶಕ್ಕಂತೂ ಬರಲಿಲ್ಲ, ಮೈಸೂರು ಕಡೆ ಬಂದಾಗ ಬನ್ನಿ' ಎಂದು ಕರೆಯುತ್ತಲೇ ಇದ್ದಳು. ಹೀಗೇ ಒಮ್ಮೆ ಮೈಸೂರಿಗೆ ಹೋದಾಗ ಅವಳಿಗೆ ಕರೆ ಮಾಡಿ, 'ಮೈಸೂರಿಗೆ ಬಂದಿದ್ದೇನೆ, ಮನೆಗೆ ಬರಲೇ. ನಿನಗೆ ಬಿಡುವಿದೆಯೇ' ಎಂದು ಕೇಳಿದೆ. 'ಬನ್ನಿ ಬನ್ನಿ' ಎಂದಳು. ಮನೆಗೆ ಹೋದೆ. ತಕ್ಷಣ ಮನೆಯ ಮೂಲೆಮೂಲೆಯ ಪರಿಚಯವನ್ನು ಬೆಲೆ ಸಮೇತ ವಿವರಿಸಿದಳು. ನಂತರ ಅಡುಗೆ ಏನು ಮಾಡಲಿ ಅಂತ ಕೇಳಿದಳು. ನಿನಗೆ ತೋಚಿದ್ದು ಮಾಡು ಅಂದೆ. ಉಪ್ಪಿಟ್ಟು ಮಾಡಿದಳು. ನಾವುಗಳು ತಿಂದು ಹರಟೆ ಹೊಡೆಯುತ್ತಾ ಕುಳಿತೆವು. ಅವಳು ಇದ್ದಕ್ಕಿದ್ದಂತೆ, 'ಅಯ್ಯೋ, ನೀವು ಬಂದ್ರಿ. ನಿಮಗೆ ಮನೆ ತೋರಿಸಿ ಉಪ್ಪಿಟ್ಟು ಮಾಡೋದ್ರಲ್ಲಿ ಆಫೀಸ್ ಕಾಲ್ಸ್ ಇತ್ತು ಅನ್ನೋದೇ ಮರೆತುಹೋದೆ' ಅಂದಳು, ಅವಳ ಕೆಲಸಕ್ಕೆ ತೊಂದರೆ ಆದಂತೆ. ಕೆಲಸ ಇದ್ದವಳು ನಾನು ಕರೆ ಮಾಡಿದಾಗ ಇವತ್ತು ಬಿಡುವಿಲ್ಲ ಎಲ್ಲೋ ಹೋಗಿದ್ದೀನಿ ಅಂತ ಸುಳ್ಳಾದರೂ ಹೇಳಿದ್ದರೆ ನಾವು ಹೋಗುತ್ತಲೇ ಇರಲಿಲ್ಲ. ಅವಳ ಕೆಲಸಕ್ಕೂ ತೊಂದರೆ ಆಗುತ್ತಿರಲಿಲ್ಲ. ನಾವು ನಮ್ಮ ಕೆಲಸವನ್ನೇ ಮಾಡಿಕೊಂಡು ಇರಬಹುದಲ್ಲ ನೆಂಟರನ್ನು ಕರೆಯುವುದೇಕೆ? ಅವರು ಬಂದರೆ ತೊಂದರೆ ಆಯಿತು ಅಂದುಕೊಳ್ಳುವುದು ಏಕೆ?

ನೆರೆಯ ಪಟ್ಟಣದಲ್ಲಿ ಸ್ನೇಹಿತರೊಬ್ಬರು ಒಂದು ಶುಭ ಸಮಾರಂಭಕ್ಕೆ ಆಹ್ವಾನಿಸಿದ್ದರು. ನಾವೂ ಹೋಗಿದ್ದೆವು. ಅದೇ ಸಮಾರಂಭಕ್ಕೆ ನಮ್ಮ ಊರಿನ ಸ್ನೇಹಿತರು, ಅದೇ ಪಟ್ಟಣದಲ್ಲಿ ನೆಲೆಸಿರುವ ಒಂದು ಕುಟುಂಬ, ಬಂದಿದ್ದರು. ಸಮಾರಂಭ ಮುಗಿದ ಮೇಲೆ ಅವರು ನಮ್ಮ ಮನೆಗೆ ಬನ್ನಿ ಎಂದು ಕರೆದರು, 'ಇಲ್ಲಿ ನಾವು ಬೇರೆ ಇನ್ನೊಂದು ಸಮಾರಂಭಕ್ಕೆ ಹೋಗಬೇಕಿದೆ, ಇನ್ನೊಮ್ಮೆ ಬರ್ತೀವಿ' ಅಂದರೂ ಒತ್ತಾಯ ಪೂರ್ವಕವಾಗಿ ಬನ್ನಿ ಬನ್ನಿ ಎಂದು ಕರೆದುಕೊಂಡು ಹೋದರು. ಸ್ವಲ್ಪ ಹೊತ್ತು ಮಾತನಾಡಿಕೊಂಡಿದ್ದು, 'ಇರಿ ತಿನ್ನಕ್ಕೆ ಏನಾರೂ ಕೊಡ್ತೀನಿ' ಅಂದರು ಮನೆಯಾಕೆ. 'ಏನೂ ಬೇಡ ಈಗತಾನೇ ಫಂಕ್ಷನ್‌ನಲ್ಲಿ ಊಟ ಮಾಡಿದೆವಲ್ಲಾ' ಅಂದೆವು. 'ಅಯ್ಯೋ, ಇರಿ ಒಂಚೂರು ಚುರುಮುರಿ ಕೊಡ್ತೀನಿ'. ಅಂದ್ರು. ಅಡುಗೆಮನೆಗೆ ಹೋಗಿ ಸ್ವಲ್ಪ ಹೊತ್ತಿನ ನಂತರ ಹೊರಬಂದು, 'ಅಯ್ಯೋ.. ಚುರುಮುರಿ ಖಾಲಿಯಾಗಿದೆ' ಅಂತ ರೂಮಿನಲ್ಲಿ ಓದುತ್ತಿದ್ದ ಮಗಳನ್ನು ಕರೆದು, 'ಬಾರೆ ಅಂಗಡಿಗೆ ಹೋಗಿ ಚುರುಮುರಿ ತೊಗೊಂಡು ಬಾ' ಅಂದಳು ಮನೆಯಾಕೆ. ಅವಳು 'ಹೋಗಮ್ಮಾ ನಾನು ಓದ್ಕೋಬೇಕು' ಅಂದಳು. ಅಯ್ಯೋ ಕಾಫೀನಾದ್ರೂ ಮಾಡ್ತೀನಿ ಎಂದು ಒಳಹೋದವ್ರು ಮತ್ತೇ ಮಗಳನ್ನು 'ಕಾಫಿಪುಡಿ ಆಗ್ಹೋಗಿದೆ, ಅಂಗಡಿಗೆ ಹೋಗಿ ತೊಗೊಂಡು ಬಾರೇ. ಅಂತ ಕೂಗು ಹಾಕಿದರು. ಅವಳು ಗೊಣಗುತ್ತಾ ಅಂಗಡಿಗೆ ಹೋಗಿ ಕಾಫೀ ಪುಡಿ ತಂದಳು. ಕಾಫಿ ಮಾಡಿಕೊಟ್ಟ ಮನೆಯಾಕೆ ನಾವು ಹೊರಡಲು ಅನುವಾಗುತ್ತಿದ್ದಂತೆ 'ಕುಂಕುಮ ಕೊಡ್ತೀನಿ, ಇರಿ' ಅಂದರು. ಮತ್ತೇ ಮಗಳನ್ನು ಕರೆದು 'ಅಂಗಡಿಗೆ ಹೋಗಿ ಎಲೆ ಅಡಿಕೆ ತಗೊಂಡು ಬಾರೇ, ಆಂಟೀ ಗೆ ಕುಂಕುಮ ಕೊಡೋಣ' ಅಂದರು. ಅವಳು ರೂಮಿನಿಂದ ಹೊರಗೆ ಬರಲೇ ಇಲ್ಲ. ಆಗ ಆಕೆ, 'ಮೇಡಂ ಏನೂ ಅಂದುಕೋಬೇಡಿ, ಎಲೆ ಅಡಿಕೆ ಇಲ್ಲ. ಬರೀ ಕುಂಕುಮ ಕೊಡ್ತೀನಿ' ಅಂತ ಕೊಟ್ಟರು.

ನನಗೇನೂ ತಾಂಬೂಲ ಬೇಕಿಲ್ಲ. ಆದರೆ ಯಾರನ್ನಾದರೂ ಮನೆಗೆ ಕರೆಯುವಾಗ ಮನೆಯಲ್ಲಿ ಏನಿದೆ ಏನಿಲ್ಲ ಎಂದು ಮೊದಲೇ ತೆಗೆದಿರಿಸಿ ಸಿದ್ಧಮಾಡಿಕೊಳ್ಳುವುದು ಸಂಸ್ಕಾರ. ಅಕಸ್ಮಾತ್ ದಿಢೀರ್ ನೆಂಟರು ಬಂದಾಗ ಅದಿಲ್ಲ ಇದಿಲ್ಲ ಅಂತ ಬಂದವರ ಗಮನಕ್ಕೆಬಾರದಂತೆ ತರುವುದು, ತರಿಸಿಕೊಳ್ಳುವುದು ಗೃಹಿಣಿಯ ಜಾಣ್ಮೆ. ಹಾಗಿಲ್ಲದಿದ್ದಾಗ ಮನೆಗೆ ಅತಿಥಿಗಳನ್ನು ಕರೆಯಲೇಬಾರದು.

***

ಕಿರಿದೇವರಿಗೆ ಮರದ ಜಾಗಟೆ

– ಮಹಾಬಲ

ನೋಡಯ್ಯ, ನಾವು ಸಮಾರಂಭಕ್ಕೆ ಕರೆದಿದ್ದ ಹಿರಿಯ ಸಾಹಿತಿಗಳು ಖಾಯಿಲೆಯಿಂದ ಆಸ್ಪತ್ರೆ ಸೇರಿದ್ದಾರೆ. ಅವರ ಬದಲಿಗೆ ನೀನೂ ಅಷ್ಟಿಷ್ಟು ಸಾಹಿತ್ಯ ಸೇವೆ ಮಾಡಿದ್ದೀಯಾ ಅಂತ ನಿನ್ನ ಕರೆಯುತ್ತಿದ್ದೇನೆ. ನಿನ್ನ ಕೆಲಸ ಕುರ್ಚಿ ತುಂಬೋದು ಅಷ್ಟೆ. ಅವತ್ತಿನ ಸಮಾರಂಭದ ಕೇಂದ್ರಬಿಂದು ಹಾಸ್ಯ ರತ್ನಾಕರ ವಿನೋದಯ್ಯನವರು......."

ಕಂಠಿ ಇನ್ನೂ ಹೇಳುವುದು ಬಾಕಿ ಇತ್ತೇನೋ. ನಾನು ತಡೆದು, "ಆಯ್ತಪ್ಪ, ನಿನ್ನ ಸ್ನೇಹದ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಬರುತ್ತೇನೆ. ನಿನ್ನ ಮರ್ಯಾದೆ ಮುಖ್ಯ'' ಎಂದೆ.

"ಅಷ್ಟೇ ಅಲ್ಲಯ್ಯ, ಇನ್ನೂ ಕೆಲವು ಸೂಚನೆಗಳು ಇವೆ. ನೀನು ಮೊದಲು ಮಾತಾಡುತ್ತೀಯ. ನಮ್ಮ ಅಧ್ಯಕ್ಷರು ಸುಮ್ಮನೆ ಕೂತಿರ್ತಾರೆ. ಉತ್ಸವಮೂರ್ತಿ ಥರಾ. ನೀನು ಮೈಕ್ ಸಿಕ್ಕಿದ್ದೇ ಸಾಕು ಅಂತ ಕನ್ನಡ ಸಾಹಿತ್ಯ ಚರಿತ್ರೆಯ ರೀಲ್ ಬಿಚ್ಚಬೇಡ. ಜನ ಮೊದಲ ಚಪ್ಪಾಳೆ ಬಡಿದ ಕೂಡಲೇ ನಿಲ್ಲಿಸಿಬಿಡಬೇಕು ಮಾತು."

"ಸರಿ" ಎಂದೆ ವಿಧಿ ಇಲ್ಲದೆ.

"ಆಮೇಲೆ ಸಭಾಂಗಣಕ್ಕೆ ನೀನೇ ನೇರ ಬಂದುಬಿಡು. ಕರಕೊಂಡು ಹೋಗಕ್ಕೆ ಯಾರೂ ಬರಲ್ಲ. ಮತ್ತೆ ಆಹ್ವಾನ ವಾಟ್ಸಾಪ್ಪಿನಲ್ಲಿ ಬರತ್ತೆ.." ಎಂದು ಕಂಠೀ ಕೊನೆಯ ಮಾತುಗಳನ್ನು ಆಡಿ ನಿರ್ಗಮಿಸಿದ.

ಕಾರ್ಯಕ್ರಮದ ದಿನ ಬಂದೇ ಬಂದಿತು. ಅವನ ಫರ್ಮಾನಿನಂತೆ ಸಮಾರಂಭ ನಡೆಯುವ ಭದ್ರಣ್ಣ ಸಭಾಂಗಣಕ್ಕೆ ಅರ್ಧಗಂಟೆ ಮುಂಚೆಯೇ ತಲುಪಿದೆ. ಸಿದ್ಧತೆಗಳು ಇನ್ನೂ ನಡೆಯುತ್ತಿತ್ತು. ಒಳಗೆ ಹೊರಡಲು ಉಪಕ್ರಮಿಸಿದೆ.

''ನಿಲ್ಲಿ, ಸಮಾರಂಭದ ಕೇಂದ್ರಬಿಂದು ವಿನೋದಯ್ಯನವರು ಬರೋತನಕ ಯಾರಿಗೂ ಪ್ರವೇಶವಿಲ್ಲ ಅಂತ ಕಂಠಪ್ಪನವರು ಹೇಳಿದ್ದಾರೆ. ನೆಲ ಗುಡಿಸಿರೋ ಕಡೆ ನಿಂತುಕೊಳ್ಳಿ'' ಎಂದು ತುಸು ಗಟ್ಟಿದನಿಯಲ್ಲೇ ತಿಳಿಸಿದ ಪರಿಚಾರಕ.

''ನಾನೂ ಒಬ್ಬ ಅತಿಥಿ'' ಎನ್ನುತ್ತಾ ಸ್ವಲ್ಪ ವಿನಾಯಿತಿ ಪಡೆದುಕೊಳ್ಳಲು ಯತ್ನಿಸಿದೆ.

''ಯಾರಾದ್ರೂ ಅಷ್ಟೆ.'' ಎಂದ ಆತ ಸಾಕ್ಷಾತ್ ಶಿವನನ್ನು ತಡೆದ ಗಣಪತಿಯಂತೆ.

ಅಲ್ಲೇ ನಿಂತೆ. ಕಂಠಿ ಬಂದ. ನಾನು ಬಂದದ್ದನ್ನು ಯಾಂತ್ರಿಕವಾಗಿ ಗುರುತಿಸಿದ. ಅಲ್ಲೇ ಇರಲು ಕೈಸನ್ನೆ ಮಾಡಿದ. ಅವನ ಪಂಚೇಂದ್ರಿಯಗಳೆಲ್ಲ ಬರಲಿರುವ ವಿನೋದಯ್ಯನವರ ಕಾರಿನತ್ತಲೇ ಇತ್ತು.

ಬಂದವರೆಲ್ಲ ಯಥಾಪ್ರಕಾರ ಹೊರಗೇ ನಿಂತರು.

ಸ್ವಲ್ಪ ಹೊತ್ತಿನಲ್ಲಿ ಧೂಳೆಬ್ಬಿಸುತ್ತ ವಿನೋದಯ್ಯನವರಿದ್ದ ಕಾರು ಸಭಾಂಗಣದತ್ತ ನುಗ್ಗಿತು. ಕಂಠಿ ಲಗುಬಗೆಯಿಂದ ಅತ್ತ ನುಗ್ಗಿ ಕಾರಿನ ಬಾಗಿಲ ಹ್ಯಾಂಡಲ್ ಹಿಡಿದ. ತನ್ನ ಮೊಬೈಲ್ ಆಪ್ತನೊಬ್ಬನಿಗೆ ಕೊಟ್ಟು ಸ್ವಾಗತ ಕ್ಷಣದ ಫೋಟೋ ತೆಗೆಯಲು ಇಷಾರೆ ಮಾಡಿದ.

ವಿನೋದಯ್ಯನವರು ಇಳಿದು ಸುತ್ತ ನೋಡಿದರು. ಅವರಿಗೆ ಹಸ್ತಲಾಘವ ನೀಡಿದ ಕಂಠಿ ನನ್ನನ್ನು ಕರೆದ. ಹೋದಾಗ, ''ಸಾರ್, ಇವನೂ (?) ಒಬ್ಬ ಸಾಹಿತಿ. ಆಸ್ಪತ್ರೆ ಸೇರೀರೋ ಶೇಷಪ್ಪನವರ ಬದಲಿ ಬಂದಿರೋದು'' ಎಂದು ಪರಿಚಯಿಸಿದ.

ವಿನೋದಯ್ಯನವರು ''ಅಯ್ಯೋ ಪಾಪ'' ಎಂದರು. ಈ ಉದ್ಗಾರ ಶೇಷಪ್ಪನವರಿಗೋ ಅಥವಾ ನನಗೋ ಒಂದೂ ಅರ್ಥವಾಗಲಿಲ್ಲ.

ಕಂಠಿ ತನ್ನ ಪಟಾಲಂಗೆ ಸನ್ನೆ ಮಾಡಿದ. ತಕ್ಷಣ ವಿನೋದಯ್ಯನವರ ಎಡಬಲಕ್ಕೆ ಬಾವುಟ ಹಿಡಿದ ಇಬ್ಬರು ಬಂದರು. ಆರತಿ ತಟ್ಟೆ ಹಿಡಿದ ನಾರೀಗಣ. ಬಂದವರೆಲ್ಲ ಅವರ ಹಿಂದೆ ಸಾಗಿದರು. ನನಗೂ ಈ ಗುಂಪಿನಲ್ಲಿ ಸೇರಲು ಸಂಜ್ಞೆ ಮಾಡಿದ ಕಂಠಿ.

ಜೈಕಾರ ಹಾಕುತ್ತಲೇ ಮೆರವಣಿಗೆ ವೇದಿಕೆಯವರೆಗೂ ತಲುಪಿತು.ವಿ ನೋದಯ್ಯನವರನ್ನು ಮುಗಿಲು ಮುಟ್ಟುವ ಚಪ್ಪಾಳೆ ಯೊಂದಿಗೆ ವೇದಿಕೆಗೆ ಸ್ವಾಗತಿಸಲಾಯಿತು. ಎದ್ದು ನಿಂತು ಗೌರವ ಸಲ್ಲಿಸಲೂ ಮತ್ತೊಂದು ಆದೇಶ ಹೊರಬಂತು. ಪಾಪ ಈಗ ಸಭೆಯಲ್ಲಿದ್ದ ಮುದುಕರು, ಮಂಡಿನೋವಿನವರು, ಕೈಲಾಗದವರು ಎಲ್ಲ ಕಷ್ಟಪಟ್ಟು ಎದ್ದು ಕೂತರು.

ನನ್ನನ್ನೂ ಈಗ ವೇದಿಕೆಗೆ ಕರೆದು, ''ಮಾನ್ಯರೆ, ಒಂದು ಅಚಾತುರ್ಯ ನಡೆದುಹೋಗಿದೆ. ಇಂದು ಬರಬೇಕಿದ್ದ ಕಾವ್ಯಚತುರ ಶೇಷಪ್ಪನವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ. ಅವರ ಬದಲು ಸಾಹಿತ್ಯದಲ್ಲಿ ಅಷ್ಟಿಷ್ಟು ಸೇವೆ ಸಲ್ಲಿಸಲು ಯತ್ನಿಸುತ್ತಿರುವ ನನ್ನ ಮಿತ್ರ ಚಂದ್ರಪ್ಪ ಬಂದಿದ್ದಾರೆ. ಅವರೂ ಸ್ಥಾನ ಅಲಂಕರಿಸಬೇಕು'' ಎಂದ ಕಂಠಿ.

ಯಾವುದು ಅಚಾತುರ್ಯ? ಅವರು ಆಸ್ಪತ್ರೆ ಸೇರಿದ್ದೋ ಅಥವಾ ನಾನು ಬಂದದ್ದೋ? ಒಂದೂ ಅರ್ಥವಾಗಲಿಲ್ಲ. ಸುಮ್ಮನೆ ಹೋಗಿ ಕೂತೆ.

ಪ್ರಾರ್ಥನೆ, ನಾಡಗೀತೆ, ಸ್ವಾಗತ, ಪ್ರಹಸನ ಅಲ್ಲಲ್ಲ ಭಾಷಣ ಎಲ್ಲ ಮುಗಿದವು. ಕಂಠಿ ''ಈಗ ಕವಿ ಚಂದ್ರಪ್ಪನವರಿಂದ ಎರಡು ನಿಮಿಷ ಭಾಷಣ'' ಎಂದು ಘೋಷಿಸಿದ.

ಸಮಯದ ಗಡುವು ವಿಧಿಸಿದ ಮೇಲೆ ಇನ್ನೇನು ಆಯ್ಕೆ? ನಾನು ಎದ್ದು, ''ಕರೆದಿದ್ದಕ್ಕೆ ವಂದನೆ. ನಿಮ್ಮ ಹಾಗೂ ವಿನೋದಯ್ಯನವರ ಹಾಸ್ಯಭಾಷಣದ ನಡುವೆ ಚೀನಾದ ಮಹಾಗೋಡೆಯಂತೆ ನಿಲ್ಲಲು ನನಗೆ ಇಷ್ಟವಿಲ್ಲ. ಅವರು ಹೊಸದೇನಾದರೂ ಹಾಸ್ಯವಿಚಾರ ಮಾತನಾಡಬಹುದು ಎಂಬ ಕುತೂಹಲ ಹಾಗೂ ನಿರೀಕ್ಷೆಯಿಂದ ನನ್ನ ಮಾತಿಗೆ ವಿರಾಮ ನೀಡುತ್ತೇನೆ'' ಎಂದು ಕೂತೆ. ಚಪ್ಪಾಳೆಯ ಸದ್ದು ಸಭಾಂಗಣದ ತಾರಸಿ ಸೀಳುವಂತಿತ್ತು .

ನನ್ನ ಮಾತು ಕೇಳಿ ಪಾಪ ಗೊಂದಲಕ್ಕೆ ಬಿದ್ದವರಂತೆ ಕಂಡ ವಿನೋದಯ್ಯನವರು ಮಾತು ಆರಂಭಿಸಿದರು. ಬಹುಪಾಲು ಪುನರುಕ್ತಿಗಳೇ ಇದ್ದವು. ಜನ ಬಿದ್ದು ಬಿದ್ದು ನಕ್ಕರು (ಕುಳಿತೇ ನಗಬಹುದಿತ್ತು ಅನ್ನಿ.) ಜೋಕು ಹಳೆದಾದರೇನು ಪ್ರೇಕ್ಷಕ ನವನವೀನ ಎಂದುಕೊಂಡೆ.

ಅವರ ಮಾತು ಮುಗಿದೊಡನೆ ''ಈಗ ಬಹುಮಾನ ವಿತರಣೆ ವಿನೋದಯ್ಯನವರಿಂದ'' ಎಂಬ ಘೋಷಣೆ ಮೊಳಗಿತು. ಕೊಟ್ಟು ಕೊಟ್ಟು ಕೈ ನೋಯಿಸಿಕೊಂಡ ವಿನೋದಯ್ಯನವರು ನನಗೂ ಒಂದಿಷ್ಟು ಜನರಿಗೆ ವಿತರಿಸಲು ಕೋರಿಕೊಂಡರು. ನನ್ನಿಂದ ಬಹುಮಾನ ಪಡೆದು ನಿರಾಶರಾದವರು ಮತ್ತೆ ವಿನೋದಯ್ಯನವರ ಬಳಿ ಹೋಗಿ ಕೈಕುಲುಕಿ ಅವರ ಕೈನೋವು ಹೆಚ್ಚಾಗುವಂತೆ ನೋಡಿಕೊಂಡರು.

ನಂತರದ ಕಲಾಪವಾಗಿ ವಿನೋದಯ್ಯನವರಿಗೆ ಭರ್ಜರಿ ಸನ್ಮಾನ ನಡೆದು ಹೋಯಿತು. ಪರಿಚಾರಕ ಬಂದು ಕಂಠಿಯ ಕಿವಿಯಲ್ಲಿ ‘‘ಹಾರ ಒಂದೇ ಈಗ ಉಳಿದಿರೋದು’’ ಎಂದು ಉಸುರಿದುದು ನನಗೂ ಹೇಗೋ ಕೇಳಿಸಿಯೇಬಿಟ್ಟಿತು.

‘‘ಅದನ್ನೇ ತಾ ಇಲ್ಲಿ’’ ಅಂದ ಕಂಠಿ.

ಈಗ ನನ್ನ ಸರದಿ. ಕಂಠಿ ಏರುದನಿಯಲ್ಲಿ ‘‘ನನ್ನ ಮಿತ್ರರಾದ ಚಂದ್ರಪ್ಪನವರು ತಾವು ಯಾವುದೇ ಸನ್ಮಾನಕ್ಕೂ ಕೊರಳೊಡ್ಡುವುದಿಲ್ಲವೆಂದೇ ಶರತ್ತು ಹಾಕಿ ಈ ಸಮಾರಂಭಕ್ಕೆ ಬಂದಿದ್ದಾರೆ. ಆದರೂ ನಮ್ಮ ಕಿಂಚಿತ್ ಪ್ರೀತಿಯ ದ್ಯೋತಕವಾಗಿ ಈ ಹಾರ ಸಮರ್ಪಿಸುತ್ತಿದ್ದೇವೆ’’ ಎನ್ನುತ್ತಾ ಹಾರ ಹಾಕಿದ. ಯಥಾಪ್ರಕಾರ ಕರತಾಡನ.

ಅಷ್ಟಕ್ಕೂ ಗಾದೇನೇ ಇಲ್ಲವೆ ‘‘ಕಿರಿ ದೇವರಿಗೆ ಮರದ ಜಾಗಟೆ‘‘ ಅಂತ.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 243

ಅಧ್ಯಕ್ಷರ ಅನಿಸಿಕೆಗಳು



ನಾಗರತ್ನ ಚಂದ್ರಶೇಖರ್

ಎಲ್ಲರಿಗೂ ಶರಣು ಶರಣಾರ್ಥಿ. 243ನೇ ಸಾಹಿತ್ಯ ದಾಸೋಹಕ್ಕೆ ಅಧ್ಯಕ್ಷತೆ ವಹಿಸಲು ನನಗೆ ಕರೆ ಮಾಡಿ ಕೇಳಿದಾಗ ಹಿಂದಿನಂತೆ ತಪ್ಪಿಸಿಕೊಳ್ಳಲು ಕಾರಣಗಳು ಸಿಗಲಿಲ್ಲ. ಸ ಸ.ಕ.ಸ. ವೇದಿಕೆ ಎಂದರೆ ಒಂದು ಅನುಭವ ಮಂಟಪವಿದ್ದಂತೆ. ಈ ಮಹಾ ಮನೆಗೆ ಪ್ರವೇಶ ಎಲ್ಲರಿಗೂ ಉಚಿತ. ಆದರೆ ಕುರ್ಚಿ ಸಿಗುವುದು ಖಚಿತವಿಲ್ಲ. ಸಾಧಕರು, ಮೇರು ಸಾಹಿತಿಗಳು, ಪಂಡಿತರು ಅದಾಗಲೇ ಆಸೀನರಾಗಿದ್ದಾರೆ. ನಾವೆಲ್ಲ ಪ್ರೇಕ್ಷಕರ ಸಾಲಿನಲ್ಲಿ ನಿಂತವರು. ಹಾಗೂ ಹೀಗೂ ಒಂದು ಖಾಲಿ ಕುರ್ಚಿ ಸ್ವಲ್ಪ ಸಮಯಕ್ಕಾದರೂ ಸಿಕ್ಕಾಗ ಕೂರಬಹುದು ಎಂದು ಆಶಿಸುತ್ತಿದ್ದವಳು. ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಕಾಮನೆಗಳನ್ನು ತಿಳಿಸುತ್ತಾ ಇದುವರೆಗೂ ನೀವೆಲ್ಲ ಆಸಕ್ತಿಯಿಂದ ಆಲಿಸಿದ್ದ ಲೇಖನಗಳನ್ನು ನಾನು ನಿಮಗಿಂತ ಮುಂಚೆಯೇ ಓದಿ ಟಿಪ್ಪಣಿ ಮಾಡಿಕೊಂಡಿರುವೆ. ಅದನ್ನಷ್ಟೇ ನಿಮ್ಮ ಮುಂದಿಡುತ್ತಿರುವೆ. ನಿಜವಾಗಿ ಇದು ಆಧುನಿಕ ಅನುಭವ ಮಂಟಪವೇ ಸರಿ. ಕೂದಲಿನಿಂದ ಹಿಡಿದು ಕೀಲಿ ಕೈಯವರೆಗೆ ಎಂತೆಂಥ ಚಂದದ ಲೇಖನಗಳು. ಅಲ್ಲಮನೇನಾದರೂ ನಿಮ್ಮೆಲ್ಲರ ಪ್ರಸ್ತುತಿಗಳನ್ನು ಕೇಳಿದ್ದರೆ ಉಘೇ ಉಘೇ ಅನ್ನಬಹುದಿತ್ತು. "ನಾನೇನು ಮಾಡಲಯ್ಯ ಇವರೆಲ್ಲರ ಜ್ಞಾನದ ಮುಂದೆ. ನಾನು ಚಿಕ್ಕವಳು. ನಿಮ್ಮ ಮಾರ್ಗದರ್ಶನವನ್ನಷ್ಟೇ ಬೇಡುವವಳು" ಎಂದಷ್ಟೇ ಹೇಳುವೆ. ನಿಮ್ಮ ಲೇಖನಗಳನ್ನು ವಿಮರ್ಶೆ ಮಾಡುವಷ್ಟು ಧೈರ್ಯ ನಿಜಕ್ಕೂ ನನಗಿಲ್ಲ. ಹತ್ತಾರು ವರ್ಷಗಳಿಂದ ಸಾವಿರಾರು ಪ್ರಸ್ತುತಿಗಳನ್ನು ಈ ವೇದಿಕೆಯಲ್ಲಿ ಕೇಳುವ ಕಿವಿಯಾಗಿದ್ದೆ. ಅವುಗಳ ಪ್ರಭಾವ, ನಿಮ್ಮೆಲ್ಲರ ಒಡನಾಟ, ನಾನೂ ಬರೆಯಬಲ್ಲೆ ಎನ್ನುವ ಹಂತಕ್ಕೆ ತಲುಪಿಸಿತ್ತು. ಇಂಥ ಭಾಗ್ಯಕ್ಕಾಗಿ ನಾನು ಸದಾ ವೇದಿಕೆಗೆ ಚಿರಋಣಿ. ಇಂದು ಅಧ್ಯಕ್ಷತೆಯ ಕುರ್ಚಿಯಲ್ಲಿ ಕೂರಲು ಸಂಕೋಚವಾದರೂ ಸಿಕ್ಕ ಅವಕಾಶಕ್ಕಾಗಿ ಸಂತೋಷದಿಂದ ಸಂಚಾಲಕರಿಗೆ ವಂದಿಸುವೆ. ಈಗ ಪರಿಸ್ಥಿತಿಗಳ ಅವಲೋಕನದ ಸಾರಾಂಶ.

೧. ಬೆಂ.ಶ್ರೀ. ರವೀಂದ್ರ – 'ಬಿಡುಗಡೆಯ ಬಿಂಕ : ಒಪ್ಪಿಕೊಳ್ಳುವಿರಾ ಸವಾಲು'

ಲೇಖನ ಪೂರ್ತಿ ಓದುವ ಯಾರಿಗಾದರೂ ಹೀಗೂ ಉಂಟೆ ಎನಿಸಬಹುದು. ಆದರೆ ಹೀಗೂ ಉಂಟು ಎಂದು ಉದಾಹರಣೆಗಳ ಸಮೇತ ಸಾಬೀತು ಮಾಡಿದ್ದಾರೆ. ಪುಸ್ತಕ ಬಿಡುಗಡೆಯ ಚಿತ್ರ ವಿಚಿತ್ರ ವೈವಿಧ್ಯಮಯ ವೈಖರಿಗಳನ್ನು ರಸವತ್ತಾಗಿ ಒಂದೊಂದಾಗಿ ವಿವರಿಸಿರುವ ಈ ಲೇಖನ ಪುಸ್ತಕ ಬರೆದು ಬಿಡುಗಡೆಯ ಗಡಿಬಿಡಿಯಲ್ಲಿರುವವರಿಗೆ ಮಾರ್ಗದರ್ಶಿಯಾಗಿದೆ. ಪುಸ್ತಕ ಬರೆದು ಮುಗಿಸಿದಾಗಲೇ ಆಗಿರುವ ಸುಸ್ತು, ಕಷ್ಟಗಳಿಗೆಲ್ಲ ಅದರ ಬಿಡುಗಡೆಯ ಭಾಗ್ಯ ಮತ್ತಷ್ಟು ಕಷ್ಟದ ದಾರಿ ಎನಿಸಬಾರದಾದರೆ ನಮ್ಮ ವೇದಿಕೆಯನ್ನು ಸಂಪರ್ಕಿಸಿ ಎನ್ನಬಹುದು. ನೆನಪಿನಲ್ಲಿ ಉಳಿಯುವಂತೆ ಈಗಾಗಲೇ ಅನೇಕ ಪುಸ್ತಕಗಳನ್ನು ಬಿಡುಗಡೆ ಮಾಡಿರುವ ನಮ್ಮ ಹೆಡ್ ಮಾಸ್ಟರ್ ನಿಮಗೆ ಖಂಡಿತ ಉಚಿತ ಸಲಹೆ ಕೊಡುತ್ತಾರೆ ಎಂಬ ಭರವಸೆ ಇದೆ. ಪುಸ್ತಕ ಬರೆಯಲು, ಬಿಡುಗಡೆ ಮಾಡಲು ಈ ಲೇಖನ ಓದಿದ ಮೇಲೆ ಎಲ್ಲರಿಗೂ ಆಸೆಯಂತೂ ಆಗುತ್ತದೆ. ನನ್ನದೊಂದು ಪುಸ್ತಕ 'ಕಲಸು ಮೇಲೋಗರ' ಹಲವು ವರ್ಷಗಳ ಹಿಂದೆ ನಟ ಶ್ರೀನಾಥ್ ಅವರಿಂದ ಬಿಡುಗಡೆಯಾಗಿತ್ತು. ಅದನ್ನು ಒಂದು ದೊಡ್ಡ ಸ್ಟೀಲ್ ಡಬರಿಯಲ್ಲಿ ಇಟ್ಟು ಹೊತ್ತು ತರಲಾಗಿತ್ತು. ವೇದಿಕೆಯ ಮೇಲಿದ್ದವರ ಕೈಯಲ್ಲಿ ಒಂದೊಂದು ಸಣ್ಣ ಹೊಸ ತಟ್ಟೆಗಳನ್ನು ಕೊಡಲಾಗಿತ್ತು. ಎಲ್ಲರೂ ಡಬ್ಬಿಯಿಂದ ಏನೋ ತಿಂಡಿ ಬರಬಹುದು ಎಂದು ಕಾದಿದ್ದಾಗ ನಾನು ಒಂದೊಂದು ಪುಸ್ತಕವನ್ನು ತೆಗೆದು ಅವರ ತಟ್ಟೆಯೊಳಗಿಟ್ಟಿದ್ದೆ. ಎಲ್ಲೆಲ್ಲೂ ನಗುವೋ ನಗು.

೨. ಪೂರ್ಣಿಮ ಭಗವಾನ್– 'ಆಗುವುದೆಲ್ಲಾ ಒಳ್ಳೆಯದೇ'

'ಆಗುವುದೆಲ್ಲ ಒಳ್ಳೆಯದೇ' – ಈ ಲೇಖನದಲ್ಲಿ ಒಂದು ಕಥೆಯ ಮೂಲಕ ನೀತಿಯನ್ನು ತಿಳಿಯಬಹುದು. ಶಾಲೆಯಲ್ಲಿ ಕ್ರಿಕೆಟ್ ತಂಡಕ್ಕೆ ತಾನು ಆಯ್ಕೆಯಾಗಲಿಲ್ಲವೆಂದು ಪ್ರದ್ಯುಮ್ನ ಖಿನ್ನನಾಗಿರುವಾಗ ಅವನ ತಾಯಿ, ಮಗನಿಗೆ ದೃಷ್ಟಾಂತವೊಂದರ ಮುಖಾಂತರ ಸಮಾಧಾನ ಹೇಳುವುದು ಯಥೋಚಿತವೆನಿಸುತ್ತದೆ. ಈಗಿನ ಕಾಲದ ಮಕ್ಕಳು ಕೇಳಿದ ಕೂಡಲೇ ಇಷ್ಟಪಟ್ಟದ್ದು ಸುಲಭವಾಗಿ ಸಿಗದಿದ್ದರೆ ಹತಾಶರಾಗುತ್ತಾರೆ. ಕೆಲವೊಮ್ಮೆ ಕೈತಪ್ಪಿ ಹೋದ ಅವಕಾಶಗಳು ಮುಂದೊಂದು ದೊಡ್ಡದಾದ ಅವಕಾಶವನ್ನು ತರಬಹುದು. ಆಗ ಆಗಿದ್ದೆಲ್ಲಾ ಒಳ್ಳೆಯದಕ್ಕೆ ಎಂಬ ಸಮಾಧಾನ ಸಹಜ. ನಾನು ಚಿಕ್ಕವಳಾಗಿದ್ದಾಗ ಸುಮಾರು 60

ಶ್ರೀಮತಿ ನಾಗರತ್ನ ಚಂದ್ರಶೇಖರ್

ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ಶ್ರೀ ಶ್ರೀಕಂಠಯ್ಯ ಮತ್ತು ಶ್ರೀಮತಿ ನಂಜಮ್ಮಣ್ಣಿಯವರ ಪುತ್ರಿಯಾಗಿ ಜನಿಸಿದ್ದು ಕನಕಪುರದಲ್ಲಿ. ಅವರ ಪತಿ ಶ್ರೀ ಸಿ.ಎಂ. ಚಂದ್ರಶೇಖರ್, ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಉದ್ಯೋಗಿ.

ನಾಗರತ್ನ ಅವರಿಗೆ ಚಿಕ್ಕಂದಿನಿಂದಲೂ ಸಾಹಿತ್ಯಿಕ ಮತ್ತು ಸಾಮಾಜಿಕ ಚಟುವಟಿಕೆಯಲ್ಲಿ ಆಸಕ್ತಿ. ವಿದ್ಯಾರ್ಥಿ ದಿಸೆಯಲ್ಲಿಯೇ ಜನಪ್ರಿಯ ಪತ್ರಿಕೆಗಳಲ್ಲಿ ಇವರ ಲೇಖನ, ಕತೆಗಳು ಪ್ರಕಟ. ವರದಕ್ಷಿಣೆ, ವಿಧವಾ ವಿವಾಹ ವಿರೋಧೀ ಆಂದೋಲನಗಳಲ್ಲಿ ಭಾಗಿ. ಚೇತನಾ ಯುವತಿ ಮಂಡಳಿ ಎಂಬ ಸಾಮಾಜಿಕ ಸಂಘವನ್ನು ಹುಟ್ಟು ಹಾಕಿ ಅದರ ಸಂಸ್ಥಾಪಕ ಕಾರ್ಯದರ್ಶಿಯಾಗಿ ಸೇವೆ. ಬೆಂಗಳೂರಿನ ಆರ್.ವಿ.ಕಾಲೇಜಿನಿಂದ 'ಉತ್ತಮ ಸಮಾಜ ಸೇವಕಿ' ಎಂಬ ಗೌರವ.

ಅಧ್ಯಾಪಕರಾಗಿ ಇವರ ವೃತ್ತಿ ಜೀವನ ಆರಂಭ. ಮಂಗಳೂರಿನಲ್ಲಿ ಪತ್ರಿಕೋದ್ಯಮದಲ್ಲಿ ತರಬೇತಿ ಪಡೆದು ಐದು ವರ್ಷಗಳ ಕಾಲ ವಿವಿಧ ಪತ್ರಿಕೆಗಳಲ್ಲಿ ವರದಿಗಾರ್ತಿಯಾಗಿ, ಉಪಸಂಪಾದಕಿಯಾಗಿ ಕಾರ್ಯನಿರ್ವಹಣೆ. ಮದರ್ ತೆರೆಸಾ ಅವರಿಂದ ಪ್ರಮಾಣಪತ್ರ ಸ್ವೀಕರಿಸಿದ ಹೆಮ್ಮೆ. ಜಿಲ್ಲಾ ಗ್ರಾಹಕರ ವೇದಿಕೆ ಸದಸ್ಯರಾಗಿ ಹಾಗೂ ಮಂಗಳೂರಿನ ಕರಾವಳಿ ಲೇಖಕಿಯರ, ವಾಚಕರ ಸಂಘದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು, ಕಳೆದ ಮೂರು ವರ್ಷಗಳಿಂದ ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿ. ಹಿರಿಯ ನಾಗರಿಕರ ಸಂಘದ ಉಪಾಧ್ಯಕ್ಷೆ. ನಗೆಗಾರರ ಕೂಟದ (Laughters Club) ಸದಸ್ಯೆಯಾಗಿ ನಗುನಗುತಾ ಬಾಳುವುದನ್ನು ರೂಢಿಸಿಕೊಂಡಿದ್ದು, ಸಾಕಷ್ಟು ಸಂಖ್ಯೆಯ ನಗೆಲೇಖನಗಳನ್ನೂ ಬರೆದಿದ್ದಾರೆ.

ಶ್ರೀಮತಿ ನಾಗರತ್ನ ಚಂದ್ರಶೇಖರ್ ಇದುವರೆಗೆ ಪ್ರಕಟಿಸಿರುವ ಕೃತಿಗಳ ಸಂಖ್ಯೆ 14. ಆ ಪೈಕಿ ಮೊದಲನೆಯ ಕವನ ಸಂಕಲನ 'ಚಿಟ್ಟೆ ಬಿಟ್ಟೆ', ನಂತರ ಪ್ರಕಟವಾದ ತಳಿರುತೋರಣ, ಅಂತರಂಗದ ಅಲೆಗಳು, ಕಲಸುಮೇಲೋಗರ, ದ್ರೌಪದಿಯ ತಾಪತ್ರಯಗಳು, ಗಣಿತಲೋಕದ ತಾರೆ ರಾಮಾನುಜಂ, ಹೆಜ್ಜೆ ಗುರುತುಗಳು ಮುಖ್ಯವಾದುವು. ಇವರ 'ಕಪ್ಪು ಕಸ್ತೂರಿಯೇ' ಲಲಿತ ಪ್ರಬಂಧ ಮಂಗಳೂರು ವಿಶ್ವವಿದ್ಯಾಲಯದ ಎರಡನೇ ಪದವಿಗೆ ಪಠ್ಯಪುಸ್ತಕವಾಗಿದೆ. ಇವರ ಸಂದರ್ಶನಗಳು ಬಾನುಲಿ ಮತ್ತು ದೂರದರ್ಶನದಲ್ಲೂ ಪ್ರಸಾರವಾಗಿವೆ.

ವಿದೇಶೀ ನೆಲದ ಸಾಂಸ್ಕೃತಿಕ ಸಂಘಗಳಲ್ಲೂ ತಮ್ಮ ಛಾಪು ಮೂಡಿಸಿರುವ ಶ್ರೀಮತಿ ನಾಗರತ್ನ ಅವರು ಅಮೆರಿಕಾದ ನಾವಿಕ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 'ಕುಟುಂಬ ಅಂದು ಇಂದು' ಎಂಬ ಪ್ರಬಂಧ ಮಂಡಿಸಿರುವರಲ್ಲದೆ, ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್‌ನಲ್ಲಿ ನಡೆದ ಕವಿಗೋಷ್ಠಿಯಲ್ಲಿ ತಮ್ಮ ಕವನ ವಾಚಿಸಿ 'ವುಮೆನ್ ಆಫ್ ಹೋಪ್' ಎಂಬ ಪ್ರಮಾಣಪತ್ರಕ್ಕೆ ಭಾಜನರಾಗಿದ್ದಾರೆ. ಇವರಿಗೆ ಸಂದ ಪುರಸ್ಕಾರಗಳು ಹಲವಾರು. ಮುಂಬೈ ಕನ್ನಡ ಸಂಘದ ಯು.ಆರ್. ಅನಂತಮೂರ್ತಿ ಪ್ರಶಸ್ತಿ, ಬುದ್ಧ ಬಸವ ಗಾಂಧಿ ಟ್ರಸ್ಟ್‌ನಿಂದ ಬಹುಮಾನ, ಅಂತಾರಾಷ್ಟ್ರೀಯ ಮಹಿಳಾ ವರ್ಷದ ಪುರಸ್ಕಾರ, ಪ್ರಜಾವಾಣಿ ಸಂಕ್ರಾಂತಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಇವುಗಳು ಮುಖ್ಯವಾದುವು.

ಹೀಗೆ ಬಹುಮುಖ ಚಟುವಟಿಕೆಯ ಶ್ರೀಮತಿ ನಾಗರತ್ನ ಚಂದ್ರಶೇಖರ್ ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಹಿರಿಯ ಸದಸ್ಯೆ. ಹಲವಾರು ದಾಸೋಹಗಳಲ್ಲಿ ಭಾಗವಹಿಸಿ ತಮ್ಮ ವಿವಿಧ ಬಗೆಯ ಬರಹಗಳನ್ನು ಪ್ರಸ್ತುತಪಡಿಸಿರುವ ಇವರು 243ನೆಯ ದಾಸೋಹದ ಅಧ್ಯಕ್ಷತೆವಹಿಸಿ ಎಲ್ಲರ ಪ್ರಸ್ತುತಿಗಳನ್ನು ವಿಶ್ಲೇಷಿಸುತ್ತಿರುವುದು ಹೆಮ್ಮೆಯ ಸಂಗತಿ.

ವರ್ಷದ ಹಿಂದೆ ಕೈಗಡಿಯಾರ ಕಟ್ಟಿಕೊಳ್ಳುವುದು ಎಂದರೆ ಒಂದು ದುಬಾರಿ ಸಂಗತಿ. ಪದವಿ ಪರೀಕ್ಷೆಯನ್ನು ಅಪ್ಪನ ಕೈಗಡಿಯಾರ ಕಟ್ಟಿಕೊಂಡೇ ಬರೆದದ್ದು. ಒಂದು ಹೆಚ್.ಎಂ.ಟಿ ಕೈಗಡಿಯಾರ ನನ್ನ ಪತಿಯಿಂದ ವಿವಾಹವಾದ ಮೇಲೆ ಸಿಕ್ಕಿದ್ದು. ಅಷ್ಟು ತಾಳ್ಮೆ, ಸಹನೆ, ಈಗಿನ ಮಕ್ಕಳಿಗೆ ಇದೆಯೆ ಎಂಬ ಪ್ರಶ್ನೆಗೆ ಉತ್ತರ ನಿಮಗೇ ಗೊತ್ತು.

೩. ಸ್ನೇಹಾ ಶಶಿಧರ – 'ಒಂದು ಚಿಟಿಕೆ ಸಿಂಧೂರ'

ಆಪರೇಷನ್ ಸಿಂಧೂರ ಧೂಳೆಬ್ಬಿಸಿ ಪಾಕಿಸ್ತಾನ ಪಾಠ ಕಲಿತ ವಿಚಾರ ಭಾರತೀಯರಿಗೆ ಯಾವತ್ತಿಗೂ ಮರೆಯಲಾಗದ ಘಟನೆ. ಸ್ನೇಹ ಶಶಿಧರ್ ಅವರ ಲೇಖನ ಒಂದು ಚಿಟಿಕೆ ಸಿಂಧೂರವೂ ಕೂಡ ವಿದ್ಯಾಸಾಗರ ದೇಶಪಾಂಡೆಯವರಿಗೆ ಜೀವನದ ಪಾಠ ಕಲಿಸಿದ ವಿವರ ಇಲ್ಲಿದೆ. ಅವರ ಹೋಟೆಲಿನ ಸ್ವಚ್ಛತೆ ಅಂತಾರಾಷ್ಟ್ರೀಯ ಮೌಲ್ಯಮಾಪನಕ್ಕೆ ಒಡ್ಡಿಕೊಂಡಾಗ ಕನ್ನಡಿಯ ಮೂಲೆಯಲ್ಲಿ ಅಂಟಿಸಿದ ಒಂದು ಚಿಕ್ಕ ಸಿಂಧೂರದ ಬೊಟ್ಟು ಅರ್ಹತೆಯ ಪಟ್ಟಿಯಿಂದ ಹೊರಗುಳಿಯಿತು ಎನ್ನುವ ಒಂದು ಹೊಸ ದಿಕ್ಕಿನ ನೋಟವಿದೆ ಇಲ್ಲಿ. ಹಣೆಯಲ್ಲಿ ಅದೇ ಒಂದು ಬೊಟ್ಟು ಸಿಂಗಾರವಿಲ್ಲದಿದ್ದರೆ ವಿವಾಹಿತ ಮಹಿಳೆ ಸಮಾಜದಿಂದ ಸಾವಿರ ಮಾತು ಕೇಳಬೇಕಾಗಬಹುದು. ಒಂದು ಸಾಮಾನ್ಯ ವಿಚಾರವೆಂದರೆ ಬಹುತೇಕ ಎಲ್ಲರ ಮನೆಯ ಕನ್ನಡಿಯಲ್ಲಿ ಒಂದಲ್ಲ, ಒಂದಕ್ಕಿಂತ ಜಾಸ್ತಿ ಹಣೆಬೊಟ್ಟಿನ ಅಲಂಕಾರ ಇದ್ದೇ ಇರುತ್ತದೆ. ಬೇಕಾದರೆ ಪರೀಕ್ಷಿಸಿ ನೋಡಿ.

೪. ಸಿಂಧು ಹರಿತಸ್ – 'ಗಂಗೆ-ಕಾವೇರಿ'

ಗಂಗಾ ಕಾವೇರಿಯರ ಉಗಮದ ಕುತೂಹಲಕಾರಿಯಾದ ಈ ಕಥೆ ಕೇಳಿದರೆ ಇದು ಕತೆ ಅಲ್ಲ, ನಿತ್ಯ ಸತ್ಯದ ಸಂಗತಿ ಎನಿಸುವುದು. ಗಂಗೆ ಗೌರಿಯರ ಬಗ್ಗೆ ಮಾತ್ರ ಗೊತ್ತಿರುವ ನಮಗೆ ಗಂಗೆ ಮತ್ತು ಕಾವೇರಿಯರ ನಡುವಿನ ಒಂದು ಸುಮಧುರ ಸಂಬಂಧಕ್ಕೆ ಕಾರಣನಾದ ಚಂದ್ರ, ಇವರನ್ನು ಕುರಿತ ಲೇಖನದಲ್ಲಿ ಸಿಂಧೂ ಹರಿತಸ್ ಅವರ ಕಲ್ಪನೆ ಮನೋಜ್ಞವಾಗಿದೆ. ಮೊದಲಿಗೆ ಗಂಗೆಯು ಕಾವೇರಿಯ ಬಗ್ಗೆ ತಾಳುವ ಮಾತ್ಸರ್ಯ, ಒಣ ಹೆಮ್ಮೆಯಿಂದ ತಾನೇ ಶ್ರೇಷ್ಠ ಎಂಬ ವಾದ ಎಷ್ಟು ಸಹಜವಾಗಿದೆ ಎಂದರೆ ಸಾಮಾನ್ಯವಾಗಿ ಹಲವು ಹೆಣ್ಣುಮಕ್ಕಳು ಈ ಒಣಜಂಬದಿಂದಲೇ ನೋವಿಗಿಡಾಗುತ್ತಾರೆ. ಸತ್ಯದರ್ಶನ ಮಾಡಿಸಲು ಎಲ್ಲರಿಗೂ ಚಂದ್ರ ಬರಬೇಕು ಅಷ್ಟೆ.

೫. ಗಣಪತಿ ಹೆಗಡೆ – 'ಮುಂಡಿಗೆಗಳು'

ಗಣಪತಿ ಸರ್, ನಿಮ್ಮ ಮುಂಡಿಗೆಗಳನ್ನು ಅರ್ಥ ಮಾಡಿಕೊಳ್ಳುವುದು ಮಂಡಿಗೆ ಸವಿದಷ್ಟು ಸುಲಭವಲ್ಲ. ಆದರೆ ಅರ್ಥವಾದಾಗ ಮಂಡಿಗೆ ತಿಂದಷ್ಟೇ ಸವಿಯಾಗಿದೆ. ನಾನು ಇದುವರೆಗೂ ತಿಳಿದಿಲ್ಲದ ಅನೇಕ ವಿಷಯಗಳನ್ನು ನಿಮ್ಮ ಲೇಖನ ತಿಳಿಸಿತು. ಧನ್ಯವಾದಗಳು. ರತ್ನ ಮೂರ್ತಿಯವರು ಬರೆದಿರುವ ಮುಂಡಿಗೆಗಳ ಜ್ಞಾಪಕ ಬಂದಿತು. ಈಗ ನಿಮ್ಮ ಸರದಿ. ಸೊಗಸಾಗಿದೆ. ಗೂಡಾರ್ಥಗಳು ಕೆಲವೊಮ್ಮೆ ಕಬ್ಬಿಣದ ಕಡಲೆ ಎನಿಸಿದರೂ ಅಲ್ಲಿರುವ ಚಾತುರ್ಯದ ಉತ್ತರಗಳು ಬೆರಗು ಹುಟ್ಟಿಸುವುದು.

೬. ಮನೋಹರ ಗೋಖಲೆ – 'ಕನ್ನಡಿಗನೊಬ್ಬನ ಕಳವಳ'

ಕನ್ನಡ ಭಾಷೆ ಅನ್ನದ ಭಾಷೆಯಾಗದ ಹೊರತು ಕನ್ನಡಿಗರ ಭಾಷೆ, ಸಂಸ್ಕೃತಿಯ, ಅಭಿವೃದ್ಧಿ ಅಸಾಧ್ಯ. ಭಾಷೆಯ ಬೆಳವಣಿಗೆ ಅಳಿಯದೆ ಉಳಿಯಲು ಮಾಡಿದ ಹೋರಾಟಗಳ ಬಗ್ಗೆ ತಿಳಿಸುತ್ತಾ, ಇಂಗ್ಲಿಷ್ ಭಾಷೆಯ ಮೋಹದಿಂದಾಗಿ ಶಾಲೆಗಳಲ್ಲಿ ಕನ್ನಡ ಅವನತಿಯ ಹಾದಿ ಹಿಡಿಯಬಾರದು. ಇದಕ್ಕೆ ಪೂರಕವಾಗಿ ಕೆಲಸ ಮಾಡಬೇಕಾದ ಸಾಮಾಜಿಕ ಕಳಕಳಿ, ರಾಜಕೀಯ ಇಚ್ಛಾಶಕ್ತಿ ಇದ್ದಾಗ ಮಾತ್ರ ಕನ್ನಡ ಕರ್ನಾಟಕದ ಮನೆ ದೀಪವಾಗಬಲ್ಲದು ಎನ್ನುತ್ತಾರೆ.

೭. ಗೋಪಿನಾಥ್ – 'ಏನು ಪುಕ್ಕರಪ್ಪ ನೀವು'

ಗೋಪಿನಾಥ್ ಕನಸಿನಲ್ಲೇ ಪುಕ್ಕಲತನವನ್ನು ತೋರಿಸಿದ್ದು ಒಳ್ಳೆಯದಾಯಿತು. ಅವರ ಲೇಖನದ ಶೀರ್ಷಿಕೆ ನೋಡಿ ಮೊದಲಿಗೆ 'ಏನು ಪುಕ್ಕರಪ್ಪ ನೀವು' ಎಂದು ನನಗೇ ಕೇಳುತ್ತಿದ್ದಾರೇನೋ ಎಂದುಕೊಂಡು ಗಾಬರಿಯಾಗಿ ಓದಿದೆ. ಅವರ ನೆನಪಿನಾಳದಲ್ಲಿ

ಉಳಿದ ಅನೇಕ ಮಧುರ ಸ್ಮೃತಿಗಳನ್ನು ಆಗಾಗ ಹೀಗೆ ಲೇಖನದ ರೂಪದಲ್ಲಿ ತರುತ್ತಿರುತ್ತಾರೆ. ಈಗಂತೂ ಬೆಂಗಳೂರಿನಲ್ಲಿ ಸ್ಮಶಾನದಲ್ಲೂ ಜಾಗವಿಲ್ಲ ಎನ್ನುವಂತಾಗಿದೆ. ಇಲ್ಲಿ ಮನೆ ಕಟ್ಟಿಕೊಂಡವರಿಗಂತೂ ದೆವ್ವಕ್ಕಿಂತ ಸರ್ಕಾರದ ಭೀತಿಯೇ ಜಾಸ್ತಿ. ಈಗಂತೂ ದೆವ್ವಕ್ಕಿಂತ ಕಳ್ಳರ ಭಯವೇ ಜಾಸ್ತಿಯಾಗಿದೆ ಎನ್ನಬಹುದು.

೮. ಟಿ.ಆರ್. ಉಷಾರಾಣಿ – 'ಟಾಮಾ ಶಾಸ್ತ್ರಿ'

ಇವರ ಲೇಖನ ಓದಿ ಮತ್ತೊಮ್ಮೆ ಹೀಗೂ ಉಂಟೆ ಎನ್ನುವ ಉದ್ಗಾರ ಬಂದರೆ ಆಶ್ಚರ್ಯವಿಲ್ಲ. ಪ್ರತಿ ಸಾಲಿನಲ್ಲೂ ನಗೆಯುಕ್ಕಿಸುವ ನಾಯಿಯೊಂದರ ಹರಿಕಥೆ(ಕ್ಷಮಿಸಿ), ಟಾಮಾ ಶಾಸ್ತ್ರಿಯದು. ಕೂಡಲೇ ನಮ್ಮನೆ ಕಾವಲುಗಾರ ಟಾಮಿಯ, ಮಿಸ್ಟರ್ ಟೊಮ್‌ನ ನೆನಪಾಯಿತು. ಪಂಕಜಮ್ಮನವರ ಮಡಿವಂತಿಕೆಯನ್ನು ಸೋಲಿಸಿದ ಆ ಪುಟ್ಟ ಟಾಮಾ ಶಾಸ್ತ್ರಿಯನ್ನು ಅದೆಷ್ಟು ಪ್ರೀತಿಯಿಂದ ಅವರು ತಮ್ಮದೇ ಮಗನಂತೆ ಆದರಿಸುತ್ತಾರೆ ನೋಡಿ. ಪ್ರೀತಿಯ ಮುಂದೆ ಎಲ್ಲಾ ಮಡಿವಂತಿಕೆಯ ಬೌಂಡರಿಗಳು ಮಾಯವಾಗಿಬಿಡುತ್ತದೆ.

೯. ಸಿ.ಆರ್. ಕಮಲಾಕ್ಷಿ. – 'ಮಹಿಳಾ ಸಾಹಿತ್ಯ : ಅಂದು–ಇಂದು'

ಒಂದು ಪ್ರಬುದ್ಧ ಲೇಖನ, 'ಕನ್ನಡ ಸಾಹಿತ್ಯಕ್ಕೆ ಮಹಿಳೆಯ ಕೊಡುಗೆ' .ಮಹಿಳೆಯರ ಸಾಹಿತ್ಯ ಅಡುಗೆಮನೆ ಸಾಹಿತ್ಯ ಎಂದವರಿಗೆ ಮಹಿಳೆಯರಿಬ್ಬರು ಬೂಕರ್ ಪ್ರಶಸ್ತಿಯನ್ನು ಹಂಚಿಕೊಂಡದ್ದು ನೋಡಿದ ಮೇಲೆ ಅವರ ಅಭಿಪ್ರಾಯ ಬದಲಾಗಬಹುದು. ಅವಕಾಶ, ಅನುಭವಗಳ ವಿಸ್ತಾರ, ಪುರುಷರೊಂದಿಗೆ ಸಮಾನ ಸ್ಪರ್ಧೆಗೆ ಅವಕಾಶ ಸಿಕ್ಕಾಗ ಮಾತ್ರ ಪ್ರತಿಭೆಗಳ ಅನಾವರಣ ಸಾಧ್ಯ. ಇಂದು ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಯಲ್ಲಿ ಗಮನಾರ್ಹ ಏರಿಕೆಯಾಗಿದೆ. ಕಮಲಾಕ್ಷಿಯವರು ವಚನ ಸಾಹಿತ್ಯ, ಜಾನಪದ ಸಾಹಿತ್ಯಗಳನ್ನು ಸೇರಿಸಿದಂತೆ ಕ್ರಿಸ್ತ ಶಕ 610ರಿಂದ ಆರಂಭಿಸಿ ತ್ರಿವೇಣಿಯವರಿಗೆ ಸೋದಾಹರಣೆಯೊಂದಿಗೆ ವಿವರಿಸಿದ್ದಾರೆ. ಉತ್ತಮ ಲೇಖನ.

೧೦. ಜಿ.ವಿ.ನಿರ್ಮಲ – 'ಬಾಗಿಲು ತೆಗೆಯೇ ಸೇಸಮ್ಮ'

ಮನೆಗೆ ಎಷ್ಟೋ ಬಾಗಿಲುಗಳಿರಬಹುದು, ಆದರೆ ಅವುಗಳಿಗೆಲ್ಲ ಬೀಗ ಇರಬೇಕು ಎಂದೇನಿಲ್ಲ. ಆದರೆ ಮುಂಬಾಗಿಲಿಗೆ ಮಾತ್ರ ಭದ್ರವಾದ ಬೀಗ ಬೇಕೇಬೇಕು ಮತ್ತು ಆ ಬೀಗದಕ್ಕೆ ಯಾವಾಗಲೂ ಸುರಕ್ಷಿತವಾಗಿ ನಿಮ್ಮ ಬಳಿ ಇರಬೇಕು. ಒಂದು ಪಕ್ಷ ಬೀಗದಕ್ಕೆ ಕಳೆದರೆ 'ಬಾಗಿಲು ತೆಗೆಯೆ ಸೇಸಮ್ಮ' ಅನ್ನೋ ಕಾಲ ಈಗಿನ ಎ.ಐ.ನಿಂದಾಗಿ ಬಂದರೂ ಬರಬಹುದು. ನಮ್ಮ ಮನೆಯಲ್ಲಿ ಬೀಗದಕ್ಕೆಗಳ ಒಂದು ದೊಡ್ಡ ಚೀಲವೇ ಇದೆ. ನಾವು ಬಿಟ್ಟುಬಂದ ಅನೇಕ ಊರುಗಳ ಅನೇಕ ಮನೆಗಳ ಎಕ್ಸ್ಟ್ರಾ ನಕಲಿ ಕೀಲಿಗಳಿವು. ಬಿಸಾಡಲೂ ಆಗದ ಉಳಿಸಿಕೊಂಡಿದ್ದೇವೆ. ನಕಲಿ ಕೀಲಿಗಳನ್ನು ಮಾಡಿಸುವುದು ಕೂಡ ದುಬಾರಿಯೇ ಈಗ. ಆದ್ದರಿಂದ ಬೀಗದಕ್ಕೆ ಹುಷಾರು ಎನ್ನುತ್ತಾ ತಮ್ಮದೇ ರಸವತ್ತಾದ ಅನುಭವಗಳ ಉದಾಹರಣೆಗಳನ್ನು ಬಿಡಿಸಿ ಹೇಳುತ್ತಾರೆ. ಆಶ್ಚರ್ಯವೆಂದರೆ ಎಷ್ಟೇ ದೊಡ್ಡ ಬಾಗಿಲಾದರೂ ಅದಕ್ಕೊಂದು ಸಣ್ಣ ಬೀಗದಕ್ಕೆ ಇದ್ದರೆ ಸಾಕಲ್ಲವೇ. ಮನಸ್ಸಿಗೂ, ಹೃದಯಕ್ಕೂ ಕೀಲಿ ಕೈಗಳಿವೆ. ಅದರ ನಿರ್ವಹಣೆಯನ್ನು ಸರಿಯಾಗಿ ಜಾಗ್ರತೆಯಿಂದ ಮಾಡಬೇಕು ಅಷ್ಟೇ.

೧೧. ಸೀತಾರಾಮ ಕಟ್ಟಿ (ಜಾನಕಿರಾಮ) – 'ಯಾಯಾವರ'

'ಯಾಯಾವರ' ಅಂದರೆ ಅಲೆಮಾರಿ ಎಂದು ಅವರಿಂದಲೇ ತಿಳಿದುಕೊಂಡೆ. ಕವನದ ಐದು ಚರಣಗಳಲ್ಲಿ ಜೀವನದ ಸಾರ ಸರ್ವಸ್ವವನ್ನೇ ತಿಳಿಸಬಲ್ಲ ಚಮತ್ಕಾರ ಕಾಣುತ್ತದೆ. ನಾವೆಲ್ಲ ಒಂದು ರೀತಿಯ ಅಲೆಮಾರಿಗಳೇ, ಭೂಮಿ, ಸೂರ್ಯ, ಚಂದ್ರ, ನದಿ, ಬೆಟ್ಟ ಗುಡ್ಡಗಳ ಮಧ್ಯೆ ಸದಾ ಚಲಿಸುತ್ತಲೇ ಇರುವ ಕಾಲಚಕ್ರದೊಳಗೆ ಎಲ್ಲಿಯೂ ನಿಲ್ಲದೆ, ಯಾವುದೂ ನಮ್ಮದೆನ್ನದೆ ಚಿರತತ್ವ, ಪರತತ್ವಗಳ ವ್ಯತ್ಯಾಸಗಳನ್ನು ಅರಿತು ಈ ಮನುಷ್ಯ ಜೀವನದ ಸಾರ್ಥಕತೆಯನ್ನು ಪಡೆಯುವುದೇ ಕವನದ ಆಶಯವಾಗಿದೆ. ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಠಿಣವೆನಿಸಿದರೂ ಒಳ ಹೊಕ್ಕಾಗ ಸತ್ಯದರ್ಶನದ ಮೆಟ್ಟಿಲುಗಳು ಕಂಡವು. ಧನ್ಯವಾದಗಳು.

೧೨. ವಿಠಲ ಇಜೇರಿ – 'ಗಾಜಿನ ತಾರಸಿ ಕೋಣೆ' (ಓ ಹೆನ್ರಿಯ ಕತೆ)

'ವೀ ಆರ್ ಆಲ್ ಸ್ಟೋರೀಸ್ ಇನ್ ದ ಎಂಡ್' ಎಂಬ ಮ್ಯಾಕ್ಸ್ಮಿತ್ ಅವರ ಮಾತನ್ನು ಉದಾಹರಿಸುತ್ತ ಕಥೆಗಳ ಹುಟ್ಟು, ಬೆಳವಣಿಗೆ, ಅರ್ಥ, ಸಾರ್ಥಕತೆ ಹಾಗೂ ಅವಶ್ಯಕತೆಗಳ ಕುರಿತು ಶ್ರೀ ಇಜೇರಿಯವರು ೧೯೦೬ರಲ್ಲಿ ರಚಿತವಾದ ಓ ಹೆನ್ರಿಯ 'ಗಾಜಿನ ತಾರಸಿ ಕೋಣೆ'ಯ ಕಥಾನಾಯಕಿ ಲೆಸೆನ್ ಹೇಗೆ ತನ್ನ ಕೋಣೆಯ ಗಾಜಿನ ತಾರಸಿಯ ಮೂಲಕ ನಕ್ಷತ್ರ ನೋಡುತ್ತಾ ಪ್ರಜ್ಞೆ ತಪ್ಪುತ್ತಾಳೆ ಹಾಗೂ ಅಲ್ಲಿ ಅವಳು ಹೆಸರಿಸಿದ ನಕ್ಷತ್ರದ ಹೆಸರು ಹಾಗೂ ಅವಳನ್ನು ಬದುಕಿಸಿದ ವೈದ್ಯನ ಹೆಸರು ಕಾಕತಾಳೀಯವಾಗಿ ಒಂದೇ ಆಗಿರುತ್ತದೆ ಎಂಬ ಒಂದು ದೃಷ್ಟಾಂತವನ್ನು ಕತೆಯ ರೂಪದಲ್ಲಿ ಹೆಣೆದ ಓ ಹೆನ್ರಿ ಹಾಗೂ ಅದನ್ನು ಪ್ರಸ್ತುತಪಡಿಸಿದ ಇಜೇರಿಯವರಿಗೆ ವಂದನೆಗಳು.

೧೩. ಶೀಲಾ ಅರಕಲಗೂಡು – 'ತಾರಾಳ ಮುಡಿಯಲ್ಲಿ ತಾರೆ'

'ಮುದ್ದು ತಾರಳ ಮುಡಿಯಲ್ಲಿ ತಾರೆ' ಒಂದು ರಮ್ಯ ಕಲ್ಪನೆ ನೀಲಿ ಗಗನದಲ್ಲಿ ಮೋಡಗಳ ಮೇಲೆ ತೇಲಾಡುವ ಆಸೆ ಯಾರಿಗಿಲ್ಲ. ಪುಟ್ಟ ತಾರಾಳಗಿರಲಿ, ಇತ್ತೀಚೆಗೆ ಶಿರಡಿಗೆ ವಿಮಾನದಲ್ಲಿ ಮಧ್ಯಾಹ್ನ ಹೋಗುವಾಗ ಕಿಟಕಿ ಪಕ್ಕದಲ್ಲಿ ಕೂತಿದ್ದ ನನಗೆ ಅರಳೆ ರಾಶಿಗಳಂತೆ ಎಲ್ಲೆಲ್ಲೂ ತುಂಬಿಕೊಂಡಿದ್ದ ಬಿಳಿ ಮೋಡಗಳ ಅದ್ಭುತ ದೃಶ್ಯ ಕಂಡು ಮೈಮರೆತಿದ್ದೆ. ತಾರಾ ಹಕ್ಕಿಯ ಜೊತೆ ಹೋದ ಹಾಗೆ ನಾನು ಲೋಕದ ಲೋಹದ ಹಕ್ಕಿಯ ಹೊಟ್ಟೆಯಲ್ಲಿ ಕುಳಿತು ಮೋಡಗಳ ಮಧ್ಯೆ ಹೋಗುತ್ತಿದ್ದಾಗ ಅದನ್ನು ಕಣ್ಣು, ಕ್ಯಾಮೆರಾ ಎರಡು ಸೆರೆಹಿಡಿದುಬಿಟ್ಟಿದ್ದವು. ಸಮುದ್ರ ತೀರದ ಮನೆ ಎಷ್ಟು ಆಕರ್ಷಕವೋ ಅಷ್ಟೇ ಅಪಾಯವೂ ಆಗಬಲ್ಲದು. ಆದರೂ ಕೈಗೆಟುಕದ ನಕ್ಷತ್ರಕ್ಕಿಂತ ಕೈಗೆಟುಕಿದ ಕಡಲ ತೀರದ ಆಕರ್ಷಣೆಗೆ ತಾರಾ ಒಳಗಾದ ಕಥೆ ಕುತೂಹಲದಿಂದ ಕೊನೆಯ ತನಕ ನಮ್ಮನ್ನು ಹಿಡಿದಿಡುತ್ತದೆ.

೧೪. ಗಿರಿಜಾ ರಾಜ್ – 'ಅನಾವರಣ'

ಸೂಕ್ತ ಮನಸ್ಸಿನ ಅತೃಪ್ತಿ, ಆಕ್ರೋಶಗಳು, ಭುಗಿಲೆದ್ದಾಗ ಆ ಬೆಂಕಿಯ ಕೆನ್ನಾಲಿಗೆ ಯಾರನ್ನೂ ಸುಡದೆ ಕೆಲವೊಮ್ಮೆ ತನ್ನನ್ನೇ ಸುಟ್ಟು ಕೊಳ್ಳುತ್ತಾ ಹೋಗುತ್ತದೆ. ಶೋಷಿತ ಹೆಣ್ಣಿನ ಸ್ಥಿತಿಗೆ ಆಗ ಅವಳನ್ನು ಸಮಾಜ ಹುಚ್ಚಿಯ ಪಟ್ಟ ಕಟ್ಟುತ್ತದೆ. ಅನಾವರಣದಲ್ಲಿ ಗೌರವಿಯ ಸ್ಥಿತಿಯು ಆ ಹುಚ್ಚಿಯಂತಿದ್ದರೂ ಅವಳು ಎಲ್ಲವನ್ನೂ ನುಂಗಿ ಸಭ್ಯತೆಯ ಮುಖವಾಡದಲ್ಲಿ ವಿಷಮ ದಾಂಪತ್ಯದ ಬಲಿಪಶುವಾಗಿ ಉಳಿಯುತ್ತಾಳೆ. ಅದೆಷ್ಟು ಹೆಣ್ಣು ಮಕ್ಕಳ ಬದುಕು ಹೀಗೆ ಅನಾವರಣಗೊಳ್ಳದೆ ಒಳಗೇ ಸುಡುವ ಬೆಂಕಿಯಾಗಿ ಉಳಿದುಬಿಡುತ್ತದೆ ಹಾಗೂ ಇಂತಹ ಸ್ಥಿತಿಯಲ್ಲಿರುವ ಹೆಣ್ಣುಮಕ್ಕಳಿಗೆ ಯಾರೂ ಸಹಾಯ ಮಾಡಲು ಮುಂದಾಗದಂತಹ ಕಲಿಯುಗದ ಪಾಡು ಇಲ್ಲಿ ಅನಾವರಣವಾಗುತ್ತದೆ. ಗೌರವಿಯ ಪಾತ್ರ ಶೋಷಿತಳಾಗೇ ಬದುಕುವ ಹೆಣ್ಣಿಗೆ ಕನ್ನಡಿ ಹಿಡಿದಂತಿದೆ. ಒಳ್ಳೆಯ ಕಥೆ.

೧೫. ರೇಣುಕಾ ದೇಸಾಯಿ – ನಮ್ಮ ನಾಡು ಹೆಮ್ಮೆಯ ಬೀಡು

ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಒಂದು ಪಕ್ಷಿನೋಟ ಇಲ್ಲಿದೆ. ಕರ್ನಾಟಕದಲ್ಲಿರುವ ಅನ್ಯ ಭಾಷಿಗರು ಕನ್ನಡವನ್ನು ಎಷ್ಟು ಬಳಸಿಕೊಳ್ಳುತ್ತಿದ್ದಾರೆ ಎಂಬ ಸಮೀಕ್ಷೆ ಮಾಡಿದರೆ ಖಂಡಿತ ನಿರಾಸೆಯಾಗುತ್ತದೆ. 'ಕನ್ನಡಮ್ಮನ ಮನೆಗೆ ಇರಲಿ ಒಂದೇ ಬಾಗಿಲು. ಅನ್ಯ ಭಾಷೆಗಳೆಲ್ಲವೂ ಆಗಲಿ ಕಿಟಕಿಗಳು. ಬಿರುಗಾಳಿ ಬಂದಾಗ ಕಿಟಕಿಗಳನ್ನು ಹಾಕಿದರೆ ಸಾಕಲ್ಲವೇ? ನಮ್ಮ ಭಾಷೆಯನ್ನು ನಾವು ಪ್ರೀತಿಸೋಣ, ಉಳಿಸೋಣ, ಬೆಳೆಸೋಣ ಎನ್ನುವ ಅವರ ಕಾಳಜಿಗೆ ನನ್ನದೂ ಸಹಮತವಿದೆ.

೧೬. ಸುವರ್ಣಲಕ್ಷ್ಮಿ – ಮನೆ– ಕಲ್ಲು, ಇಟ್ಟಿಗೆ, ಕಬ್ಬಿಣ, ಮಣ್ಣು, ವುಡ್ ವರ್ಕ್ ಇಷ್ಟೇನಾ

ಅತಿಥಿ ಸತ್ಕಾರಕ್ಕೆ ಭಾರತೀಯರು ಹೆಸರಾದವರು ಎಂದು ಹೆಚ್ಚಿನವರ ನಂಬಿಕೆ. ಈ ವೇಗದ ಬದುಕಿನಲ್ಲಿ ಅತಿಥಿಗಳನ್ನು ಮನೆಗೆ ಕರೆಯಲು ಸಮಯ, ಸಮಾಧಾನ ಸಜ್ಜನಿಕೆಗಳನ್ನು ಜನ ಕಳೆದುಕೊಳ್ಳತೊಡಗಿದ್ದಾರೆ ಎಂಬುದನ್ನು ಅನೇಕ ಉದಾಹರಣೆಗಳ

ಸಮೇತ ಸುವರ್ಣಲಕ್ಷ್ಮಿಯವರು ತಮ್ಮ ಲೇಖನದಲ್ಲಿ ವಿವರವಾಗಿ ತಿಳಿಸುತ್ತಾ ಹೋಗುತ್ತಾರೆ. ಪಾಶ್ಚಾತ್ಯರ ಪ್ರಭಾವ ನಮ್ಮ ನಡೆ–ನುಡಿ, ಆಚರಣೆ ಎಲ್ಲವನ್ನೂ ನುಂಗಿಹಾಕುತ್ತಿವೆಯೇ? ಉದಾಹರಣೆಗೆ ಅಮೆರಿಕದಲ್ಲಿ ಪಕ್ಕದ ಮನೆಗೆ ಹೋಗಬೇಕಾದರೂ ಪೂರ್ವಭಾವಿಯಾಗಿ ಸಮಯವನ್ನು ಗೊತ್ತುಪಡಿಸಿಕೊಳ್ಳಬೇಕು. ಕೊನೆಗೆ ತಂದೆತಾಯಿಗಳು ಮಕ್ಕಳನ್ನು ಭೇಟಿ ಮಾಡಲು ಸಮಯ ಕೇಳಬೇಕು. ದಿಡೀರ್ ಎಂದು ಹೋಗಲು ಸಾಧ್ಯವಾಗದಿದ್ದರೆ ಅದಕ್ಕಾಗಿ ಮಕ್ಕಳನ್ನು ನಿಂದಿಸಲಾಗದು. .ಕಾಲ ಬದಲಾಗಿದೆ.

೧೭. ಮಹಾಬಲ – ಕಿರಿದೇವರಿಗೆ ಮರದ ಜಾಗಟೆ

ಸಮಾರಂಭಕ್ಕೆ ಅತಿಥಿಗಳನ್ನು ಅದರಲ್ಲೂ ಗಣ್ಯರನ್ನು ಆಹ್ವಾನಿಸಿದರೆ ಕಾರಿಗೆ ಸ್ಪೇರ್ ಪಾರ್ಟ್ಸ್ ಇಟ್ಟುಕೊಳ್ಳುವಂತೆ ಬದಲಿ ಆಗಿ ಇನ್ನೊಬ್ಬರನ್ನು ಇಟ್ಟುಕೊಂಡಾಗ ಒಬ್ಬರು ಕೈಕೊಟ್ಟರೆ ಇನ್ನೊಬ್ಬರಿದ್ದರೆ ಮರ್ಯಾದೆ ಉಳಿಯಲು ಹಾಗೂ ಹಣ ಕೂಡ ಉಳಿಸಲು ಸಾಧ್ಯ ಎಂದು ಮಹಾಬಲ ಅವರ ಈ ನಗೆ ಲೇಖನ ನಿರೂಪಿಸಿದೆ. ಚೀಫ್ ಗೆಸ್ಟ್ ಬದಲು ಚೀಪ್ ಗೆಸ್ಟಾಗಿ ಹೋಗಲು ಒಂದಲ್ಲ ಒಂದು ಅವಕಾಶ ಯಾರಿಗಾದರೂ ಬಂದೇ ಬರಬಹುದು. ಒಪ್ಪಿಕೊಳ್ಳುತ್ತೀರೋ ಇಲ್ಲವೋ ಎಂದು ಚಂದ್ರಪ್ಪನನ್ನು ನೋಡಿ ತೀರ್ಮಾನಿಸಿ. ಏನಂತೀರಾ?

ಇಂದಿನ ಎಲ್ಲ ಪ್ರಸ್ತುತಿಗಳನ್ನು ಕೇಳಿ ನನ್ನ ಅಭಿಪ್ರಾಯಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಅವಕಾಶವನ್ನು ನನಗೆ ನೀಡಿದ ವೇದಿಕೆಯ ಸಂಚಾಲಕರಿಗೆ ನನ್ನ ಅನಂತ ನಮನಗಳು ಹಾಗೂ ನನ್ನ ಪರಿಚಯವನ್ನು ಮಾಡಿಕೊಟ್ಟ ಶ್ರೀಮತಿ ಟಿ.ಆರ್ ಉಷಾರಾಣಿ ಅವರಿಗೂ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

**ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, ‘ತವರು’, 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com**

**ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com**

**ಸಾಹಿತ್ಯ ದಾಸೋಹ 243 ನಡೆದ ದಿನಾಂಕ: 08 ಅಕ್ಟೋಬರ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 20 ಡಿಸೆಂಬರ್ 2025**

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)